


# ಸವದತ್ತಿಯಲ್ಲಮ್ಮ

ಡಾ. ಕಮಲಾ ಹೆಮ್ಮಿಗೆ



ಕರ್ನಾಟಕ ಜಾತ್ರೆಗಳು - ೨

ಪ್ರಧಾನ ಸಂಪಾದಕರು
ಡಾ. ಜೀ.ಶಂ. ಪರಮಶಿವಯ್ಯ

ಸಂಪಾದಕರು
ಹ.ಕ. ರಾಜೇಗೌಡ
ಡಾ. ಡಿ.ಕೆ. ರಾಜೇಂದ್ರ

# ಸವದತ್ತಿ ಎಲ್ಲಮ್ಮ

# ಸವದತ್ತಿ ಎಲ್ಲಮ್ಮ

ಲೇಖಕರು

ಡಾ. ಕಮಲಾ ಹೆಮ್ಮಿಗೆ

ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ

೧೪/೩, ನೃಪತುಂಗ ರಸ್ತೆ

ಬೆಂಗಳೂರು - ೫೬೦ ೦೦೨

SAVADATTI YELLAMMA - A writeup on the Car Festival of goddess Savadatti Yellamma by Dr. Kamala Hemmige Published by Janapada Yakshagana Academy No. 14/3, Nrupathunga Road, Bangalore - 560 002 Pp xii +47 Price Rs. 10/- First Edition 1995.

© ಲೇಖಕರು

ಬೆಲೆ : ಹತ್ತುರೂಪಾಯಿ

ಮುದ್ರಕರು : ಮಂಡ್ಯ ಕಂಪ್ಯೂಟರ್ ಸೆಂಟರ್
ತಾವರೆಗೆರೆ, ಮಂಡ್ಯ

## ಪ್ರಧಾನ ಸಂಪಾದಕರ ಮಾತು

ಕರ್ನಾಟಕ ಜಾನಪದ ಅಕಾಡಮಿಯು ನಮ್ಮ ಸಂಸ್ಕೃತಿ ಮೂಲವಾದ ಅನೇಕ ವಿಷಯಗಳನ್ನು ಕುರಿತಂತೆ ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಲು ನಿರ್ಧರಿಸಿತು. ಹೀಗೆ ಆರಂಭಿಸಿದ ಅನೇಕ ಮಾಲೆಗಳಲ್ಲಿ ಕರ್ನಾಟಕ ಜಾತ್ರೆಗಳ ಮಾಲೆಯೂ ಒಂದು.

ಕನ್ನಡ ನಾಡಿನಾದ್ಯಂತ ಪ್ರತಿಯೊಂದು ಹಳ್ಳಿಯಲ್ಲಿಯೂ ಅದರದೇ ಆದ ಗ್ರಾಮದೇವತೆಯ ದೇವಾಲಯವಿರುವುದನ್ನು ಕಾಣಬಹುದು. ಈ ದೇವತೆಗಳ ಹುಟ್ಟು ಬೆಳವಣಿಗೆ, ಜನಾಕರ್ಷಣೆ, ಹಬ್ಬ, ಜಾತ್ರೆ, ಆಚರಣೆ, ವಿಧಿ, ನಿಷೇದ ಇವೆಲ್ಲ ವೈವಿಧ್ಯ ಪೂರ್ಣವಾಗಿದ್ದು ಅಭ್ಯಾಸ ಯೋಗ್ಯವಾಗಿವೆ. ಇವುಗಳ ಅಧ್ಯಯನ ನಮ್ಮ ಗ್ರಾಮ ಜೀವನದ ವೈವಿಧ್ಯತೆಯನ್ನು ತನ್ನಲ್ಲಿ ಅಡಗಿಸಿಕೊಂಡಿರುವುದರ ಜೊತೆಗೆ ಮಾನವ ಶಾಸ್ತ್ರ, ಸಂಸ್ಕೃತಿ ಅಧ್ಯಯನ ಜಾನಪದ ಅಧ್ಯಯನ ಮತ್ತು ಇತಿಹಾಸಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಈ ಹಿನ್ನೆಲೆಯಲ್ಲಿ ಅಕಾಡಮಿ ಕರ್ನಾಟಕ ಗ್ರಾಮದೇವತೆಗಳು ಮತ್ತು ಅವುಗಳ ಜಾತ್ರೆಗಳನ್ನು ಕುರಿತಂತೆ ಹಸ್ತಪ್ರತಿಗಳಿಗೆ ಕರೆನೀಡಿತು. ನಮ್ಮ ಕರೆಗೆ ಓಗೊಟ್ಟು ಹತ್ತು ಜನ ಲೇಖಕರು ಹಸ್ತಪ್ರತಿಗಳನ್ನು ಕಳಿಸಿಕೊಟ್ಟರು.

ಅಕಾಡಮಿಯು ಪ್ರಕಟನೆಗೆ ತೆಗೆದುಕೊಂಡ ಪ್ರತಿಯೊಂದು ಮಾಲೆಗೂ ಬಂದ ಹಸ್ತಪ್ರತಿಗಳನ್ನು ಪರಿಶೀಲಿಸಿ, ಸಂಪಾದಿಸಿ ಮುದ್ರಣಕ್ಕೆ ಅಣಿ ಮಾಡಲು ಇಬ್ಬರು ಸಂಪಾದಕರನ್ನು ನೇಮಿಸಲಾಯಿತು. ಜಾತ್ರೆಯ ಮಾಲೆಗೆ ನಾಡಿನ ಪ್ರಸಿದ್ಧ ಜಾನಪದ ವಿದ್ವಾಂಸರುಗಳಾದ ಶ್ರೀ ಹ. ಕ. ರಾಜೇಗೌಡರು ಹಾಗೂ ಡಾ. ಡಿ. ಕೆ. ರಾಜೇಂದ್ರ ಅವರನ್ನು ಸಂಪಾದಕರಾಗಿ ಆಯ್ಕೆ ಮಾಡಲಾಯಿತು. ಈ ಮಿತ್ರರಿಬ್ಬರೂ ತಮ್ಮ ಪಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾರಷ್ಟೇ ಅಲ್ಲ ಜಾತ್ರೆ ಮಾಲೆಯ ಹತ್ತು ಗ್ರಂಥಗಳು ಹೊರಬರಲು ಕಾರಣರಾಗಿದ್ದಾರೆ. ನಮ್ಮ ಗ್ರಾಮ ಸಂಸ್ಕೃತಿಯನ್ನು ಉಳಿಸುವ ಅಕಾಡಮಿಯ ಈ ಯೋಜನೆಯು ಯಶಸ್ವಿಯಾಗಲು ಕಾರಣರಾದ ಈ ಇಬ್ಬರು ಹಿರಿಯ ವಿದ್ವಾಂಸರನ್ನು ಅಕಾಡಮಿಯ ಪರವಾಗಿ ವಂದಿಸುತ್ತೇನೆ. ಜಾನಪದ ಅಧ್ಯಯನ ಮತ್ತು ಸಂಶೋಧನೆಯಲ್ಲಿ ನಿರತರಾಗಿರುವ ಈ ಮಾಲೆಯ ಗ್ರಂಥಕರ್ತರಿಗೂ ಇವುಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಮಂಡ್ಯ ಕಂಪ್ಯೂಟರ್ ಸೆಂಟರ್ ಮುದ್ರಣಾಲಯದವರಿಗೂ ಅಕಾಡಮಿಯ ಪರವಾಗಿ ವಂದನೆಗಳು ಸಲ್ಲುತ್ತವೆ.

ಡಾ. ಜೀ. ಶಂ. ಪರಮಶಿವಯ್ಯ
ಅಧ್ಯಕ್ಷ ಹಾಗು ಪ್ರಧಾನ ಸಂಪಾದಕ

# ಸಂಪಾದಕರ ಮಾತು

ಜಾನಪದದ ಆದಿ ಹೇಗೆ ನಿಗೂಢವೋ, ಅಂತ್ಯವೂ ಹಾಗೇ ನಿಗೂಢ. ಹುಡುಕಿದಷ್ಟೂ, ತಡಕಿದಷ್ಟೂ, ಕೊನೆಯಿಲ್ಲದ ಅದರ ಎಳೆಗಳು ನಮ್ಮನ್ನು ಆ ನಿಗೂಢದತ್ತಲೇ ಕೊಂಡೊಯ್ಯುತ್ತವೆ. ಹೊಸ ಹೊಸ ಬೆರಗುಗಳನ್ನು ತೋರುತ್ತ ಬಿಚ್ಚಿಕೊಳ್ಳುವ ಅದರ ಪದರಗಳು, ನಮ್ಮ ಪ್ರಾಚೀನ ಸಂಸ್ಕೃತಿಯ ಅದ್ಭುತಗಳನ್ನು ಒಂದೊಂದಾಗಿ ಕಣ್ಣಮುಂದೆ ತರುತ್ತವೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನ ವೈಜ್ಞಾನಿಕ ತಳಹದಿಯ ಮೇಲೆ ತನ್ನ ಕಾರ್ಯವನ್ನು ಆರಂಭಿಸಿ ಕಾಲು ಶತಮಾನವನ್ನು ಸಮೀಪಿಸುತ್ತಿದೆ. ಅಂದಿನಿಂದಲೂ ಜಾನಪದ ಸಂಬಂಧವಾದ ಚಟುವಟಿಕೆಗಳು ಬೇರೊಂದು ರೀತಿಯಲ್ಲಿಯೇ ಆರಂಭಗೊಂಡು, ಗಮನಾರ್ಹ ಸಾಧನೆಯನ್ನೇ ಮಾಡುತ್ತ, ತೋರುತ್ತ ಬಂದಿದೆ. ಸಂಗ್ರಹಣೆ, ಸಂಶೋಧನೆ, ಸಂಪಾದನೆಗಳೇ ಅಲ್ಲದೆ, ಅವನ್ನು ಕುರಿತು ತಲಸ್ಪರ್ಶಿಯಾದ ವಿಮರ್ಶೆ ಹಾಗೂ ಅಧ್ಯಯನ ಕೂಡ, ನಮ್ಮ ಸಂಸ್ಕೃತಿಯ ಮಹತ್ವವನ್ನೂ ಅದರ ಹಲವು ಅಚ್ಚರಿಗಳನ್ನೂ ವಿವರಿಸುವಲ್ಲಿ ಯಶಸ್ವಿಯಾಗಿದೆ. ಸಾಹಿತ್ಯಕ್ಕಷ್ಟೇ ಕಟ್ಟು ಬೀಳದೆ, ಜಾನಪದದ ಏನೆಲ್ಲವನ್ನೂ ಕೈಗೆತ್ತಿಕೊಂಡು ಶೋಧಿಸಿ, ಅವುಗಳ ಮರ್ಮವನ್ನು ಭೇದಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ರೂಪುಗೊಂಡ ಹೊಸ ಹೊಸ ಸಿದ್ಧಾಂತಗಳ ಹಿನ್ನೆಲೆಯಲ್ಲಿ, ಜಾನಪದದ ಒಂದೊಂದು ವಸ್ತು - ವಿಷಯಗಳನ್ನು ವಿಶ್ಲೇಷಿಸುತ್ತ ಹೋದಂತೆ ದೊರೆತ ಹಲವು ಸಂಗತಿಗಳು ಅವನ್ನು ಹೆಚ್ಚು ಹುರಿದುಂಬಿಸಿ ಇನ್ನೂ ಹೆಚ್ಚು ಕಾರ್ಯೋನ್ಮುಖಿನಾಗಲು ಪ್ರೇರಕವಾಗಿವೆ. ಈ ಎಲ್ಲ ಕೆಲಸ ಕಾರ್ಯಗಳೂ ವೈಯಕ್ತಿಕ ನೆಲೆಯಲ್ಲಿ ನಡೆದಿರುವಂತೆಯೆ, ಕಾಲಕಾಲಕ್ಕೆ ಹುಟ್ಟಿಕೊಂಡ ಹಲವು ಸಂಸ್ಥೆಗಳೂ, ವಿಶ್ವವಿದ್ಯಾನಿಲಯಗಳು, ಅಕಾಡೆಮಿ, ಪರಿಷತ್ತು ಮುಂತಾದವು ಅದಕ್ಕೆ ಹೆಚ್ಚಿನ ಚಾಲನೆಯನ್ನು ಕೊಡುವಲ್ಲಿ ಯಶಸ್ವಿಯಾಗಿವೆ. ಜಾನಪದದ ಒಟ್ಟು ಕಾರ್ಯ ಹೆಚ್ಚು ಸಮರ್ಥವಾಗಿ ಹಾಗು ಸಾರ್ಥಕವಾಗಿ ಮುನ್ನಡೆಯಲು ಪ್ರೇರಕವಾಗಿವೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಸ್ತಿತ್ವಕ್ಕೆ ಬಂದ ಮೇಲೆ ಹಲವಾರು ಮಹತ್ವದ ಕೆಲಸಗಳನ್ನು ಮಾಡುತ್ತಾ ಬಂದಿದೆ. ಧ್ವನಿಮುದ್ರಣ, ಛಾಯಾಚಿತ್ರೀಕರಣಗಳ ಜೊತೆ ಜೊತೆಯಲ್ಲಿಯೇ ಗ್ರಂಥ ಪ್ರಕಟಣೆಯನ್ನೂ ಹೆಚ್ಚಿನ ರೀತಿಯಲ್ಲಿ ಕೈಗೊಂಡಿದೆ. ಡಾ. ಜೀ. ಶಂ. ಪರಮಶಿವಯ್ಯ ಅವರು ಅಕಾಡೆಮಿಯ ಅಧ್ಯಕ್ಷರಾಗಿ ಬಂದ ಮೇಲೆ ತಮ್ಮ ಅಧಿಕಾರದ ಕೊನೆಯ ಅವಧಿಯನ್ನು ಪ್ರಕಟಣೆಗೆ ಮೀಸಲಾಗಿಸಿದ್ದು ಜಾನಪದದ ದೃಷ್ಟಿಯಿಂದ ಒಂದು ಮಹತ್ವದ ಸಂಗತಿ. ಜಾನಪದಕ್ಕಾಗಿ ದುಡಿದ ಪ್ರಮುಖರ ಸಂಕ್ಷಿಪ್ತ ಜೀವನ ಚರಿತ್ರೆ, ಹಾಗೂ ಜಾನಪದದ ಹಲವು ಪ್ರಮುಖ [illegible]ಗೊಂಡ ಕಿರುಹೊತ್ತಗೆಗಳನ್ನು ಪ್ರಕಟಿಸುವ ಯೋಜನೆ ಇವುಗಳಲ್ಲಿ ಮುಖ್ಯವಾದುದು.

ಜಾತ್ರೆಗಳು ನಮ್ಮ ಸಂಸ್ಕೃತಿಕ ಪರಂಪರೆಯ ಪ್ರಮುಖ ದಾಖಲೆಗಳು. ಗ್ರಾಮೀಣ ಬದುಕಿನ ಜೀವಂತ ನಾಡಿಮಿಡಿತಗಳು, ಸಾಮಾಜಿಕ, ಧಾರ್ಮಿಕ ಹಾಗೂ ಕಲಾತ್ಮಕ ಬದುಕಿನ

ಜೀವಸತ್ವ ಅಲ್ಲಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣಬಹುದು. ಜಾತ್ರೆ ಕೇವಲ ಜನ-ದನಗಳ, ವ್ಯಾಪಾರ-ವಹಿವಾಟುಗಳ, ಕೇಂದ್ರವಷ್ಟೇ ಅಲ್ಲ; ಅದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗಮ. ಒಂದೊಂದು ಜಾತ್ರೆಯೂ, ಒಂದೊಂದು ಗ್ರಾಮದ, ಗ್ರಾಮದೇವತೆಯ ಹಿನ್ನೆಲೆಯನ್ನೂ, ಅದರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನೂ ಒಳಗೊಂಡಿರುತ್ತದೆ. ಒಂದು ಜಾತ್ರೆಯ ತಲಸ್ಪರ್ಶಿಯಾದ ಅಧ್ಯಯನವೆಂದರೆ, ಅದೊಂದು ಸಂಸ್ಕೃತಿಯ ಅಧ್ಯಯನವಿದ್ದಂತೆ. ಅದರ ಹುಟ್ಟು, ಬೆಳವಣಿಗೆ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳು, - ಇವೆಲ್ಲವನ್ನೂ ಮೈಗೂಡಿಸಿಕೊಂಡಿರುತ್ತದೆ. ಜಾತ್ರೆಗಳು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ, ಸಾಮಾಜಿಕ ಮಹತ್ವವನ್ನೂ ಪಡೆದುಕೊಂಡಿವೆ. ಅವು ಅಂದಿನಿಂದ ಇಂದಿನವರೆವಿಗೂ ಅಷ್ಟೇ ಮಹತ್ವವನ್ನು ಉಳಿಸಿಕೊಂಡು ಬಂದಿರುವುದರ ಹಿನ್ನೆಲೆಯೇ ಇದಾಗಿದೆ.

ಕರ್ನಾಟಕ ಜಾನಪದ ಅಕಾಡಮಿಯು ಹಮ್ಮಿಕೊಂಡ ಕರ್ನಾಟಕದ ಜಾತ್ರೆಗಳು ಮಾಲೆಗೆ ಈ ಪುಸ್ತಕವನ್ನು ಬರೆದುಕೊಟ್ಟವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಮಂಡ್ಯ ಕಂಪ್ಯೂಟರ್ ಸೆಂಟರ್ ಮುದ್ರಣಾಲಯದವರಿಗೆ ಅಕಾಡಮಿಯ ಪರವಾಗಿ ವಂದನೆಗಳು.

ಹ. ಕ. ರಾಜೇಗೌಡರು
ಡಾ. ಡಿ.ಕೆ. ರಾಜೇಂದ್ರ

* * * * *

# ವಿಷಯ ಸೂಚಿಕೆ


| | |
|---|---|
| ಪ್ರಧಾನ ಸಂಪಾದಕರ ಮಾತು | v |
| ಸಂಪಾದಕರ ಮಾತು | vii |
| ಏಳು ಮಂಡ್ಯವರಕ್ಕ ತಂಗೇರು | ೧ |
| ಜೋಗತಿಯರ ಪರ್ವಾಚರಣೆಗಳು | ೩೫ |
| ಹೆಣ್ಣುಮಕ್ಕಳ ಅರ್ಪಣೆಯ ಹಿನ್ನೆಲೆ | ೩೭ |

# ಸವದತ್ತಿ ಎಲ್ಲಮ್ಮ

## ಏಳು ಮಂದ್ಯವರಕ್ಕ ತಂಗೇರು

ಅಲೆಮಾರಿಯಾಗಿದ್ದ ವ್ಯಕ್ತಿ ಒಂದಡೆ ನೆಲೆನಿಂತು ಸ್ಥಾವರನಾದ ಮೇಲೆ ತನ್ನ ಭಯ ನಿವಾರಣೆಗಾಗಿ ಹಾಗೂ ಆತ್ಮಬಲ ವೃದ್ಧಿಗಾಗಿ ದೇವತೆಗಳನ್ನು ಹೆಸರಿಸಿದ.

ಎಲ್ಲಕ್ಕೂ ಆದ್ಯವಾಗಿ ದ್ಯಾಮವ್ವ ಜನಿಸಿದಳು. ವ್ಯವಸಾಯಿಯಾದ ಮನುಷ್ಯನಿಗೆ ಸಮೃದ್ಧತೆಯ ಸಂಕೇತವಾಗಿ ಪೂಜೆಗೊಂಡಳು. ಆಕೆಯ ಬೆನ್ನಿಗೇ ಮರಗಮ್ಮ, ದುರಗಮ್ಮ, ಕಾಳಮ್ಮ, ಚೌಡಮ್ಮ, ಪಾಲಕಮ್ಮ, ಹಾಗೂ ಎಲ್ಲಮ್ಮ ಉದ್ಭವಿಸಿದರು. ಬೃಹತ್ಪರಂಪರೆಯಲ್ಲಿದ್ದ ಸಪ್ತಮಾತೃಕೆಯರೇ ಇವರು ಎಂದರೆ 'ಏಳು ಮಂದಿ ಅಕ್ಕ ತಂಗೇರು'. ಸೂಕ್ಷ್ಮವಾಗಿ ಅವಲೋಕಿಸಿದರೆ ಚಂಡಿಯೇ ಚಾಮುಂಡಿಯಾದ, ದುರ್ಗೆಯೇ ದುರ್ಗವ್ವನಾದ ಬೆಳವಣಿಗೆ ಒಡೆದು ಕಾಣಿಸುತ್ತ ಆರ್ಯ ದ್ರಾವಿಡ ಸಂಘರ್ಷದ ಫಲವಾಗಿ ಕೂಡ ಇವರು ಗೋಚರಿಸುತ್ತಾರೆ.

ಮೇಲೆ ಉಲ್ಲೇಖಿಸಿದವರಲ್ಲದೆ ಕರಿಯಮ್ಮ, ಮಾರಮ್ಮ, ಮುಂತಾದ ದೇವತೆಗಳೂ ಕಲ್ಲುಗುಂಡುಗಳ ರೂಪದಲ್ಲಿ ಪೂಜೆಗೊಳ್ಳುವುದನ್ನು ಗಮನಿಸಬಹುದು. ಮನುಷ್ಯ ಸಮಾಜವನ್ನು ನಿಯಂತ್ರಿಸುವುದಕ್ಕಾಗಿ ಇವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಕೆಲಸ ವಹಿಸಿದ ದ್ಯಾವವ್ವ ಫಲಾಭಿವೃದ್ಧಿಗೆಂದು, ಮಾರಮ್ಮ ರೋಗಗಳಿಂದ ರಕ್ಷಿಸಲೆಂದು, ಮರಗಮ್ಮ ವೃಕ್ಷಾರಾಧನೆಗೆಂದು, ಪಾಲಕಮ್ಮ ಮಕ್ಕಳನ್ನು ರಕ್ಷಿಸಲೆಂದು, ದುರ್ಗಮ್ಮ ಕೋಟೆ ರಕ್ಷಕಿಯೆಂದು, ಕಾಳಮ್ಮ ಪ್ರಕೃತಿ ವಿಕೋಪದಿಂದ ರಕ್ಷಿಸಲೆಂದು, ಚೌಡಮ್ಮ ಮಕ್ಕಳ ಸಂಬಂಧೀ ದೇವತೆಯೆಂದು, ಎಲ್ಲಮ್ಮ ಎಲ್ಲೆಗಳ ನಡುವಿನ ರಕ್ಷಕಿಯೆಂದು ಇತ್ಯಾದಿ. ಈಕೆಯೂ ಉಳಿದವರಂತೆ ಬುಡಕಟ್ಟು ದೇವತೆ. ಕಲ್ಲನ್ನ ಪೂಜಿಸುತ್ತಿದ್ದ ಮಾನವ ಕಲಾಪರಿಣತಿ ಪಡೆದ ಮೇಲೆ ನಿರಾಕಾರದಿಂದ ಸಾಕಾರತೆಯ ಕಡೆಗೆ ಲಕ್ಷ್ಯ ಹರಿಸಿದ. ವಿವಿಧ ವಾಹನಗಳನ್ನೇರಿದ, ವಿವಿಧ ಆಯುಧಗಳನ್ನು ಒಡಿದ ದೇವಿಯರ ಮೂರ್ತಿಗಳ ಆವಿಷ್ಕಾರ ಆಗಿನಿಂದ ಆರಂಭ.

ಜನಪದ ದೇವತೆಯಾದ ಎಲ್ಲಮ್ಮನನ್ನು ' ನಮ್ಮವಳು ತಮ್ಮವಳೆಂದು' ಜನರು ಮೇಲಾಡಿದರು.

ಕೆಲವು ವಿದ್ವಾಂಸರು ಎಲ್ಲಮ್ಮ ಜೈನರ ಪದ್ಮಾವತೀಯಕ್ಷಿ ಎಂದು ಊಹಿಸಿದ್ದಾರೆ.

ಶೈವರು ಈಕೆ ತಮ್ಮವರು ಎನ್ನುತ್ತಾರೆ. ಆಕೆ ಶಿವನ ಪ್ರಸಾದದಿಂದ ಹುಟ್ಟಿದ್ದರಿಂದ ಶೈವರವರು ಎಂಬುದು ಅವರ ಅಭಿಮತ.

ಎಲ್ಲಮ್ಮ ತಮ್ಮವಳೆಂದು ಬ್ರಾಹ್ಮಣರದ್ದೂ ಹೇಳಿಕೆಯಿದೆ.

ಉಚ್ಛಮರ್ತಿಯನಾದ ಜಮದಗ್ನಿಯನ್ನು ಕ್ಷತ್ರಿಯ ಕನ್ಯೆಯಾದ ಆಕೆ ಲಗ್ನವಾಗದ್ದರಿಂದ ಆಕೆಯೂ ಬ್ರಾಹ್ಮಣಳು ಎಂದೆನ್ನುತ್ತಾರೆ.

('ಬಳ್ಳಡಗಿ' ಎಂಬಲ್ಲಿಯ ಪೂಜಾರಿಗಳು ಬ್ರಾಹ್ಮಣರೇ ಇದ್ದಾರೆ.) ಧರ್ಮಶಾಸ್ತ್ರಗಳಲ್ಲಿ ಉಚ್ಚಮರ್ಶಿಯರು ತಮಗಿಂತ ಕೆಳವರ್ಣದ ಕನ್ನೆಯರ ಕೈಹಿಡಿಯಬಹುದೆಂದು ಹೇಳಿರುವುದನ್ನು ಅವರು ಉಲ್ಲೇಖಿಸುತ್ತಾರೆ. ರೇಣುಕೆಯ ಬದುಕಿನ ಘಟನೆಗಳು ಎಲ್ಲಮ್ಮನ ಬದುಕಿನ ಘಟನೆಗಳನ್ನು ಹೋಲುವುದರಿಂದ ' ಕಲಿಯುಗದ ರೇಣುಕೆಯೇ ಈಕೆ ' ಎಂದೂ ಹಾಡಿರುವ ದಾಖಲೆಗಳಿವೆ.

**ಏಳುಕೊಳ್ಳದೆಲ್ಲಮ್ಮ**

ಸವದತ್ತಿಯಲ್ಲಿ ಏಳುಕೊಳ್ಳಗಳಿರುವುದರಿಂದ ಈ ಹೆಸರು. ಜೋಗೀ ಸಾಬನಕೊಳ್ಳ, ತಮ್ಮಣ್ಣನಕೊಳ್ಳ, ಸಿದ್ದರಕೊಳ್ಳ, ಸಂಧ್ಯನಕೊಳ್ಳ ಪರಸಗಡಕೊಳ್ಳ ಹಾಗೂ ಮಾವಿನಕೊಳ್ಳ ಇವೇ ಆ ಏಳುಕೊಳ್ಳಗಳು. ಸಿದ್ದ ಹಾಗೂ ನಾಥ ಸಂಪ್ರದಾಯದವರು ಇಲ್ಲಿ ನೆಲೆಗೊಂಡಿದ್ದರೆಂಬುದಕ್ಕೆ ಇಲ್ಲಿರುವ ಒಂದುಲೂರಕ್ಕಿಂತ ಹೆಚ್ಚಿನ ಸಣ್ಣ ದೇವಾಲಯಗಳು. ಪೂಜಾಸ್ಥಾನಗಳು ಸಾಕ್ಷಿಗಳಾಗಿವೆ. ಸಂಶೋಧನೆಯ ಕುತೂಹಲದಿಂದ ಅಧ್ಯಯನ ನಡೆಸಿದಾಗ ಹುಲಿಗಮ್ಮ. ಚುಂಚೂರು ಮಾಪೂರಕಾಯಿ. ಬಗದೂರಿಎಲ್ಲಮ್ಮ, ಚಂದ್ರಗುತ್ತಿಯ ಗುತ್ತಮ್ಮ, ಉಚ್ಚಂಗೆಮ್ಮ, ಕೊಕಟನೂರುಎಲ್ಲಮ್ಮ ಇವರೆಲ್ಲ ಸವದತ್ತಿ ಎಲ್ಲಮ್ಮನ ವಿವಿಧ ರೂಪಗಳೆಂಬುದು ತಿಳಿಯಿತು.

ಸಿಡಿಯಾಡುವ. ಎಡೆನೀಡುವ. ಬ್ಯಾಟಿನೀಡುವ, ಬತ್ತಲುಸೇವೆ ಮಾಡುವ, ಉಟ್ಟಿಗಿ ಉಡುವ. ಎಲ್ಲ ಅಂಶಗಳೂ ಈ ಎಲ್ಲಮ್ಮ ಮೂಲದ ಕೇಂದ್ರಗಳಲ್ಲಿರುವುದು ಗಮನಾರ್ಹ. ಎಲ್ಲ ಕಡೆ ರಂಡೆಹುಣ್ಣಿಮೆ, ಮುತ್ತೈದಿ ಹುಣ್ಣಿಮೆಗಳ ಆಚರಣೆಗಳಿವೆ.

ಈ ಮಧ್ಯೆ ಚುಂಚೂರ ಮಾಪೂರ ತಾಯಿ, ಸವದತ್ತಿಎಲ್ಲಮ್ಮರು ತುಳಜಾಪೂರದ ಅಂಬಾಭವನಾ ಮೂಲದವರೆಂದೂ ಹಲವರು ವಿದ್ವಾಂಸರ ಅಭಿಮತ.

ಚಂದ್ರಗುತ್ತಿಯ ರೇಣುಕೆ ಅಥವಾ ಗುತ್ತೆಮ್ಮನು ಎಲ್ಲಮ್ಮ ಮಗನಿಂಧ ತಪ್ಪಿಸಿಕೊಳ್ಳುವ ಸ್ಥಿತಿಯನ್ನು ಸಂಕೇತಿಸುತ್ತಳೆ. ಆಕೆ ಎಷ್ಟೇ ಬೇಡಿಕೊಂಡರೂ ಬಿಡದ ಮಗನು ತಾಯಿಯ ರುಂಡ ಕಡಿಯಲು ಅದು ಅಲ್ಲಿ ಬಿತ್ತೆಂದು ಹೇಳುತ್ತಾರೆ. ಈಗಲೂ ಅಲ್ಲಿ ಎಲ್ಲಮ್ಮನ ತಲೆಗೇ ಪೂಜೆ ಸಲ್ಲುತ್ತಿರುವುದು.

ಕೊಕಟನೂರ ಎಲ್ಲಮ್ಮ ಅಥಣಿ ತಾಲ್ಲೂಕಿನಲ್ಲಿ ನೆಲೆಸಿರುವ ದೇವಿ.

ಭಕ್ತನೋರ್ವನನ್ನು ಒಲಿದು ಅವನ ಹಿಂದೆ ಮಹಾರಾಷ್ಟ್ರಕ್ಕೆ ಹೊರಟಿದ್ದ ಸವದತ್ತಿ ಎಲ್ಲಮ್ಮ ಆತನಿಗೆ ' ಹೊರಳಿ ನೋಡಬಾರದು. ಎಂಬ ಕರಾರು ಹಾಕಿದ್ದಳೆಂದು ಅವನು ಸಿಂಹಗರ್ಜನೆಗೆ ಬೆಚ್ಚಿ ಹೊರಳಿ ನೋಡಿದಾಗ ಕೊಕಟನೂರಿನಲ್ಲೇ ಶಿಲೆಯಾಗಿ ನಿಂತಳೆಂದೂ ಜನಪದ ವ್ಯಾಖ್ಯೆ. ಇಲ್ಲಿ ದೇವೀಪೂಜೆ ಮಾಡುವವರು ತಳವಾರರು. ಇದು ಎಲ್ಲಮ್ಮ ಹಿಂದೆ ಪರಿಶಿಷ್ಟ ವರ್ಗಕ್ಕೆ ಸೇರಿದ ದೇವತೆಯಾಗಿದ್ದಳೆಂಬ ಅಂಶದ ಮೇಲೆ ಬೆಳಕು ಚೆಲ್ಲುತ್ತದೆ.

ಸತೀ ಹೋದ ಎಲ್ಲಮ್ಮನನ್ನು ಪರಶುರಾಮ ಹಾಡಿ ಹೊಗಳಿದನೆಂದು ಜನರ ಅಂಬೋಣ.

ಹರೀಪುರಂಧರ



ಸಾರಿ ಹೇಳತಾನ
ಕೇಳವೊಲ್ಲ ಒಟ್ಟಿ
ಎಲ್ಲವ್ವ ತಾಯಿನ
ಕಿಚ್ಚ ಹ್ಯಾಸ್ತಾನ
ಬಿಕ್ಕನೆತ್ತಿ ಬಿಟ್ಟಿ

ಬಹುಶಃ ಜಮದಗ್ನಿ ತೀರಿಕೊಂಡಾಗ ಎಲ್ಲಮ್ಮ ವಿಧವೆಯಾಗಿದ್ದಾಗಿನ ಸ್ಥಿತಿಯಾಗಿರಬಹುದು.

ವಿಧವೆಯರ ಸಹಗಮನ ಆಗ ಧರ್ಮಸಮ್ಮತೋ ಆಗಿತ್ತು. ಇದೂ ಪುರುಷ ಪ್ರಧಾನ ಸಮಾಜದ ಒಂದು ಧೋರಣೆಗೇ ಸಂಕೇತವಾಗಿದೆ.

ಉಚ್ಚಂಗೆಮ್ಮ: ಬಳ್ಳಾರಿ ಜಿಲ್ಲೆಯಲ್ಲಿನ ಒಂದು ಹಳ್ಳಿ.

ದಯಮಾಡು ಉಚ್ಚಂಗಿದೇವಿ
ಏಳುಕೋಟಿ ಸಿದ್ಧರನು ಹಾಳುಮಾಡಿದಿ
ಮಾಯಕಾರ್ತಿ ಜಗದಂಬಿ
ಸಿದ್ಧರಿಗೆ ಹೊಗಿಸಿದೀ ಗವಿ

ಎಂದಿರುವ ಹಾಡಿನಲ್ಲಿ ಎಲ್ಲಮ್ಮ ಸಿದ್ಧರಿಗೆ ಪಾಠ ಕಲಿಸಿದ ಕಥೆಯಿದೆ.

ಮುತ್ತುಕಟ್ಟುವುದು, ಮುಂತಾದ ಧಾರ್ಮಿಕ ಆಚರಣೆಗಳು ಮೇಲ್ಕಾಣಿಸಿರುವ ಎಲ್ಲ ಊರುಗಳಲ್ಲೂ ಇವೆ. ಎಲ್ಲಮ್ಮನ ದರ್ಶನಕ್ಕಾಗಿ ಬರುವ ಭಕ್ತರು ಸವದತ್ತಿ ಎಲ್ಲಮ್ಮನನ್ನೇ ಕುರಿತು ಹಾಡುವುದನ್ನು ಗಮನಿಸಬಹುದಾಗಿದೆ.

**ಹುಟ್ಟಿ ಬಂದೀ**

ಸವದತ್ತಿ ಎಲ್ಲಮ್ಮನ ಮೂಲ ಹಲವು ಗೋಜಲ್ಲು ಹಾಗೂ ನಾನಾ ಐತಿಹ್ಯಗಳಿಂದ ಕೂಡಿದೆ. ಪುರಾಣದ ಕಥೆಯನ್ನೇ ಜನಪದರು ಹಾಡುಕಟ್ಟಿ ತಮ್ಮ ದೇವಿಯನ್ನು ವೈಭವೀಕರಿಸಿರುವುದು ಗಮನಾರ್ಹ.

ಹುಟ್ಟೀ ಬಂದೀ ಎಲ್ಲಮ್ಮನಾಗೀ
ನಿನ ಮದಿವಿಯ ಮಾಡಿ
ಕೊಟ್ಟಾರವ್ವ ಜಮದಗ್ನಿಗೇ
ರೇಣುಕರಾಜಾ ನಿಮ್ಮ ತಂದೀ
ಭೋಗಾವತೀ ನಿಮ್ಮ ತಾಯಿ
ಹುಟ್ಟಿಬಂದ್ಯವ್ವ ಹೊಟ್ಟೆಯಲ್ಲಿ
ಹಾಕಿ ತೂಗ್ಯಾರ ತೊಟ್ಟಿಲದಲ್ಲಿ
ಸರ್ಪನ ಸಿಂಬಿ ತಲಿಯಮ್ಯಾಲ
ಉಸುಕಿನ ಕೊಡಾ ಅದರ ಮ್ಯಾಲ
ನೀರ ತುಂಬಿಸಿ ನದೀಯಲ್ಲಿ
ಕೊಡಾ ಬಿತ್ತ ಭೂಮಿ ಮ್ಯಾಲ

ಎಂದು ಮುಂತಾಗಿ ಜಮದಗ್ನಿಯ ತಪಸ್ಸು ಭಂಗ ಹೊಂದಿದ್ದು ಮುಂತಾದ ಸಂಗತಿಗಳನ್ನು ಸೇರಿಸಿದ್ದಾರೆ.

ಇನ್ನೊಂದು ಕಥೆಯ ಪ್ರಕಾರ ಎಲ್ಲಮ್ಮ ಉಗ್ರಕೊಳ್ಳದ ಶ್ರೀಮಂತನ ಮಗಳು. ಆವಳಿಗೆ ಬಂದ ಕುಷ್ಠದಿಂದ ಜನರಿಂದ ತಿರಸ್ಕಾರ. ಎಕ್ಕಯ್ಯ ಜೋಗಯ್ಯರು ಆವಳನ್ನು ಅನುಗ್ರಹಿಸುತ್ತಾರೆ.

ಸವದತ್ತಿ ಎಲ್ಲಮ್ಮನನ್ನು ಒಮ್ಮೆ ಬಂಕಾಪುರದಲ್ಲೂ ಧಾರವಾಡದವಳೆಂದೂ. ವಿಷಂಪುರಿ ಪಟ್ಟಣದವಳೆಂದು ಬುರ್ಶಿಸುವ ಹಾಡುಗಳಿವೆ.

ದಕ್ಷಿಣ ಕರ್ಣಾಟಕದಲ್ಲಿ ಸಂಪಾದಿತವಾಗಿರುವ ಹಾಡುಗಳಲ್ಲಿ ಎಲ್ಲಮ್ಮನನ್ನು ಧಾರ್ವಾಡ ಸೀಮೆಕೊರವಂಜಿ ಎಂದಿದೆ..

ಇದೆಲ್ಲದರ ಅರ್ಥ ಒಂದೇ. ಸವದತ್ತಿಗೆ ಬರಲು ತ್ರಾಸಾಗುವವರು ಸಮೀಪದ ಎಲ್ಲಮ್ಮನ ಗುಡಿಗೆ ಹೋಗಬಹುದು ಎಂಬುದು.

ಇನ್ನು ಪುರಾಣ ಮೂಲದಲ್ಲಿ ಬರುವ ಕಥೆಗಳು ಹೀಗಿವೆ ; ಮಹಾಭಾರತ. ಹರಿವಂಶ, ಭಾಗವತಗಳಲ್ಲಿ ರೇಣುಕೆಯ ಕಥೆಯಿದೆ. ಜೈನ ಪುರಾಣದಲ್ಲೂ ಉಲ್ಲೇಖವಿದೆ. ಉತ್ತರ ಪುರಾಣದ ಕಥೆಯ ರೀತ್ಯಾ ಕಾನ್ಯಕುಬ್ಜದ ರಾಜನ ಮಕ್ಕಳಲ್ಲಿ ಕಿರಿಯಾಕೆ ರೇಣುಕೆ. ಬಾಲ್ಯದಿಂದ ಆಕೆಗೆ ಮಣ್ಣಿನ ವಾಸನೆ ಪ್ರಿಯ. ಆವಳನ್ನು ಕಂಡು ಒಲಿದವನು ಬ್ರಾಹ್ಮಣ ಜಮದಗ್ನಿ. ಸ್ವಯಂವರ ಪದ್ಧತಿಯಒಂದು ಪ್ರಕಾರವಿದು. ಆವರಿಗೆ ಇಬ್ಬರು ಮಕ್ಕಳು. ಅವರಲ್ಲೊಬ್ಬ 'ಇಂದ್ರರಾಮ' ನೇ ಪುರಾಣೋಕ್ತ ಪರಶುರಾಮ. ಈತ ಸೋದರ ಮಾವನಿಂದ ಕಾಮಧೇನು ಪಡೆಯುತ್ತಾನೆ. ಚಿಕ್ಕಪ್ಪ ಸಹಸ್ರಬಾಹು ಜಮದಗ್ನಿಯ ಆಶ್ರಮಕ್ಕೆ ಬಂದಾಗ ಧೇನುವಿನಿಂದ ಆಕರ್ಷಿತನಾಗಿ ಮಗನ ನೆರವಿನಿಂದ ಅದನ್ನು ಕದ್ದೊಯ್ಯುತ್ತಾನೆ. ಕಾಳಗದಲ್ಲಿ ಸಹಜವಾಗಿಯೇ ಒಂಟಿಯೂ ದುರ್ಬಲನೂ ಆಗಿದ್ದ ಜಮದಗ್ನಿ ಮಡಿದಿರುತ್ತಾನೆ. ಸುದ್ದಿ ತಿಳಿದ ಇಂದ್ರ ರಾಮನು ಚಿಕ್ಕಪ್ಪ ಹಾಗೂ ಆವನ ಮಗನನ್ನು ಕೊಲ್ಲುತ್ತಾನೆ.

ವೈಷ್ಣವ ಪುರಾಣಗಳಂತೆ ಕಥೆ ಅನ್ಯರೀತಿಯಲ್ಲಿ ಅಂತ್ಯ ಕಾಣುವುದು ವಿಶಿಷ್ಟವಾಗಿದೆ. ಕೃತವೀರನ ಮಗ ಸುಭೌಮ ಇಂದ್ರರಾಮನನ್ನು ಸಂಹರಿಸುತ್ತಾನೆ.

ಇಲ್ಲಿ ' ವಿಲೋಮವಿವಾಹ ' ದಿಂದ ಜನಿಸಿದ ಇಂದ್ರರಾಮನ ಅಂತ್ಯ ಹೀಗೇ ಇರಬೇಕೆಂದು ನಿರ್ಧರಿಸಿರುವುದು ಸಾಮಾಜಿಕ ಶಕ್ತಿಗಳೇ ಆಗಿವೆ.

ಇನ್ನು ಪುರಾಣೋಕ್ತ ರೇಣುಕೆಯ ಕಥೆಯಲ್ಲಿ ಬರುವ ವಿವರ :ಈಕೆ ಕಾಶ್ಮೀರದ ರೇಣುಕರಾಜನ ಪುತ್ರಿ. ಜಮದಗ್ನಿ ವರ್ಚಸ್ವಿಯಾಗಿದ್ದುದನ್ನು ಕಂಡು ಅವನನ್ನು ಪ್ರೀತಿಸಿ ಮದುವೆಯಾಗುತ್ತಾಳೆ.

ಯಥಾ ಪ್ರಕಾರ ನೀರುತರುವಾಗ್ಗೆ ತಡವಾಯಿತೆಂದು ಹೆಂಡತಿಯನ್ನು ಶಂಕಿಸಿದ ಜಮದಗ್ನಿ ರೇಣುಕೆಯನ್ನು ತ್ಯಜಿಸುತ್ತಾನೆ. ಪ್ರಯಾಸದಲ್ಲು ಮಗನನ್ನು ಹೆತ್ತ ರೇಣುಕೆ ಪರಶುರಾಮನ ನಾನಾ ಪ್ರಶ್ನೆಗಳಿಂದ ಕಂಗೆಡುತ್ತಾಳೆ. ತಾನು ಹಾದರಕ್ಕೆ ಹುಟ್ಟಿರಬಹುದೆಂದು ಅನುಮಾನಗೊಂಡ ಅವನು ತಾಯಿಯನ್ನು ಬೀದಿಯಲ್ಲಿ ಎಳೆದುಕೊಂಡು ಹೋಗಿ ಹೊಡೆದು ನೋಯಿಸುತ್ತಾನೆ. ತಾಯಿಗೆ ಅಗೌರವ ಸೂಚಿಸಿದ್ದರಿಂದ ಪರಶುರಾಮನ ಕಣ್ಣು ಹೋಗುತ್ತದೆ. ತಾಯಿಯೇ ಮನಕರಗಿ ಪುನಃ ಕಣ್ಣು ಬರಲು ಕಾರಣಳಾಗುತ್ತಾಳೆ.



**ಜನಪದ ಮೂಲಗಳಲ್ಲಿ ಹೀಗಿದೆ**

ಎಲ್ಲಮ್ಮನ ಸೋದರನಾದ ಕಾರ್ತವೀರ್ಯನು ಭಾವನಲ್ಲಿದ್ದ ಧೇನುವನ್ನು ಬಯಸಿ ದುರಾಸೆಯಿಂದ ಕದನಕ್ಕೆಳೆಸುತ್ತಾನೆ. ವಿಧವೆ ತಾಯಿಯನ್ನು ನೋಡಲಾರದ ಪರಶುರಾಮ ಸೋದರಮಾವನನ್ನು ಕೊಲ್ಲುತ್ತಾನೆ.

ತಾಯಿ ಗುಟ್ಟನ್ನೊಡೆದು ತಂದೆಯ ನಿಧನಕ್ಕೆ ಕಾರಣಳಾದಳೆಂದು ಮುಂಗೋಪಿಯಾದ ಅವನು ಆಕೆಯ ತಲೆ ಕಡಿಯುತ್ತಾನೆ. ಅದು ಮತ್ತೆ ಮತ್ತೆ ಚಿಗುರುತ್ತದೆ.

ಇನ್ನೊಂದು ಕಥೆಯ ಪ್ರಕಾರ ಜಮದಗ್ನಿ ತಪಸ್ಸಿಗೆ ಹೋಗಿದ್ದಾಗ ಎಲ್ಲಮ್ಮ ಶಿವನ ಕರುಣೆಯಿಂದ ಮಗನನ್ನು ಹಡೆಯುತ್ತಾಳೆ. ಜಮದಗ್ನಿ ಸಂಶಯದಿಂದ ಪೀಡಿತನಾದಾಗ ಮಗುವಿನೊಂದಿಗೆ ಗುಡಸೇರಿ ಭಿಕ್ಷೆ ಬೇಡುತ್ತ ಸಿದ್ಧರ ಸೇವೆ ಮಾಡುತ್ತ ದಿನಗಳೆಯುತ್ತಾಳೆ. ಭರಭರ ಬೆಳೆದ ಮಗ ತಾಯಿಯ ಚಾರಿತ್ರ್ಯ ಶಂಕಿಸಿದ್ದಾಗ ಅದನ್ನು ನಿರೂಪಿಸಲು ವಿಫಲಳಾಗಿ ಅವನ ಕ್ರೌರ್ಯದಿಂದ ಸಾಯುತ್ತಾಳೆ. ಎಲ್ಲಮ್ಮನಿಗೆ ಈರಣ್ಣ > ವೀರಭದ್ರ ಎಂಬ ಅಣ್ಣನಿದ್ದ. ಈಗಲೂ ಗೊಡಚಿಯ ವೀರಭದ್ರ ದೇವರಿಗೆ ಸಂಬಂಧ ಕಲ್ಪಿಸಿ ಹಾಡುವ ಸಂದರ್ಭಗಳಿವೆ. ' ಎಲ್ಲಮ್ಮನಿಗೆ ಹೋದವರು ಈರಣ್ಣನಿಗೆ ಹೋಗಬಾರದು ಎಂಬ ವಾಡಿಕೆಯ ಮಾತುಗಳಿವೆ. ಈತನೇ ಪೂಜಾದ ಕಾರ್ತವೀರ್ಯನಿರಬಹುದು.

ಏಳು ಮಂದಿ ಅಕ್ಕತಂಗೇರಲ್ಲಿ ಎಲ್ಲಮ್ಮನಿಗೆ ಹತ್ತಿಕೊಂಡಷ್ಟು ಅಖ್ಯಾನಗಳು ಇನ್ನಾರಿಗೂ ಇಲ್ಲವೆನ್ನಬಹುದು.

ಎಲ್ಲಮ್ಮ ಹಂದರ ಹಾಕಿದಲ್ಲಿ ಹಾಜರಿರುವಳೆಂಬುದು ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಮಾತು. ನಾನಾ ಜಾತಿಧರ್ಮಗಳ ಆಕರ್ಷಣೆಯ ಕೇಂದ್ರ ಈಕೆ ಎಂಬುದು ವಿಶೇಷ.

ಜನಪದರು ಹೇಳುವ ಆರುಮಂದಿ ಅಕ್ಕತಂಗೇರಲ್ಲಿ ಎಲ್ಲಮ್ಮ ಒಬ್ಬಳು. ಆಂಧ್ರ ತಮಿಳುನಾಡು ಗೋವಾಗಳಲ್ಲೂ ಎಲ್ಲಮ್ಮನಿದ್ದಾಳೆ. ಅಲ್ಲಿ ಆಕೆಯನ್ನು ಗಡಿದೇವತೆ ಎಂದು ಆರಾಧಿಸುತ್ತಾರೆ.

ಡಾ. ಎಂ. ಚಿದಾನಂದ ಮೂರ್ತಿಯವರು ಹೇಳುವಂತೆ 'ಎಲ್ಲರ ಅಮ್ಮ ಎಲ್ಲಮ್ಮ' ಎಂದು ಒಪ್ಪುವುದು ಕಷ್ಟ. ಸೀಮಾದೇವತೆಯ ಆರಾಧನೆ ತುಂಬ ಹಿಂದಿನಿಂದ ಭರತಖಂಡದಲ್ಲಿದೆ. ಆದ್ದರಿಂದಲೆ ಎಲ್ಲಮ್ಮನಿಗೆ ಎರಡೂ ಕಡೆಯೂ ಭಕ್ತರು ನಾನಾ ಧರ್ಮಿಯರೂ ಅನುಯಾಯಿಗಳು.

ದ್ಯಾವಮ್ಮ >ದ್ಯಾವಮ್ಮ ದುರ್ಗಮ್ಮ >ದುರಗಮ್ಮನಾದಂತೆ ಎಲ್ಲಮ್ಮ 'ರೇಣುಕಾಯಲ್ಲಮ್ಮ ನಾದವಳು. ವಿವಿಧ ಜಾತಿಗಳ ವರ ಮೇಲ್ವಿಚಾರಣೆಗೆ ಒಳಗಾದ ಎಲ್ಲಮ್ಮ ಕ್ರಮೇಣ ಸಂಸ್ಕೃತೀಕರಣಕ್ಕೊಳಗಾದಳು. ತಾವು ಆರಾಧಿಸುತ್ತಿದ್ದ ದೇವಿಗೆ ಚಾರಿತ್ರ್ಯ ಬಗೆಗಿನ ಕಳಂಕ ತಟ್ಟಿದಾಗ ಶಿಷ್ಟ ಸಂಸ್ಕೃತಿಯನ್ನು ಅದಕ್ಕೆ ಶ್ರೀರಕ್ಷೆಯಾಗಿ ಅನ್ವಯಿಸಿರಬಹುದು. ಕೃತಯುಗದ ರೇಣುಕೆಯ ಬದುಕೂ ಈಕೆಯ ಬದುಕೂ ಪರಸ್ಪರ ಹೋಲುತ್ತಿದ್ದುದು ಇದಕ್ಕೆ ವರವಾಗಿ ಒದಗಿ ಬಂತು. ಮೊದಲು ಪರಿಶಿಷ್ಟ

ವರ್ಗದವಳಾಗಿದ್ದಿರಬಹುದಾದ ಎಲ್ಲಮ್ಮ ನಂತರ ವೀರಶೈವರ, ಬ್ರಾಹ್ಮಣರ, ಜೈನರ ಸುಪರ್ದಿಗೆ ಬಂದ ಮೇಲೆ ಸಹಜವಾಗಿಯೇ ಶಿಷ್ಟದೇವತೆಯಾದಳು. ಸೀಮೆಯದೇವತೆ ಊರ ಮಧ್ಯೆ ನೆಲೆಸಿದಳು.

ಮಾತೃಪ್ರಧಾನ ದ್ರಾವಿಡ ಸಂಸ್ಕೃತಿಯು ಪಿತೃ ಯಾಜಮಾನ್ಯವನ್ನು ತಿರಸ್ಕರಿಸಿತೆಂಬುದಕ್ಕೆ ಸವದತ್ತಿಯಲ್ಲಿ ಜಮದಗ್ನಿ ಪರಶುರಾಮರಿಗೆ ಎರಡನೇ ಸ್ಥಾನ ನೀಡಿ ಎಲ್ಲಮ್ಮನನ್ನು ನಾಯಕಿಯನ್ನಾಗಿಸಿರುವುದೇ ಸಾಕ್ಷಿ. 'ನನ್ನ ಸೊಲ್ಲು ನಿಮಗ ಬ್ಯಾಡ ನಿಮ್ಮ ಸೊಲ್ಲು ನನಗೆ ಬ್ಯಾಡ' ಎಂದಿರುವ ಹಾಡು ಇದನ್ನು ಪುಷ್ಟೀಕರಿಸುತ್ತದೆ.

ಎಲ್ಲಮ್ಮನ ಭಕ್ತರು ತಮ್ಮ ಬದುಕಿನ ಬವಣೆಗಳನ್ನು ಆಕೆಗೂ ಆರೋಪಿಸಿರುವುದು ವಿಶಿಷ್ಟವಾಗಿದೆ. ಆಕೆ ತನ್ನ ಬದುಕಿನಲ್ಲಿ ಹಲವಾರು ಅಗ್ನಿದಿವ್ಯಗಳನ್ನು ಹಾದು ಬಂದಳು. ಅವನ್ನೆಲ್ಲ ಭಕ್ತರು ಹಾಡಿನ ರೂಪದಲ್ಲಿ ಹಿಡಿದಿರಿಸಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿರುವ ಸವದತ್ತಿಯಲ್ಲಿ ಸುತ್ತಾಡಿದರೆ ಎಲ್ಲಮ್ಮನ ಬಗೆಗಿನ ಐತಿಹ್ಯಗಳು ನಂಬಿಕೆಗಳ ಮಹಾಪೂರವನ್ನೇ ಕಾಣಬಹುದು.

ಮಾತೃಪ್ರಧಾನ ಸಂಸ್ಕೃತಿಯು ಪ್ರವರ್ತಕರಾದ ದ್ರಾವಿಡರು, ಪಿತೃಪ್ರಧಾನ ಸಂಸ್ಕೃತಿಯ ಜಮದಗ್ನಿಯನ್ನೇ ಎಲ್ಲಮ್ಮನ ಗಂಡನನ್ನಾಗಿ ಉಳಿಸಿಕೊಂಡಿರುವುದು ಒಂದು ಸ್ವಾರಸ್ಯ. ಪುರುಷ ಪ್ರಧಾನ ಸಮಾಜದ ಕಠೋರ ಪರೀಕ್ಷೆಗಳನ್ನು ಎಲ್ಲಮ್ಮ ಎದುರಿಸಿ ಯಶಸ್ವಿಯಾದುದಕ್ಕೆ ಒತ್ತಿರುವದು ಇದನ್ನು ಸ್ಪಷ್ಟಪಡಿಸುತ್ತದೆ.

ಎಲ್ಲಮ್ಮನ ಬಗೆಗೆ ಜನಪದ ಮೂಲ ಹಾಗೂ ಪುರಾಣ ಮೂಲದ ಆಖ್ಯಾನಗಳಿವೆ.ಅವನ್ನೀಗ ಸ್ಥೂಲವಾಗಿ ನೋಡೋಣ.

ರೇಣುಕೆಯ ಪ್ರಸ್ತಾಪ-

ಹರಿವಂಶ, ಭಾಗವತ, ಮಹಾಭಾರತಗಳಲ್ಲಿದೆ

ಜೈನರಿಗೂ ಭದ್ರ ಮಹಪುರಾಣದಲ್ಲಿಯೂ ಉಲ್ಲೇಖವಿದೆ.

ಎರಡರಲ್ಲೂ ಆಕೆಯನ್ನು ಅಯೋನಿಜೆ ಎಂದೇ ಕರೆಯಲಾಗಿದೆ.

ಮುಖ್ಯಪಾತ್ರಗಳಾಗಿ ಜಮದಗ್ನಿ ರೇಣುಕೆ, ಪರಶುರಾಮಾ ಕಾರ್ತವೀರ್ಯಾರ್ಜುನರು ಕಾಣಿಸಿಕೊಳ್ಳುತ್ತಾರೆ.

**ಜನಪದರು ಹೇಳುವ ಎಲ್ಲಮ್ಮನ ಕಥೆ ಹೀಗಿದೆ**

ಜಮದಗ್ನಿ ಕಠೋರ ತಪಸ್ವಿ. ಅವನ ಹೆಂಡತಿಯಾದ ಎಲ್ಲಮ್ಮ ಪಡಬಾರದ ಕಷ್ಟಪಟ್ಟಳು.

ಒಮ್ಮೆ ಜಲಕ್ರೀಡೆಯಾಡುತ್ತಿದ್ದ ಜೋಡಿ ಮೀನುಗಳನ್ನು ಕಂಡು ಚಂಚಲಗೊಂಡಳು.

ಅನುಷ್ಠಾನಕ್ಕೆ ನೀರು ತರಲೆಂದು ನಿತ್ಯದ ರೂಢಿಯಂತೆ, ಸರ್ಪದ ಸಿಂಬೆ ಮಾಡಿ, ಉಸುಕಿನ ಕೊಡ ಮಾಡಲೆಂದು ಹೊರಟರೆ, ಸರ್ಪ ಹರಿದು ಹೋಗಿ ಮರಳಿನಕೊಡ



ಕುಸಿದುಬಿತ್ತು. ಹಾಗೆಯೇ ಆಶ್ರಮಕ್ಕೆ ಮರಳಿದರೆ ದಿವ್ಯಜ್ಞಾನದಿಂದ ಆದದ್ದೆಲ್ಲವನ್ನೂ ತಿಳಿದು ಆಕೆಯನ್ನು ಕುಷ್ಠರೋಗಿಯಾಗೆಂದು ಹೊರಗಟ್ಟಿದ.

ನಂತರ ಆಕೆ ಕಾಡುಮೇಡು ಅಲೆಯುತ್ತಿರುವಾಗ, ಎಕ್ಕಯ್ಯ, ಜೋಗಯ್ಯರೆಂಬ ಸಿದ್ಧಿ ಪುರುಷರ ದರ್ಶನವಾಯಿತು.

ಅವರು ಮರದ ಮೇಲೆ ಕಟ್ಟಿದ್ದ ಪಾದುಕೆಯಿಂದ ಬಿದ್ದ ನೀರು ಅವಳ ಚರ್ಮಕ್ಕೆ ಮರುಹುಟ್ಟು ನೀಡಿತು. ಪತಿಯ ಹತ್ತಿರ ಬಂದಳು.

ಅವನು ಆಕೆಯನ್ನು ಜರೆದು ಹೊರಗಟ್ಟಿದ. ಮುಂದೆ ಸಿದ್ಧರನ್ನು ಹುಡುಕುತ್ತ ಬಂದು ಅವರ ಸೇವೆಯಲ್ಲಿ ನಿರತಳಾದಳು.

ಆ ವೇಳೆಗೆ ಆಕೆ ಗರ್ಭಿಣಿ ಬೇರೆ. ಸಿದ್ಧರಿಂದ ತಾಂತ್ರಿಕಪರಿಣತಿಯನ್ನುಪಡೆದ ಆಕೆ, ಸುತ್ತಲು ಜನರ ಆಕರ್ಷಣೆಯ ಕೇಂದ್ರವಾದಳು. ಮಗ ಪರಶುರಾಮ ಹುಟ್ಟಿದ.

ತಿಳಿವಳಿಕೆ ಬಂದ ಕೂಡಲೇ, ತನ್ನ ತಂದೆ ಯಾರೆಂದು ಪೀಡಿಸಿದ. ಆಗ ಆಕೆ "ಹಳ್ಳ ಸೋಕಿ ಹಡೆದೆ" ಎಂದಳು. ಕಡೆಗೆ ಆಣೆ ಪ್ರಮಾಣಗಳಿಂದ ಜಮದಗ್ನಿಯೇ ತನ್ನ ತಂದೆಯೆಂದು ಖಚಿತಪಡಿಸಿಕೊಂಡ. ತಾಯಿ ಮಕ್ಕಳು ಜಮದಗ್ನಿ ಋಷಿಯ ಬಳಿಗೆ ಹೋದರು.

ಅವನು ಆಕೆಗೆ ವ್ಯಭಿಚಾರದ ಆರೋಪ ಮಾಡಿ, ಆಕೆಯ ತಲೆಕಡಿಯಲು ಪರಶುರಾಮನಿಗೆ ಆಣತಿಯಿತ್ತ. ಮರುಕ್ಷಣ ತಾಯಿಯ ತಲೆಕಡಿದನಲ್ಲದೆ ಆಕೆಯ ಜೀವದಾನವನ್ನು ಬೇಡಿದ. ಅದರ ಫಲವಾಗಿ ಆಕೆ ಮತ್ತೆ ಜೀವ ತಳೆದಳು.

ಜನಪದ ಗೀತೆಗಳಿಂದ ಮತ್ತೂ ಒಂದು ಕಥೆ ಲಭ್ಯವಾಗುತ್ತದೆ. ಆ ಪ್ರಕಾರ ಎಲ್ಲಮ್ಮನಿಗೆ ಕಾರ್ತವೀರ್ಯನೆಂಬ ಸೋದರನಿದ್ದ. ಆತನು ಜಮದಗ್ನಿಯ ಆಶ್ರಮಕ್ಕೆ ಬಂದು ಅಲ್ಲಿದ್ದ ಕಾಮಧೇನುವನ್ನು ತನಗೆ ಕೊಡಬೇಕೆಂದು ದುಂಬಾಲು ಬಿದ್ದ, ಋಷಿ ತಿರಸ್ಕರಿಸಿದಾಗ ಸಿಟ್ಟೆಗೆದ್ದು ಜಮದಗ್ನಿಯನ್ನು ಕೊಂದು ತಂಗಿಯ ವೈಧವ್ಯಕ್ಕೆ ಕಾರಣನಾದ.

ಎಲ್ಲಮ್ಮನ ಮಗ ಪರಶುರಾಮ ಕಾರ್ತವೀರ್ಯನ ಮೇಲೆ ಯುದ್ಧ ಮಾಡಿ ಅವನನ್ನು ಕೊಂದು, ಕಾಮದೇನುವನ್ನು ತಿರುಗಿ ಪಡೆದನಲ್ಲದೆ, ತಂದೆಯನ್ನು ಬದುಕಿಸಿಕೊಂಡ.

**ಎಲ್ಲಮ್ಮ ಎಲ್ಲರ ಅಮ್ಮನಾದುದಕ್ಕೂ ಒಂದು ಕಥೆಯಿದೆ**

ಮಗ ಪರಶುರಾಮ ಬೆನ್ನು ಹತ್ತಿ ಬಂದಾಗ ಆಕೆಯನ್ನು ಕಾಪಾಡಿದಾಕೆ "ಮಾತಂಗಿ" ಎಂಬ ಮಾದರ ಜಾತಿಯ ಹೆಣ್ಣು ಮಗಳು. ಎಲ್ಲಮ್ಮ ಆಕೆಯನ್ನು ಜನ್ಮ ಉಳಿಸಿದ ತಾಯಿಯಂದಳಲ್ಲದೆ "ನಿನ ಪರಿಷೆ ಮುಂದಮ್ಮ ನನ ಪರಿಷೆ ಹಿಂದಮ್ಮ" ಎಂದಳು.

ಉಡಚಮ್ಮ ಮುಂತಾದ ಪರಿಶಿಷ್ಟರ ಆರಾಧ್ಯ ದೇವತೆಗಳನ್ನು ಅಂತರಂಗಕ್ಕೆ ತೆಗೆದುಕೊಂಡಳು.

ಈಗಲೂ ಸವದತ್ತಿಯ ಎಲ್ಲಮ್ಮನ ಗುಡಿಯ ಮುಂದುಗಡೆಯೇ ಮಾತಂಗಿ ಗುಡಿಯಿರುವುದನ್ನು ಕಾಣುತ್ತೇವೆ. (ಬಂಕಾಪುರದ ಕೋಟೆ ಎಲ್ಲಮ್ಮನ ಗುಡಿಯೊಳಗೇ

ಮಾತಂಗಿ ವಿಗ್ರಹವಿದೆ) ಕಾಲಕ್ರಮೇಣ ಪುರಾಣೋಕ್ತ ರೇಣುಕೆಯ ಬದುಕಿನ ಘಟನೆಗಳು ಎಲ್ಲಮ್ಮನ ಬದುಕಿನ ಘಟನೆಗಳೊಂದಿಗೆ ತಾಳೆಯಾಗುತ್ತಿದ್ದುದರಿಂದ ಆಕೆಯನ್ನು "ರೇಣುಕಾ ಎಲ್ಲಮ್ಮ" ಎಂದು ಕರೆಯಲಾರಂಭಿಸಿದರು.

ಆಕೆ ತ್ರೇತಾಯುಗದ ಸೀತೆಯ ಕೃತಯುಗದ ರೇಣುಕೆಯ ಹಾಗೂ ದ್ವಾಪರ ಯುಗದ ದ್ರೌಪದಿಯ ಅವತಾರವೆಂದೂ ನಂಬತೊಡಗಿದರು. ಹೀಗೆ "ಕಿರಿಯ ಪರಂಪರೆಯ ದೇವತೆ ಎಲ್ಲಮ್ಮ ಬೃಹತ್ ಪರಂಪರೆ"ಯೊಂದಿಗೆ ಸಾಧಿತವಾದ ಸಂಪರ್ಕದಿಂದ ಶಿಷ್ಟ ಜನಪದರಿಬ್ಬರಿಗೂ ಬೇಕಾದಳು. ಬ್ರಾಹ್ಮಣರೊಂದಿಗೆ, ಜೈನ ವೀರಶೈವರೂ ಸೇರಿ ಆಕೆಯ ಆರಾಧನೆ ನಡೆಸಿದರು.

ಸವದತ್ತಿಯ ಎಲ್ಲಮ್ಮ ಗುಡಿಯ ಟ್ರಸ್ಟಿನವರು ತಿಳಿಸಿದಂತೆ, ಆಕೆ ಮುಸ್ಲಿಂ ಭಕ್ತರನ್ನೂ ಹೊಂದಿದ್ದಾಳೆ. "ಎಲ್ಲಮ್ಮನ ಜಾತ್ರ್ಯಾಗ ಮುಲ್ಲಾಂದೇನು" ಎಂಬ ಮಾತನ್ನು ಬಹುಶಃ ಕೋಮುವಾದಿಗಳು ಹುಟ್ಟು ಹಾಕಿರಬೇಕು.

ಪುರುಷರ ತುಳಿತಕ್ಕೊಳಗಾದ ಎಲ್ಲಮ್ಮನಿಗೆ ಪುರುಷದ್ವೇಷವನ್ನು ಆರೋಪಿಸಲಾಯಿತು.'ಎಲ್ಲಗುಂಡ್ರ ಮಾನ ಕಳೆದಾಕಿ" ಎಂದು ಜನಪದರು ಆಕೆಯನ್ನು ಬಗೆ ಬಗೆಯಾಗಿ ಹಾಡಿ ಹೊಗಳಿದ್ದಾರೆ.

ಮುಕ್ತ ಲೈಂಗಿಕವಾದಿಗಳು ಎಲ್ಲಮ್ಮನಿಗೆ ವ್ಯಭಿಚಾರದ ಆರೋಪವನ್ನು ಹೊರಿಸಿ ಆ ದೇವಿಗೆ ಅರ್ಪಿತಳಾದವಳು ಸ್ವತಂತ್ರ ಲೈಂಗಿಕ ಜೀವನ ಸಾಗಿಸಲು ಅರ್ಹಳೆಂದು ಸಾರಿದ್ದು ಗಮನಾರ್ಹ. ಆದರೆ ಶೋಚನೀಯ ಸಂಗತಿ.

ವರ್ಣ ಸಂಕರದಿಂದ ಶೋಷಣೆಗೊಳಗಾದ ಹೆಣ್ಣನ್ನು ಶೋಷಿಸತೊಡಗಿದ್ದು ಎಂಥ ವಿಪರ್ಯಾಸ! ಆದರೆ ಅನುಯಾಯಿಗಳು ಇದನ್ನು ಸಾಧ್ಯವಾಗಿಸಿದರು. ಅವರು ಎಲ್ಲಮ್ಮನನ್ನು ಮನಶಾಸ್ತ್ರೀಯ ದೃಷ್ಟಿಯಿಂದ. ವಿಶ್ಲೇಷಿಸುತ್ತ. ಆಕೆಯಲ್ಲಿ ಪುರುಷ ದ್ವೇಷವಿತ್ತು ಅದರ ಫಲ ಶ್ರುತಿಯೇ ಕುಟುಂಬ ಜೀವನದ ತಿರಸ್ಕರಣೆ ಹಾಗೂ ದೇವದಾಸಿ ಪದ್ಧತಿಯೆಂದು ಸಾರಿದ್ದಾರೆ.

ಇದರಲ್ಲಿ ಮೇಲ್ವರ್ಗದವರ ಹಾಗೂ ಪಟ್ಟಭದ್ರರ ಪಿತೂರಿ ಮುಖ್ಯವಾಗಿದೆ. ಏಕೆಂದರೆ ಉಚ್ಚವರ್ಗದವರು ತಮ್ಮನ್ನು ಸಾಮಾನ್ಯ ಭಕ್ತರೆಂದು ಕರೆದುಕೊಂಡು ದೇವಿಗೆ ಸೇವೆ ಸಲ್ಲಿಸುತ್ತಾರೆಯೇ ವಿನಃ ಸೂಳೆ ಮುತ್ತು ಕಟ್ಟಿಕೊಳ್ಳುವುದಿಲ್ಲ.

ಮಾದರ. ತಳವಾರ. ಹರಿಜನ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಹೆಣ್ಣುಮಕ್ಕಳು ಇದನ್ನು ಕಟ್ಟಿಕೊಳ್ಳುತ್ತಾರೆ ಎನ್ನುವುದು ಮನ ಕಲಕುವ ವಾಸ್ತವ ಹೀಗೆ. ಹಲವು ಗೂಢತೆಗಳನ್ನಡಗಿಸಿಕೊಂಡ ಎಲ್ಲಮ್ಮ ಮಣ್ಣಿನ ಮಗಳೆಂಬುದನ್ನು ಅನ್ವರ್ಥಗೊಳಿಸುವಂತಿದ್ದಾಳೆ.

ಎಲ್ಲಮ್ಮನ ಭಕ್ತರಾದ ಜೋಗತಿ. ಜೋಗಪ್ಪರು ಅವರ ಸೇವಾ ವಿಧಾನ ಹಾಗೂ ನಂಬಿಕೆಗಳು. ಚೌಡಕಿ ಹಾಡುಗಳು ಮತ್ತು ಪರಕೆಗಳು ಎಲ್ಲಕ್ಕಿಂತಲೂ ಮುಖ್ಯವಾಗಿ ಪವಿತ್ರ ಹೆಸರಿನ ವೇಶ್ಯಾ ಪದ್ಧತಿ ಇವು ಆಗೆದಷ್ಟೂ ಬರುವ ಮಣ್ಣಿನಂತಿವೆ. ಸಾಮಾನ್ಯವಾಗಿ ಎಲ್ಲ



ಶಕ್ತಿ ದೇವತೆಗಳಿಗೆ ವರ್ಷದಲ್ಲಿ ಒಂದೋ ಎರಡೋ ಜಾತ್ರೆಗಳು ಇರುತ್ತವೆ ಆದರೆ ಸವದತ್ತಿ ಎಲ್ಲಮ್ಮನಿಗೆ ವರ್ಷವೆಲ್ಲ ಹರಿ ಜಾತ್ರೆ.

ಪ್ರತಿ ಹುಣ್ಣಿಮೆಯೂ ದಿವ್ಯವಾದ ಕಾಲ. ಆಗಲೇ ಹಾಡುಗಳ ಮಹಾಪೂರ. ಎಲ್ಲಮ್ಮ ನಾದಕ್ಕೆ ಮೈದುಂಬುವುದು. "ನನ್ನ ಕ್ಷೇತ್ರಕ್ಕೆ ಪ್ರತಿದಿನ ಹೊಸ ಭಕ್ತರು ಬರುತ್ತಿರಬೇಕು' ಎಂಬುದು ಎಲ್ಲಮ್ಮನ ಆಶಯವಂತೆ.

ಅದರಂತೆ ಹಳೆಯ ಭಕ್ತಿಕೋಟಿಯ ಜೊತೆಗೆ ಹೊಸಬರ ಯಾತ್ರೆ ನಡೆದಿರುತ್ತದೆಂಬುದು ನಂಬಿಕೆ. ಕೂಡಲ ಸಂಗಮದಲ್ಲಿ ಶರಣ ಪ್ರಾಧಾನ್ಯವಿರುವಂತೆ ಎಲ್ಲಮ್ಮನ ಜಾತ್ರೆಯಲ್ಲಿ ಜೊಗತಿಯರದೇ ಮೇಲುಗೈ ಎಂದು ಜನಪದರು ಸಾರಿದ್ದಾರೆ.

ವಿಶೇಷ ಸಂದರ್ಭಗಳಲ್ಲಿ ಎಲ್ಲಮ್ಮನ ಗುಡ್ಡಕ್ಕೆ ಭೇಟಿ ನೀಡಿದಾಗ ಇದು ಉತ್ಪ್ರೇಕ್ಷೇ ಎನಿಸುವುದಿಲ್ಲ. ಜೋಗತಿಯರೊಂದಿಗೆ. ಜೋಗಪ್ಪರೂ ಭಿಕ್ಷೆ ಬೇಡುವುದರಲ್ಲಿ ಸ್ಪರ್ಧೆ ನಡೆಸುತ್ತಾರೆ. ಹಾಡು. ಕುಣಿತ. ಚೌಡಿಕೆಗಳು. ಗುಂಗು ಹಿಡಿಸುವಂತಿರುತ್ತವೆ. ವರ್ಣರಂಜಿತವಾಗಿಯೂ ಇರುತ್ತವೆ.

**ಎಲ್ಲಿ ಕಾಣೆಲ್ಲಿ ಕಾಣೆ**

"ಎಲ್ಲಮ್ಮನಂಥಾಕಿನ್ ಎಲ್ಲಿ,ಕಾಣೆಲ್ಲಿ ಕಾಣೆ" ಎಂದು ಸಂತ ಶಿಶುನಾಳ ಶರೀಫರು ಹಾಡಿ ಹೊಗಳಿದ್ದಾರೆ "ಗಂಡೊಯ್ದು ಹೆಣ್ಣು ಮಾಡುವ. ಹೆಣ್ಣೊಯ್ದು ಗಂಡು ಮಾಡುವ ಮಹಾಮಾಯಕಾರತಿ" ಆಕೆ ಶರಿಫರಿಂದಲೇ "ಬಾಳ ಮಂದಿನ ಬತ್ತಲ ಮಾಡಿದಿ ಬೇವಸುಡಿಸಿ ಮೋಜ ನೋಡಿದಿ" ಎಂದೂ ಕೈವಾರಿಸಲ್ಪಟ್ಟವಳು.

ಸಿದ್ಧ ಸಂಪ್ರದಾಯದವರು ತನ್ನನ್ನು ವಿರೋಧಿಸಿದರೆಂದು ಅವರಿಗೆ ತಕ್ಕ ಪಾಠ ಕಲಿಸಿದ ಸಂಗತಿಯೂ ದಾಖಲಾದದ್ದಿದೆ.

ಮುನ್ನೂರಾ ಅರವತ್ತು ಸಿದ್ಧರು ಗುಡದಾಗ
ಆಳ್ವಿಕೆ ಮಾಡ್ತಾರೋ ಬಲ್ಲಾಂಗ
ಚಕ್ರ ಹತ್ಯಾರ ತಯಾರ ಮಾಡ್ಯಾಳ
ಸಿದ್ಧರ ಕೊಳದಾಗ್ಯಾಗಳಿಗ್ಯಾಗ

ಎನ್ನುವಲ್ಲಿ ತಾಂತ್ರಿಕರಾದ ಸಿದ್ಧರನ್ನು ಆ ವಿದ್ಯೆ ಮೂಲಕವೇ ಬಗ್ಗು ಬಡಿವದ್ದನ್ನು ಗಮನಿಸಬಹುದು ಶಾಕ್ತ ಪಂಥೀಯರಿಗೂ ಸಿದ್ಧರಿಗೂ ಇದ್ದ ಸಂಬಂಧವನ್ನು ಇದು ಸೂಚಿಸುತ್ತದೆ.

ಏಳು ಮಂದಿ ಸಿದ್ಧರನ್ನು ಗವಿಯಲ್ಲಿ ಹಾಕಿ ಮೇಲೆ ಗುಂಡು ಜಡಿದುದರ ಉಲ್ಲೇಖವೂ ಒಂದು ಹಾಡಿನಲ್ಲಿದೆ. ಇಷ್ಟೇ ಅಲ್ಲದೆ ಎಲ್ಲಮ್ಮನ ಗುಡ್ಡದಲ್ಲಿ ಪ್ರಸಿದ್ಧವಾದ ಗೀತೆ ಮತ್ತೊಂದಿದೆ.

"ವಾಸುಳ್ಳ ಹುಡುಗನ್ ಮೀಸಿಯ ತೇಗಿಸೀದೆ" ಎಂಬುದು ಎಲ್ಲಮ್ಮನ ಸಾಮರ್ಥ್ಯ ಸೂಚಿತವಾದದ್ದೆ.

ಇನ್ನು ಐತಿಹಾಸಿಕ ವ್ಯಕ್ತಿಯಾದ ಓರಂಗಲ್ಲಿನ ಪ್ರತಾಪರುದ್ರನನ್ನು ಬಗ್ಗು ಬಡಿದು ಅವನಿಗೆ ಜಗ ಹೊರೆಸಿ. ಸೀರೆ ಉಡಿಸಿ ಪಾಠ ಕಲಿಸಿದ ಎಲ್ಲಮ್ಮನನ್ನು ಜನಪದರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಹೆಣ್ಣು ದೇವತೆಯನ್ನು ನಂಬದ ಓರ್ಗಲ್ಲಿರಾಯ ಎಲ್ಲಮ್ಮನನ್ನು ಕಾಮಿಸಿದ ತಪ್ಪಿಗೆ ಭಾರೀ ಬೆಲೆ ತೆರಬೇಕಾಗುತ್ತದೆ. ಅವನಿಗೆ ನಾನಾ ಬೇನೆ ತರುತ್ತಾಳೆ. ಆಗವನ ಪ್ರತಿಕ್ರಿಯೆ. ನೋಡಿ

"ಚಂದುಳ್ಳ ಕೊಡ ಹೊತ್ತೇನಂತಾನ
ಓರ್ಗಲ್ಲ್ ರಾಯಾ
ದಿಂಗಿ ಬಿಂಗಿ ಕುಣಿದೇನಂತಾನ ಓರ್ಗಲ್ಲರಾಯಾ
ದಿಂಗಿ ಬಿಂಗಿ ಕುಣಿದುತಾನು ಹೆಂಡ್ರಮಕ್ಕ್ಳ ಬಿಟ್ಟಾನ"

ಗುಡ್ಡದಲ್ಲಿ ತಿರುಗಾಡುವ ಜೋಗತಿ ಜೋಗಪ್ಪರು ಜೋಗತಿ ಸಂಪ್ರದಾಯದ ಪ್ರಚಾರಕರೇ ಸರಿ

ಜಾತ್ರೆಯ ಸಮಯದಲ್ಲಂತೂ ಹೊಟ್ಟೆ ಪಾಡಿನ ಚಿಂತೆಯಿಲ್ಲವಲ್ಲ.

'ಜಗಪಾವನ' ಎಂಬ ಹಾಡು ಜೋಗತಿಯೊಬ್ಬಳು ಹಾಡುವಂಥದ್ದು, ಎಲ್ಲಮ್ಮನ ಜಾತ್ರೆಯ ಚಿತ್ರವನ್ನು ಶಬ್ಧಗಳಲ್ಲಿ ಕಟ್ಟಿಕೊಡುತ್ತದೆ.

ನಿನ್ನ ಜಾತ್ರೆಗೆ ಬರುವುದ ಏನಚಂದ
ಬಂದ ಇಳವೂರ ಜೋಗುಳ ಭಾವಿಮುಂದ
ಗಂಧದ ಉಟಗೀ ಉಡುವಾಗ ಏನ ಛಂದ
ಬಂದ ಕಳವೂರ ಜೋಗುಳ ಭಾವಿಮುಂದ
ಗುಡ್ಡ ಹತ್ತತಾರ ಏನು ಛಂದ
ಕಾಯಿ ಒಡಿತಾರ ಶಿಖರ ಕಂಡ
ಉಗರ ಗೊಳ್ದಾಗ ನಿನ್ನ ಬೆಳಕ ಅಲ್ಲಿ
ಸುತಿಯ ಸಾರುವುದು ದೂರತನಕ

ಮಾಟಮಂತ್ರಗಳ ಅವಿಭಾಜ್ಯ ಅಂಗವಾದ "ಬೆತ್ತಲಸೇವೆ" ಇಲ್ಲಿನ ಮುಖ್ಯ ಸಂಪ್ರದಾಯಗಳಲ್ಲೊಂದು. ಆದರೆ ಸರಕಾರ ಇದನ್ನು ನಿಷೇಧಿಸಿರುವುದರಿಂದ ಕತ್ತಲಲ್ಲಿ ಗುಪ್ತವಾಗಿ ನಡೆಯುವ ಆಚರಣೆಯಾಗಿದೆ. ಇದನ್ನು ಗೂಢವಾಗಿ "ಅಂಬರದ ಉಟಗಿ" ಎಂದು ಕರೆಯುವುದು ಪರಿಪಾಠ.

"ಮಂದಿರ್ಲಿ ಮಾನಿರ್ಲಿ ಬತ್ತಲ ಕರಿಸ್ಯಾಳ ಬಪ್ಪರೆ ಎಲ್ಲವ್ವ" ಎಂಬ ಮಾತು ಸಮರ್ಥಿಸುತ್ತದೆ.

ಸಿದ್ಧರಿಗೆ ಧಕ್ಕೆ ಕೊಟ್ಟ ಎಲ್ಲಮ್ಮ ರಾವಣನ ಭತ್ತ ಅಳಿದಾಕೆಯೆಂದು. ಸೀತೆಯ ಅವತಾರವೇ ಆಕೆ ಎಂದೂ ದಾಖಲಿಸಿದ್ದಾರೆ ಜೋಗತಿಯರು.

ಇಂಥ ಎಲ್ಲಮ್ಮನಿಗೆ ಆಂಧ್ರ. ಮಹಾರಾಷ್ಟ್ರ. ಗೋವಾಗಳಲ್ಲಿ ಅಸಂಖ್ಯ ಭಕ್ತರಿದ್ದಾರೆ. ಸವದತ್ತಿಗೆ ಬರಲಾರದವರು. ತುಳಜಾಪುರಕ್ಕೋ ಗೋಕಟನೂರಿಗೆ ಹೋಗಿ ಹರಕೆಯನ್ನು ಮುಟ್ಟಿಸುವುದೂ ಇದೆ.



ಬೆಳಗಾಂವ ಜಿಲ್ಲೆಯ ಸವದತ್ತಿ ಪ್ರಮುಖ ಎಲ್ಲಮ್ಮ ಪೀಠ. ಇದು ರಟ್ಟರ ರಾಜಧಾನಿಯಾಗಿ ಮೆರೆದ ಸ್ಥಳ.

ಕಲ್ಲಿನ ಬೆಟ್ಟದ ಏಳು ಕೊಳ್ಳದಲ್ಲಿ ಎಲ್ಲಮ್ಮನ ದೇವಾಲಯವಿದೆ. ವಿಸ್ತಾರವಾದ ಬಯಲಿನಲ್ಲಿ ಮಲಪ್ರಭಾ ನದಿ ಹರಿಯುತ್ತದೆ.

ಎಲ್ಲಮ್ಮನ ಗುಡಿಯ ಸಮೀಪ ಮಾತಂಗಿ. ಪರಶುರಾಮ. ಹಾಗೂ ಜಮದಗ್ನಿಯರ ಗುಡಿಗಳಿವೆ. ಉಳಿದಂತೆ ಬಸದಿಗಳಿವೆ. ಇವೆಲ್ಲ ಸುಮಾರು ೧೫ ನೆಯ ಶತಮಾನದವೆಂದು ವಿದ್ವಾಂಸರ ನಿರ್ಣಯ.

ವಾಸ್ತು ಶಿಲ್ಪದ ದೃಷ್ಟಿಯಿಂದ ಎಲ್ಲಮ್ಮ ದೇವಾಲಯ. ಮೊದಲಿಗೆ ಜೈನ ಬಸದಿಯಾಗಿದ್ದು ಅಲ್ಲಿಂದ ಮೂಲ ಮೂರ್ತಿಯನ್ನು ಸ್ಥಳಾಂತರಿಸಿ ದೇವಿಯ ಮೂರ್ತಿಯನ್ನು ಅಳವಡಿಸಲಾಗಿದೆ ಎಂದು ಹೇಳಬಹುದು.

ಈ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ "ಬತ್ತಲೆ ಸೇವೆ"ಯಂಥ ಆಚರಣೆ ಇರುವುದು. ಕೆಲವೆಡೆ ಜೈನರೂ ಎಲ್ಲಮ್ಮನಿಗೆ ನಡೆದುಕೊಳ್ಳುವದು ಹಾಗೂ ದೇವಾಲಯದ ಪ್ರಾಕಾರದಲ್ಲಿ ತೀರ್ಥಂಕರನ ಶಿಲಾ ಮೂರ್ತಿ ಇರುವದು. ಇದು ಮೊದಲು ಜೈನ ದೇವಾಲಯ ಆಗಿತ್ತೆಂಬುದಕ್ಕೆ ಪುಷ್ಟಿ ನೀಡುತ್ತದೆ.

ಮೊದಲೇ ಹೇಳಿದಂತೆ ಎಲ್ಲಮ್ಮನ ಗುಡ್ಡದಲ್ಲಿ ಜೋಗತಿಯರದು ಹಿರಿಯ ಪಾತ್ರ. ಅವರನ್ನು ಎಲ್ಲಮ್ಮನ ಪ್ರತಿ ರೂಪವೆಂದೇ ಭಾವಿಸಲಾಗಿದೆ. ಅಲ್ಲದೆ ನಿತ್ಯ ಸುಮಂಗಲೆಯರೆಂದೂ ಮಹತ್ವದ ಸ್ಥಾನ ನೀಡಲಾಗಿದೆ.

ಸಾಂಸ್ಕೃತಿಕವಾಗಿ ಇವರು ಎಷ್ಟು ಮಹತ್ವದ ಪಾತ್ರ ವಹಿಸುವರೋ, ಅಷ್ಟೇ ಸಾಮಾಜಿಕ ಅಧಃಪತನಕ್ಕೂ ಪ್ರಮುಖ ಪಾತ್ರಧಾರಿಗಳೆಂಬುದು ಬದುಕಿನ ವ್ಯಂಗ್ಯಗಳಲ್ಲೊಂದಾಗಿದೆ.

**ಹೋಗೂನ ಜಾತೂರಿಗೆ**

ಭಾರತೀಯ ಸಂಸ್ಕೃತಿಯಲ್ಲಿ ಹಬ್ಬ ಹಾಗೂ ಜಾತ್ರೆಗಳಿಗಿರುವ ಸ್ಥಾನ ವಿಶಿಷ್ಟವಾದುದು. ಅದರಲ್ಲೂ ಜಾತ್ರೆಗಳು ವಿವಿಧ ಜನರ ಕೊಡುಕೊಳ್ಳುವಿಕೆಗೆ ಸಹಾಯಕಾರಿಯಾಗಿರುತ್ತವೆ.

ವಿವಿಧ ಕೋಮುಗಳವರೂ ಸೌಹಾರ್ದದಿಂದ ಕೂಡಿರುವ ಅನನ್ಯ ಸಂದರ್ಭವದು. ಹೆಜ್ಜೆ ಮೇಳವಿರಲಿ. ಭಜನೆಮೇಳವಿರಲಿ. ಒಟ್ಟಾರೆ ಕುಣಿದು ಹಾಡಿ ಒಂದೊಂದು ಕ್ಷಣವನ್ನೂ ಅಪೂರ್ವವಾಗಿ ಕಳೆವ ಅಮೃತ ಗಳಿಗೆಯದು.

ಜಾತ್ರೆಗಳಿಗೆ ಬರುವವರೆಲ್ಲರಿಗೂ ಏಕೋದ್ದೇಶವಿರುವುದಿಲ್ಲ. ಆರಾಮವಾಗಿ ಕಾಲ ಕಳೆಯಲೆಂದೇ ಬರುವವರು ಕೆಲವರಾದರೆ ಮನೆ ದೇವರಿಗೆ ಹರಕೆ ಮುಟ್ಟಿಸಲು ಬರುವವರು ಹಲವರು. ವರ ಕನ್ಯೆ ತೋರಿಸಲು ಬರುವವರು. ಹೊಟ್ಟೆ ಪಾಡು ಕಳೆಯುತ್ತದೆಂದು ಭಿಕ್ಷಾಟನೆಗೆ ಬರುವವರೂ ಇದ್ದಾರೆ. ಅದೇ ಸಂದರ್ಭ ಕಳ್ಳಕಾಕರಿಗೆ ಪ್ರಿಯವಾದದ್ದು. ಗದ್ದಲದ ಮಧ್ಯೆ ಕತ್ತರಿಯೊಡನೆ ತಾವು ಖುಷಿಯಾಗಿ. ಕಳಕೊಂಡವರನ್ನು

ದುಃಖಕ್ಕೆ ದೂಡುವ ದೃಶ್ಯ ಸರ್ವೇಸಾಮಾನ್ಯ. ಈ ಮಧ್ಯೆ ಸಂಸ್ಕೃತಿಯನ್ನು ಸಂಶೋಧನಾತ್ಮಕವಾಗಿ ಅಭ್ಯಸಿಸುವವರಿಗೆ ಸುಗ್ಗಿ. ವಿವಿಧ ಹಂತಗಳಲ್ಲಿನ ಆಚರಣೆಗಳನ್ನು ಮೈಯೆಲ್ಲಾ ಕಣ್ಣಾಗಿ ದಾಖಲಿಸಿಕೊಳ್ಳುತ್ತಿರುತ್ತಾರೆ. ದೇವದೇವತೆಗಳಿಗೆ ಸಂಬಂಧಿಸಿದ. ಹಾಡುಗಳನ್ನು ಸಂಗ್ರಹಿಸುವರು. ಸತತವಾಗಿ ಕಾರ್ಯನಿರತರಾಗಿರುವುದನ್ನು ಕಾಣಬಹುದು. ಅಂಥ ಕುತೂಹಲಗಳ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಳ್ಳುವ. ತಲೆ ಹಿಡುಕರಂಥ ವ್ಯಕ್ತಿಗಳೂ ಖಳರಂತೆ ವಿಜೃಂಭಿಸುತ್ತಾರೆ.

ಒಟ್ಟು ಬಿಡಿ ಬಿಡಿಯಾಗಿದ್ದರೂ. ಒಂದು ಧ್ವನಿಯನ್ನು ಹೊರಡಿಸುವ ಜಾತ್ರೆಯಿದು. 'ಜಾತ್ರೆ', 'ಯಾತ್ರೆ' ಶಬ್ಧದಿಂದ ನಿಷ್ಪನ್ನವಾಗಿದೆ. ಯಾತ್ರೆಗೆ ಹೋಗುವ ಪದ್ಧತಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. (ಆಶ್ರಮಗಳಲ್ಲಿ ಕೊನೆಯದಾದ "ವಾನಪ್ರಸ್ಥ" ಇದನ್ನೆ ಸೂಚಿಸುತ್ತದೆ.)

ಸಾಧಾರಣವಾಗಿ ತೀರ್ಥಕ್ಷೇತ್ರಗಳಿಗೆ ಯಾತ್ರೆ ಹೋಗುವುದು ಪರಿಪಾಠ. ಲೌಕಿಕ ಬದುಕು ಬೇಸರವಾದಾಗ, ಅಥವಾ ಮೇಲ್ನೋಟಕ್ಕೆ ತಂತಮ್ಮ ಕರ್ತವ್ಯ ಪೂರೈಸಿದೆಯೆನಿಸಿದಾಗ ಯಾತ್ರೆಗೆ ಹೊರಡುವುದು ಸಹಜವಾಗಿತ್ತು.

ಆಗ ಪ್ರಕೃತಿ ಪರಿಸರದಲ್ಲಿರುವ ತೀರ್ಥಕ್ಷೇತ್ರಗಳತ್ತ ಕಾಲು ಹಾಕುತ್ತಿದ್ದರು.

ಶಿಷ್ಟರ ಯಾತ್ರೆ ಜನಪದರ ಜಾತ್ರೆಯಾಯಿತು. ಜಾತ್ರೆ ಮನರಂಜನೆಯ ಸಾಧನೆಯೂ ಆಯಿತು. ದೇವರ ಆರಾಧನೆ ಮುಗಿದರೂ ಅಲ್ಲಿರುವ ಇನ್ನಿತರ ಆಕರ್ಷಣೆಗಳಿಂದಾಗಿ. ಒಂದೆರಡು ದಿನ ತಂಗುವ ಮನೋಭಾವ ಜನರಲ್ಲಿದೆ.

ಆದರೆ ಸವದತ್ತಿಯ ಎಲ್ಲಮ್ಮನ ಗುಡ್ಡದಲ್ಲಿ ಜಾತ್ರೆಯಾದ ಒಂದು ತಿಂಗಳವರೆಗೂ ಗದ್ದಲವೇ ಗದ್ದಲ. ಕೆಲವು ಜಾತ್ರೆಗಳಲ್ಲಿ ತೇರೆಳೆಯುವುದುಂಟು ಅದು ಜಾತ್ರೆಯ ಶಿಖರವೆಂದೇ ಹೇಳಬಹುದು. ಆದರೆ ಸವದತ್ತಿಯ ಎಲ್ಲಮ್ಮನಿಗೆ ಮಾಡುವ ಜಾತ್ರೆಯಲ್ಲಿ ತೇರೆಳೆಯುವುದಿಲ್ಲ. ಪಾಲಕಿ ಸೇವೆ ಇರುತ್ತದೆ.

ಎಲ್ಲಮ್ಮನ ಜಾತ್ರೆ ದಸರೆಯೊಂದಿಗೆ ಆರಂಭ. ನಂತರ ಸೀಗಿ ಹುಣ್ಣಿಮೆ. ಗೌರಿ ಹುಣ್ಣಿಮೆಗಳಲ್ಲಿ ಗುಡ್ಡದ ತುಂಬ ಚಟುವಟಿಕೆ.

ಗುಡ್ಡಹತ್ತುವ ಜೋಗತಿಯರು ಬೆಳದಿಂಗಳ ಪ್ರಿಯೆಯಾದ ಎಲ್ಲಮ್ಮನನ್ನು ಕುರಿತು ಹೀಗೆ ಹಾಡುತ್ತಿರುತ್ತಾರೆ.

ಜಳಕ ಮಾಡಬೇಕ
ದೇವಿ ನಿನ್ನ ಸೇವೆಗೆ ಬರಬೇಕ
ಭಂಡರಾನಾ ಸ್ನಾಳಿ
ಭಂಡಾರಾನ್ಹೊ ಚ್ಯಾಳಿ
ಭಂಡಾರ ತೂರಿ ನಗತಾಳಿ

ತಿಂಗಳ ನ್ಹಾ ಸ್ನಾಳಿ
ತಿಂಗಳನ್ಹೊ ಚ್ಯಾಳಿ
ತಿಂಗಳ ಕುಡದು ನಗತಾಳಿ



ಎಲ್ಲಮ್ಮದೇವಿಗೆ 'ಜಳಕ' ಮಾಡಿ ಪೂಜೆ ಸಲ್ಲಿಸಬೇಕೆಂದು ನಿರ್ಬಂಧವಿದೆ.

ಈಕೆ ಜೈನರ ಪದ್ಮಾವತೀಯಕ್ಷಿಯಂತೆ ಜಲಸಂಪ್ರದಾಯದ ದೇವತೆಯಾದ್ದರಿಂದ ಇದನ್ನು ಕಡ್ಡಾಯವಾಗಿ ಪಾಲಿಸುತ್ತಿರಬೇಕು. ಎಲ್ಲಮ್ಮನ ಗುಡ್ಡದಲ್ಲಿರುವ ಎಣ್ಣೆಗೊಂಡ. ಅರಿಶಿಣಗೊಂಡಗಳು ಮತ್ತು ಜೋಗ್ಯಭಾವಿ ಎಂಬ ಕೆರೆಗಳಿಗೆ ತುಂಬ ಮಹತ್ವವಿರುವುದು ಈ ಕಾರಣದಿಂದಲೇ.

ಇಲ್ಲಿ ಇನ್ನೊಂದು ಅಂಶವೂ ಗಮನಾರ್ಹ. ಒಮ್ಮೆ ಪರಿಶಿಷ್ಟಳಾದ ಒಮ್ಮೆ ವೀರಶೈವಳಾದ, ಮಗದೊಮ್ಮೆ ಜಮದಾಗ್ನಿಯ ಪತ್ನಿಯಾದ್ದರಿಂದ ಬ್ರಾಹ್ಮಣಳಾದ ಎಲ್ಲಮ್ಮ ಸಂಸ್ಕೃತೀಕರಣಕ್ಕೊಳಗಾದವಳೆಂಬುದು. ಎಲ್ಲಮ್ಮನ ಬದುಕಿನಲ್ಲಿ ನೀರು ಪ್ರಧಾನ ಪಾತ್ರ ವಹಿಸಿದೆಯೆಂಬುದನ್ನು ಮರೆಯುವಂತಿಲ್ಲ. ಆಕೆ ಅನುಷ್ಠಾನಕ್ಕೆ ತರುತ್ತಿದ್ದುದು ಮಲಪ್ರಭೆಯ ನೀರು.

ತನ್ನ ಕುಷ್ಠರೋಗವನ್ನು ನಿವಾರಿಸಿಕೊಂಡುದು ಜೋಗುಳ (ಜೋಗಿಗಳ) ಭಾವಿಯಲ್ಲಿ ಇತ್ಯಾದಿ. ಮಗ ಪರಶುರಾಮ ಕೂಡ ಇಪ್ಪತ್ತೊಂದು ಸಲ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನು ಸಂಹರಿಸಿ ತನ್ನ ಕೊಡಲಿಯನ್ನು ತೊಳೆದುಕೊಂಡದು ಸಮುದ್ರದಲ್ಲಿ. ಈ ದೃಷ್ಟಿಯಿಂದ ಎಲ್ಲಮ್ಮನ ಭಕ್ತರೂ ಶಿಷ್ಟರನ್ನು ಅನುಕರಿಸುತ್ತದಂಡ ನಮಸ್ಕಾರ ಮುಂತಾದ ಹರಕೆಗಳನ್ನು ತೀರಿಸುತ್ತಾರೆ.

ಎಲ್ಲ ಹುಣ್ಣಿಮೆಗಳು ಸಂಭ್ರಮದವೇ ಆದರೂ ಎಲ್ಲಮ್ಮನ ಬದುಕಿನ ಮಹತ್ವದ ಘಟನೆಗಳಾದ ಆಕೆ ವಿಧವೆಯಾಗುವುದು ಮತ್ತೆ ನಾಲ್ಕು ತಿಂಗಳ ನಂತರ ಮುತ್ತೈದೆಯಾಗುವದು ಈ ದೃಷ್ಟಿಯಿಂದ ರಂಡೆ ಹುಣ್ಣಿಮೆ ಅಥವಾ ಹೊಸ್ತಿಲ ಹುಣ್ಣಿಮೆ ಹಾಗೂ ಭಾರತ ಹುಣ್ಣಿಮೆಗಳು ಪ್ರಮುಖವೆನಿಸುತ್ತವೆ.

ಜನಪದರು 'ರಂಡೆ ಹುಣ್ಣಿಮೆ' ಎಂದು ಕರೆಯುವ ದಿನ ಶೋಕಾಚರಣೆಯ ದ್ಯೋತಕ.

**ಇದಕ್ಕೊಂದು ಕಥೆಯಿದೆ**

ಜಮದಗ್ನಿಯು ಇಂದ್ರನಿಂದ ಕಾಮಧೇನುವನ್ನು ಬೇಡಿ ಪಡೆದಿದ್ದನಂತೆ. ಅದರಿಂದ ಅತಿಥಿ ಸತ್ಕಾರ ಅವನಿಗೆ ಸರಾಗವಾಗಿತ್ತು. ಒಮ್ಮೆ ಕಾರ್ತವೀರ್ಯಾರ್ಜುನನೆಂಬ ರಾಜ ಅಲ್ಲಿಗೆ ಬಂದಾಗ ಯಥೋಚಿತವಾಗಿ ಸತ್ಕರಿಸಿದನಂತೆ. ಅಷ್ಟು ಜನರನ್ನು ಸಂತೃಪ್ತರನ್ನಾಗಿಸಿದ್ದು ರಾಜನಿಗೆ ವಿಸ್ಮಯ ಹುಟ್ಟಿಸಿತು.

ಎಲ್ಲಮ್ಮ ಧೇನುವಿನ ಬಗ್ಗೆ ಅವನಿಗೆ ತಿಳಿಸಿದಳು. ಆತ ಅದನ್ನು ತನಗೆ ಕೊಡುವಂತೆ ಜಮದಗ್ನಿಯನ್ನು ಪೀಡಿಸಿದ. ಋಷಿ ಒಪ್ಪಲಿಲ್ಲ. ರಾಜ ಸೈನಿಕರನ್ನು ಬಿಟ್ಟು ಅದನ್ನು ಅಪಹರಿಸಲು ಯತ್ನಿಸಿದ. ಧೇನು ಹೂಂಕರಿಸಿತು. ಅಸಂಖ್ಯ ಸೈನಿಕರನ್ನು ಸೃಷ್ಟಿಸಿ ಸ್ವರ್ಗಕ್ಕೆ ಹೋಯಿತು. ಘೋರ ಕಾಳಗದಲ್ಲಿ ಮುನಿ ಸೋತ. ಕಾರ್ತವೀರ್ಯ ಅವನ ತಲೆಯನ್ನು ಕಡಿದ. ಎಲ್ಲಮ್ಮ (ರೇಣುಕಾ) ದುಃಖದಿಂದ ಮಗನನ್ನು ನೆನೆಯಲು ಪರಶುರಾಮ ತಕ್ಷಣ ಧಾವಿಸಿ

ಬಂದ ಮಾರ್ಗಶೀರ್ಷ ಶುಕ್ರವಾರ ತಂದೆಯ ಮೃತದೇಹ ಕಂಡ. ಕ್ಷತ್ರಿಯರನ್ನೆಲ್ಲಾ ನಿರ್ಮೂಲ ಮಾಡುವೆನೆಂದು ಪ್ರತಿಜ್ಞೆ ಮಾಡಿದ.

ಮೊದಲು ಕಾರ್ತವೀರ್ಯನನ್ನು ಕೊಂದ ನಂತರ ಅಮೃತ ತಂದು ತಂದೆಯ ಕಳೇಬರಕ್ಕೆ ತಳಿದು ಅವನನ್ನು ಬದುಕಿದ. ಆಗ ಋಷಿಗಳು ದಂಪತಿಗಳನ್ನು ಕೂಡಿಸಿ ವಿಧ್ಯುಕ್ತವಾಗಿ ಮತ್ತೆ ಲಗ್ನ ಮಾಡಿದರು. ವೇದಪಠಣ ನಡೆಯಿತು.

ಎಲ್ಲಮ್ಮ ಮತ್ತೆ ಮುತ್ತೈದೆಯಾದಳು. ಇದರ ಫಲವಾಗಿ ಆಕೆ ವರ್ಷದಲ್ಲಿ ನಾಲ್ಕು ತಿಂಗಳು ವೈಧವ್ಯವನ್ನು ಎಂಟು ತಿಂಗಳು ಮುತ್ತೈದೆತನವನ್ನೂ ಅನುಭವಿಸುವಂತಾಯ್ತು.

ಈ ನಂಬಿಕೆಯನ್ನು ಎಲ್ಲಮ್ಮನ ಭಕ್ತರು ಪುನರಾವರ್ತಿಸುತ್ತಾ ಬರುತ್ತಿರುವುದರ ಫಲವೇ ರಂಡೆ ಹುಣ್ಣಿಮೆಯ ಆಚರಣೆ ಹಿಂದೂ ಧರ್ಮದಲ್ಲಿ ವೈಧವ್ಯವು. ಒಂದು ಅಭಿಶಾಪವೆಂಬುದನ್ನು ಈ ಆಚರಣೆ ಪ್ರತಿನಿಧಿಸುತ್ತದೆ.

ಸಾಮಾನ್ಯ ಭಕ್ತರು ಆ ಸಂದರ್ಭದಲ್ಲಿ ಗುಡ್ಡಕ್ಕೂ ಹೋಗುವದು ಕಡಿಮೆ. ಜೋಗಪ್ಪ ಜೋಗತಿಯರು ಗುಡ್ಡದ ತುಂಬ ಶೋಕಭರಿತ ಗೀತೆಗಳನ್ನು ಹಾಡುತ್ತಾ ತಿರುಗುತ್ತಿರುತ್ತಾರೆ. ಈ ಹುಣ್ಣಿಮೆಯ ಮುನ್ನಾದಿನ ದೇವಿಯ ತಾಳಿ ಹಾಗೂ ಬಳೆಗಳನ್ನು ತೆಗೆದು ಬಿಟ್ಟಿರುತ್ತಾರೆ. ನಂತರ ಆಕೆಯನ್ನು ಪಲ್ಲಕ್ಕಿಯಲ್ಲಿ ಜಮದಗ್ನಿಯ ಗುಡಿಗೆ ತರುತ್ತಾರೆ. ಜೋಗತಿಯರು ಎದೆ ಬಡಿದುಕೊಳ್ಳುತ್ತಾ ಮೆರವಣಿಗೆಯಲ್ಲಿ ಸಾಗುತ್ತಾರೆ.

ಅವರು ತಮ್ಮ ಕುಂಕುಮ ಅಳಿಸಿಕೊಂಡು ಬಳೆ ಚೆಚ್ಚಿ ಒಡೆದುಕೊಳ್ಳುತ್ತಾರೆ. ಪಲ್ಲಕ್ಕಿ ಯಜ್ಞಕಾರ್ಯವಾದ ನಂತರ ತಿರುಗಿ ದೇವಿಯ ಸ್ಥಾನಕ್ಕೆ ಬರುತ್ತದೆ. ಜನರು ಊಟ ಕೂಡ ಮಾಡದೆ ಸರಸರ ಗುಡ್ಡ ಇಳಿಯ ತೊಡಗುತ್ತಾರೆ.

ಇಡೀ ವರ್ಷ ಕಾತರದಿಂದ ಕಾಯಲಾಗುವುದೆಂದರೆ ಭಾರತ ಹುಣ್ಣಿಮೆ. ದವನದ ಹುಣ್ಣಿಮೆಯ ಜಾತ್ರೆಯ ನಂತರ ಬರುವ ಜನಪದರು ಇದನ್ನು 'ಭರಾತ್ ಹುಣ್ಣಿಮೆ' ಎಂದು ಕರೆಯುತ್ತಾರೆ.

ಕಳೆದ ನಾಲ್ಕು ತಿಂಗಳು ಸೂತಕದಂತೆ ಕಳೆದ ಕಾಲ ಇಲ್ಲಿಂದ ಮಂಗಳಮಯವಾಗುವುದೆಂದು ಜನರ ನಂಬಿಕೆ. ಮುತ್ತೈದೆ ಹುಣ್ಣಿಮೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ದಿನ. ಮಾಘಮಾಸದ ಅಶ್ಲೇಷಾ ನಕ್ಷತ್ರವಿರುತ್ತದೆ. ಅಂದು ನಿಜವಾದ ಉತ್ಸವ ಮಹಾರಾಷ್ಟ್ರ, ಆಂಧ್ರ, ತಮಿಳ್ನಾಡು ಮುಂತಾದ ಕಡೆಯಿಂದ ಭಕ್ತರ ಆಗಮನ ಗುಡ್ಡದಲ್ಲಿ ಸದಾ ಕೇಳಿಬರುವ ಉದ್ಘೋಷ, 'ಉಧೋ ಉಧೊ' ಎಂಬುದು ಉಘೇಯೇ 'ಉದೋ'ಆಗಿದೆ. ಮೆಟ್ಟಿಲು ಹತ್ತಿ ಬರುವಾಗ ಆಯಾಸವಾಗಬಾರದೆಂಬ ನಂಬಿಕೆಯಿಂದ ಈ ಘೋಷಣೆ ಹಾಕುತ್ತಿರುತ್ತಾರೆ.

ಉಧೋ ಉಧೋ ಎಲ್ಲಮ್ಮಾ
ಎಕ್ಕುಲ್ಲೋ ಉಧೋ ಜೋಗುಲ್ಲೋ ಉಧೋ
ಸತ್ಯವ್ವ ಉಧೋ, ಉಧೋ
ಜಮದಗ್ನಿ ಉಧೋ ಉಧೋ
ಪರಶುರಾಮ ಉಧೋ, ಉಧೋ



ಎಲ್ಲಮ್ಮ ನಿನ್ನಾಲ್ಕ ಉಧೋ
ಎಲ್ಲಮ್ಮ ನಿನ್ನಾಲ್ಕ ಉಧೋ

ಮುಂತಾದ ವಿವರಣೆ ಬಯಸುವಂಥಹವು.

ಎಲ್ಲಮ್ಮನ ವಿಗ್ರಹ ಮೊದಲು ಪದ್ಮಾವತಿಯಕ್ಷಿಣಿಯದಾಗಿತ್ತೆಂದು ಹಲವು ವಿದ್ವಾಂಸರ ಅಭಿಪ್ರಾಯ. ಎಕ್ಕೆಲ್‌ದೇವಿ, ಯಕ್ಷಿ ಎಲ್ಲವ್ವ ದೇವಿಯೆಂಬುದು ಸಂಕ್ಷಿಪ್ತರೂಪವಿರಬೇಕು. ಎಕ್ಕಯ್ಯ, ಜೋಗಯ್ಯರೆಂಬ ಇಬ್ಬರು ಯೋಗಿಗಳಿಗೆ ಹಾಕಿದ ಜಯಕಾರ. ಜೋಗಯ್ಯೊ ಉಧೋ ಆಗಿರಬೇಕು.

ಸತ್ಯವ್ವ ಎಂಬಾಕೆ ಎಲ್ಲಮ್ಮ ಗರ್ಭಿಣಿ ಇದ್ದಾಗ. ತುಂಬಾ ಆರೈಕೆ ಮಾಡಿದ್ದಳಂತೆ. ಆಕೆಗೆ ಜಯಕಾರ ಹಾಕುವುದು ಸಹಜವಾಗಿದೆ.

ಎಲ್ಲಮ್ಮ ನಿನ್ನಾಲ್ಕ ಉಧೋ ಎಂಬ ಮಾತಿಗೂ ಹಿನ್ನೆಲೆ ಉಂಟು.

ಜಮದಗ್ನಿ ಪತ್ನಿಯ ಶೀಲ ಶಂಕಿಸಿದಾಗ ಆಕೆಯ ತಲೆಕಡಿಯಲು ತನ್ನ ನಾಲ್ಕು ಮಕ್ಕಳಿಗೆ ಆಜ್ಞಾಪಿಸಿದ. ಆದರೆ ಅವರು ಅದಕ್ಕೆ ಒಪ್ಪಲಿಲ್ಲ ಸಿಟ್ಟಿಗೆದ್ದು ಅವನು ನೀವೆಲ್ಲ ನಪುಂಸಕರಾಗಿ ಎಂದು ಶಪಿಸಿದನಂತೆ. ಇದನ್ನು ಜೋಗಪ್ಪರು ತಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಹಾಕಿರುವ ಸಾಧ್ಯತೆಯಿದೆ. ಅವರು ತಮ್ಮನ್ನ ಶಾಪಗ್ರಸ್ತರಾದ ಜಮದಗ್ನಿಯ ಪುತ್ರರು ಎಂದೇ ಕರೆದುಕೊಳ್ಳುವುದು ಇವಕ್ಕೆ ಸಾಕ್ಷಿ.

ಇನ್ನು ಕೆಲವು ಜೋಗತಿಯರು ಎಕ್ಕಯ್ಯ, ಜೋಗಯ್ಯ ಎಂದು ರಾಗವಾಗಿ ಧ್ವನಿ ತೆಗೆಯುತ್ತಿರುವದುಂಟು.

ಈ ಮೊದಲು ಉಲ್ಲೇಖಿಸಿದಂತೆ ಏಕನಾಥ, ಜೋಗನಾಥರು, ಸಿದ್ಧರು, ನಾಥ ಪಂಥದವರು. ಅವರು ತಂತ್ರ ವಿದ್ಯೆಯನ್ನು ಕರಗತ ಮಾಡಿಕೊಂಡಿದ್ದರು.

ಎಲ್ಲಮ್ಮ ಅವರಿಂದ ಉಪಕೃತೆಯಾಗಲು ಅವರಿಗೆ ನಮಸ್ಕರಿಸಿದಾಗ "ಸೂರ್ಯಚಂದ್ರರಿರುವ ತನಕ ನಮ್ಮ ನಾಮ ಜಪಿಸು" ಎಂದು ಆಶೀರ್ವದಿಸಿದ್ದರು. ಆಕೆ ಅವರ ಪಾದುಕೆಗಳನ್ನು ಕೊರಳಿಗೆ ಕಟ್ಟಿಕೊಂಡು ತಿರುಗಾಡುತ್ತಿದ್ದಳು. ಭಕ್ತರೂ ಕೂಡ ಅದನ್ನೆ ಅನುಸರಿಸುತ್ತ ಪಾದುಕಾಸರ ಕೊರಳಲ್ಲಿ ಹಾಕಿಕೊಂಡುದುದನ್ನು ಗುಡ್ಡದಲ್ಲಿ ಕಾಣಬಹುದು.

ಜಾತ್ರೆಯಲ್ಲಿ ಅಂಗಡಿ ಮುಂಗಟ್ಟುಗಳು ಪಾದುಕಾಸರ, ಭಂಡಾರ, ಕುಂಕುಮ, ಗೆಜ್ಜೆ, ಕವಡೆ ಸರಗಳಿಂದ ತುಂಬಿರುತ್ತವೆ.

ಕಣ್ಣು ತುಂಬುವ ದೃಶ್ಯ ಮುತ್ತು ಎಂದರೆ ಕಲ್ಲಿನ ಮಣಿ, ಭಂಡಾರವೆಂದರೆ ಅರಿಷಿಣ ಪುಡಿ. ಕವಡೇಸರ, ಗೆಜ್ಜೆ ಹಾಕಿದ ಮುತ್ತು ಕಟ್ಟಿಕೊಂಡು ಜೋಗತಿಯರು ತುಂಬ ವರ್ಣರಂಜಿತವಾಗಿ ಕಾಣುತ್ತಾರೆ. ಹಣೆ ತುಂಬ ಭಂಡಾರವಿರುತ್ತದೆ.

**ಗಟ್ಟುಳ್ಳವರಿಗೆ ಗೆಜ್ಜೆ ತೊಡಿಸಿದೆ**

ಜೈನ ಶ್ರಾವಕರಂತೆ ತಿರುಗಾಡುವವರು ಜೋಗತಿ, ಜೋಗಪ್ಪರು. ಎಲ್ಲಮ್ಮನ ಸೋದರನಾಥ ಮೈಲಾರಲಿಂಗನಿಗೆ ಗೊರವರಿರುವಂತೆ ಎಲ್ಲಮ್ಮನಿದ್ದಲ್ಲಿ ಇವರದೇ ಕಾರಭಾರ.

ಸೀರೆಯುಟ್ಟು ಕುಪ್ಪಸ ತೊಟ್ಟು ಜೋಗತಿಯರಂತೆ ಕಾಣಬಯಸುವ ನಪುಂಸಕರೇ ಜೋಗಪ್ಪರು. ಮೊದಲು ಗಂಡಾಗಿ ಕಾಲಕ್ರಮೇಣ ಲಿಂಗ ಪರಿವರ್ತನೆ ಹೊಂದಿದ್ದಾಗ ಹಾಗೂ ಹುಟ್ಟಾ ನಪುಂಸಕರಾಗಿದ್ದವರು, ಎಲ್ಲಮ್ಮ ಸಂಪ್ರದಾಯದಲ್ಲಿ ತಮಗೆ ಸೂಕ್ತ ಸ್ಥಾನಮಾನ ಸಿಗುವುದರಿಂದ ಜೋಗಪ್ಪರಾಗುವದು ಸಹಜವಾಗಿದೆ. ಇದು ಜೀವನೋಪಾಯದ ವಿಧಾನವೂ ಆಗಿದೆ. ಆದರೆ ಇವರಲ್ಲಿ ಅನೇಕರು ಮುಕ್ತ ಲೈಂಗಿಕತೆಗೆ ಪ್ರಚೋದನೆ ನೀಡುತ್ತಿರುವುದು ವಿಕೃತ ಮನಸ್ಸಿನ ಫಲವೇ ಆಗಿದೆ. ಕೆಲವರಂತೂ ತಲೆ ಒಡುಕರಂತೆ ವರ್ತಿಸುತ್ತ ಜನರನ್ನು ಅಡ್ಡಹಾದಿಗೆಳೆಯುತ್ತಿರುತ್ತಾರೆ.

ಇವರು ಜಾತ್ರೆಯಲ್ಲಿ ವಯ್ಯಾರ ಮಾಡುತ್ತ ನರ್ತಿಸುತ್ತಿರುತ್ತಾರೆ. ಸಲಿಂಗ ಕಾಮದಲ್ಲಿ ಆಸಕ್ತಿ ಇದ್ದವರಿಗೆ, ಸಾಹಚರ್ಯವನ್ನು ನೀಡುತ್ತಾರೆ. ಎಲ್ಲಮ್ಮ ಗಂಡೊಯ್ದು ಹೆಣ್ಣು ಮಾಡುವಾಕಿ ಎಂಬ ಕೀರ್ತಿಗೆ ಭಾಜನವಾಗಿದ್ದಾಳೆ. ಸಾಮಾನ್ಯವಾಗಿ ತಾವು ನಪುಸಂಕರಾದವರು, ತಾವು ದೇವಿಯ ಆದರ್ಶದ ಮೇರೆಗೆ, ಹೆಣ್ಣುಡುಗೆ ಉಟ್ಟಿರುವುದಾಗಿ ಹೇಳಿಕೊಳ್ಳುತ್ತಾರೆ. ಅದರಂತೆ ಗಂಡುಡುಗೆ ಉಟ್ಟು ಹೆಣ್ಣುಮಕ್ಕಳು ಕಣ್ಣಿಗೆ ಬೀಳುತ್ತಾರೆ.

"ಚೆಲ್ವ ಹೆಂಗಸರ ಸೀರೆ ಸೆಳೆದು
ಚೆಲ್ಲಣ ತೊಡಿಸಿ"

ಮುಂತಾಗಿ ಬರುವ, ವರ್ಣನೆಗಳೂ ಇದನ್ನೇ ಪುಷ್ಟೀಕರಿಸುತ್ತವೆ.

ಎಲ್ಲಮ್ಮನ ಜೋಗತಿಯರು ಭಂಡಾರ ಚೀಲವನ್ನು ಸೊಂಟಕ್ಕೆ ಸಿಕ್ಕಿಸಿಕೊಂಡಿರುತ್ತಾರೆ. ಕೊರಳಲ್ಲಿ ತಮ್ಮ ಧ್ಯೇಯೋದ್ದೇಶಕ್ಕನುಗುಣವಾದ ಮುತ್ತನ್ನು ಕಟ್ಟಿರುತ್ತಾರೆ. ಕಾಲಲ್ಲಿ ಗೆಜ್ಜೆ ಇರುತ್ತದೆ. ತಲೆಯ ಮೇಲೆ "ಜಗವೆಂಬ ಜಗ" ಬಿದಿರಿನ ಬುಟ್ಟಿಯನ್ನೋ, ಕೊಡವನ್ನೋ ಹೊತ್ತಿರುತ್ತಾರೆ. ಕೆಲವರು ಬರಿಯ ಚೌರಿ ಒಡಿದಿರುತ್ತಾರೆ. ಕೆಲವೊಮ್ಮೆ ಮೂರು ನಾಲ್ಕು ಮಂದಿ ಕೂಡಿ, ಚೌಡಕಿ ಎಂಬ ವಾದ್ಯ ಒಡಿದು ಪದಗಳನ್ನು ಹಾಡುತ್ತಿರುತ್ತಾರೆ.

ಭಾರತ ಹುಣ್ಣಿಮೆ ಜೋಗತಿ ದೀಕ್ಷೆಗೆ ತುಂಬಾ ಪ್ರಶಸ್ತ ದಿನವೆಂದೂ ಜನರ ನಂಬಿಕೆ. ಅವರು ಬೇವಿನ ಉಡುಗೆ, ವಸ್ತ್ರದ ಉಡುಗೆ ಹಾಗೂ ಅಂಬರದ ಉಡುಗೆ ಎಂಬ ಮೂರರಲ್ಲಿ ಒಂದನ್ನು ತೊಟ್ಟಿರಬಹುದು. ಈ ಆಚರಣೆಯಲ್ಲಿ ಬೇವಿನಎಲೆಗೆ ಮಹತ್ವದ ಪಾತ್ರವಿದೆ. ಬೇವಿನ ಉಡುಗೆ(ಉಟಗಿ) ಧರಿಸುವುದಕ್ಕೂ ಒಂದು ಕಥೆಯಿದೆ.

ಪರಶುರಾಮ ಕ್ಷತ್ರಿಯರನ್ನು ಕೊಂದಾಗ ಅವರ ವಿಧವೆಯರು ಆಶ್ರಯ ಕೋರಿ ಬಂದಾಗ ವಸ್ತ್ರಹೀನರಾಗಿದ್ದರಂತೆ. ಆಗ ಆಕೆ ಸಮೀಪದಲ್ಲಿದ್ದ ಬೇವಿನಮರದ ಗೊಂಚಲುಗಳನ್ನು ಕೊಟ್ಟು ಅವುಗಳಿಂದ ದೇಹಮುಚ್ಚಿಕೊಳ್ಳಲು ತಿಳಿಸಿದಳಂತೆ.

ಬೇವಿನ ಸೊಪ್ಪಿನಿಂದ ಹೆಣೆದ ತಟ್ಟುಗಳನು ವುಡುವದು ಕ್ರಮೇಣ ಒಂದು ಹರಕೆಯಾಗಿ ಪರಿಣಮಿಸಿತು. ಜೋಗತಿಯಾದವರು ೧. ವಂಶದ ಪದ್ಧತಿಯ ಮೇರೆಗೆ ೨. ಸ್ವಪ್ರೇರಣೆಯಿಂದ ೩. ದೇವಿಯ ಆದೇಶದ ಮೇರೆಗೆ ೪. ತಾನಿಕ (ಸ್ಥಾನಿಕ)ರ ಹೇಳಿಕೆಯ ಮೇರೆಗೆ ಹತ್ತಿರವಿರುವ ಎಲ್ಲಮ್ಮನ ಗುಡಿಯಲ್ಲಿ ದೀಕ್ಷೆ ಪಡೆಯಬಹುದು.



ಸವದತ್ತಿಯಲ್ಲಿ ಹಿರಿಯ ಜೋಗತಿಯರ ಸಮೇತ ಎಲ್ಲಮ್ಮನ ಪೂಜಾರಿಯ ಮನೆಗೆ ಬರುತ್ತಾರೆ. ಅಲ್ಲಿ, ಎಲ್ಲಮ್ಮ ಪರಶುರಾಮನ ಪೂಜೆ ನಡೆಯುತ್ತದೆ. ಜೋಗತಿಯಾದವರು ತಮ್ಮ ವ್ಯಕ್ತಿತ್ವವನ್ನೆ ಆಹ್ವಾನಿಸುವಂತೆ ತಮ್ಮ ಕೊರಳ ಹಾರ ತೆಗೆದು ಜೋಗತಿಯಾಗುವವಳಿಗೆ ಹಾಕುತ್ತಾರೆ. ನಂತರ ಪೂಜಾರಿಯು, ಪ್ರಮಾಣವಚನ ಬೋಧಿಸುತ್ತಾನೆ. ನಂತರ ನಿತ್ಯ ಮುತ್ತೈದೆಯರೆಂದೇ ಖ್ಯಾತರಾದ ಜೋಗಮ್ಮರು, ಕಣಕದಲ್ಲಿ ದೀಪ ಬೆಳಗಿಸಿ ಕನ್ಯೆಯ ತಲೆಯ ಮೇಲಿಡುತ್ತಾರೆ. ನಂತರ ಆಕೆ ಐದು ಮನೆಗಳಲ್ಲಿ ಭಿಕ್ಷಾಟನೆ ಮಾಡಿದರೆ ವಿಧಿಗಳೆಲ್ಲ ಮುಗಿದಂತೆ ಊರಿಗೆ ವಾಪಸಾದ ಮೇಲೆ ಮಾತಂಗಿ ಗುಡಿಯಲ್ಲಿ ಸೇವೆ ಸಲ್ಲಿಸುವುದು ಪರಿಪಾಠ.

ಮಂಗಲಕಾರ್ಯ ಜರುಗುವಾಗ, ಜೋಗತಿಯರಿಗೆ ಅಗ್ರಪಟ್ಟ. ಜೋಗಪ್ಪರನ್ನು ದ್ವಿತೀಯ ಸ್ಥಾನಕ್ಕೆ ಇಳಿಸಲಾಗಿದೆ.

ಭಾರತ ಹುಣ್ಣಿಮೆ ಜಾತ್ರೆಯ ಮಹತ್ವವಿರುವುದೇ ಅದು ಮುತ್ತು ಹೊರಿಸಲು ಖ್ಯಾತವಾಗಿದೆಯೆಂಬುದರಲ್ಲಿ. ಮುತ್ತು ವಿಲಾಸದ ಸಂಕೇತವೆಂಬುದು ಗೊತ್ತಿರುವ ವಿಷಯವೇ.

ಆದರೆ ಮುತ್ತು ಧರಿಸಿದವರೆಲ್ಲ ಸೂಳೆಯರಲ್ಲ. ಗರತಿಯರು ಬಿಳಿಯ ಮುತ್ತು ಧರಿಸಿರುತ್ತಾರೆ. ವೇಶ್ಯೆಯರಾದ ಜೋಗತಿಯರು ಕೆಂಬಣ್ಣದ ಮುತ್ತು ಧರಿಸಿದರೆ ಸಾಮಾನ್ಯ ಜೋಗತಿಯರು ಬಿಳಿಯ ಹಾಗೂ ಕೆಂಬಣ್ಣದ ಮುತ್ತುಗಳೆರಡನ್ನೂ ಸಮನಾಗಿ ಪೋಣಿಸಿ ಕೊರಳಲ್ಲಿ ಕಟ್ಟಿರುತ್ತಾರೆ.

"ಎಲ್ಲಮ್ಮನೆಂದರೆ ದಲ್ಲಾಳಗಿತ್ತೆವ್ವ ಎಂಬುದು ಜನಪ್ರಿಯವಾದ ಚೌಡಕಿ" ಪದ. ಇದನ್ನು ಬಹುಶಃ ದೇವದಾಸೀ ಪದ್ಧತಿಯ ಪ್ರತಿಪಾದಕರು ಕಟ್ಟಿದ್ದಾರೆ.

"ಮುತ್ತನ್ನು ಹಾಸ್ಯಾಳೆ
ಮುತ್ತನ್ನು ಹೊಚ್ಯಾಳೆ
ಮುತ್ತೆತ್ತೂರೆಲ್ಲವ್ವ ನಗುವಾಳೆ".

ಎಂಬ ಹಾಡಿನಲ್ಲಿ ಎಲ್ಲಮ್ಮನ ಮುತ್ತಿನ ವ್ಯವಹಾರದ ಬಗ್ಗೆ ಹೇಳಲಾಗಿದೆ.

ಮುತ್ತು ಕಟ್ಟಿದವರೆಲ್ಲ ಭೋಗಕ್ಕೆ ಸಿದ್ಧರು ಎಂಬ ಸಂಕುಚಿತಾರ್ಥ ಕ್ರಮೇಣ ಹುಟ್ಟಿಕೊಂಡದ್ದು.

ಮುತ್ತು ಕಟ್ಟುವುದು ಒಂದು ಆಚರಣೆ. ಇದರಲ್ಲಿ ಪಾಲ್ಗೊಳ್ಳುವುದರಲ್ಲಿ ದೇವಿಗೆ ಅರ್ಪಿತವಾಗುವ ಹೆಣ್ಣುಮಕ್ಕಳು. ಇದು ಮದುವೆಗೆ ಸಂವಾದಿಯಾದ ಒಂದು ಆಚರಣೆ. ಇಲ್ಲಿ ಅನೇಕ ಪ್ರಮಾಣಗಳುಂಟು ಅವು ಹೀಗಿವೆ.

೧. ಕರು ಮೊಲೆಯುಣ್ಣುತ್ತಿದ್ದರೆ ಅಡ್ಡಿ ಮಾಡಬಾರದು.

೨. ಹಸಿದವರಿಗೆ ರೊಟ್ಟಿ, ನೀಡಬೇಕು.

೩. ಬಿಸಿಲಲ್ಲಿದ್ದವರನ್ನು ನೆರಳಿಗೆ ಕರೆಯಬೇಕು.

೪. ಗಂಡ ಹೆಂಡಿರ ಏಕಾಂತಕ್ಕೆ ಭಂಗ ತರಬಾರದು.

೫. ಸೇಡಿನ ಭಾವ ತೊರೆಯಬೇಕು.

೬. ಅಸಹಾಯಕರಿಗೆ ನೆರವು ನೀಡಬೇಕು

ವಿಧಿಗಳು: ಮೊದಲು ಎಲ್ಲಮ್ಮನ ಗುಡಿಯ ಮುಂದೆ ಸಗಣಿಯಿಂದ ನೆಲಸಾರಿಸಿ ರಂಗೋಲಿಯಿಡುತ್ತಾರೆ.

ಅದರ ನಾಲ್ಕು ಮೂಲೆಗೂ ಕಳಸವಿಡುತ್ತಾರೆ. ಇವನ್ನು ಹೂಗಳಿಂದ ಶೃಂಗರಿಸಿ ಒಂದು ದಾರದಿಂದ ಕಟ್ಟಿರುತ್ತಾರೆ. ನಂತರ ಪೂಜಾರಿ ರಂಗೋಲಿಯ ಮಧ್ಯೆ ದೇವಿಗೆ ಅರ್ಪಿತವಾಗಲಿರುವ(ದೇವದಾಸಿಯಾಗಲಿರುವ) ಹೆಣ್ಣು ಮಗಳನ್ನೂ ಕೂರಿಸಿ ದಾರದಿಂದ ಆಕೆಯ ಕುತ್ತಿಗೆಗೂ ಎಲ್ಲಮ್ಮನ ಮೂರ್ತಿಯ ಕೈಗೂ ಸಂಪರ್ಕ ಕಲಿಸುತ್ತಾರೆ. ನಂತರ "ಮುತ್ತು" ಎಂಬ ಕಲ್ಲಿನ ಒಂಭತ್ತು ಮಣಿಗಳನ್ನು ಕುತ್ತಿಗೆಗೆ ಕಟ್ಟು...ರೆ. ಅಲ್ಲಿಂದ ಆ ಹೆಣ್ಣಿಗೆ ಎಲ್ಲಮ್ಮನೇ ಗಂಡ. "ಉಧೋ. ಉಧೋ ಎಂಬ ಘ...ಣೆ ಮುಗಿಲು ಮುಟ್ಟುತ್ತದೆ.

ಒತ್ತಾಳಿಯ ಗೆಜ್ಜೆ ಪ್ರತಿಯೊಬ್ಬ ಜೋಗತಿ. ಜೋಗಪ್ಪನಿಗೂ ಬೇಕಾದುದು. ಪ್ರತಿ ಮಂಗಳವಾರ. ಶುಕ್ರವಾರದಂದು ಈ ಗೆಜ್ಜೆಯ ಸಪ್ಪಳ ಗುಡ್ಡದಲ್ಲಿ ಅನುರಣಿಸುತ್ತದೆ. ಗೆಜ್ಜೆ ಸಹ ಕಲಾವಂತಿಕೆಗೆ ಭೋಗಕ್ಕೆ ಸಂಕೇತವಲ್ಲವೆ

"ಗೆಜ್ಜೆ ತೊಡಿಸಿದ
ಸೆಜ್ಜೆಗೆ ಕರೆದ"

ಎಂಬ ಮಾತು ಕಲಾ ಪ್ರದರ್ಶನದ ಮುಂದಿನ ಹಂತವನ್ನು ಸೂಕ್ಷ್ಮವಾಗಿ ಸಾರುತ್ತದೆ.

ಎಲ್ಲಮ್ಮ ಶಕ್ತಿ ದೇವತೆಯಾದ್ದರಿಂದ ಆಕೆಯನ್ನು ಗಂಡು ಎಂದು ಭಾವಿಸುವುದು ಗಮನಾರ್ಹ ಸಂಗತಿ. ಗಂಡಿಗೆ ಸೀರೆಯುಡಿಸಿ ಗೆಜ್ಜೆ ತೊಡಿಸುತ್ತಿರುವುದು ಎಲ್ಲಮ್ಮನ ವೈನೋದಿಕಗಳಲ್ಲೊಂದೆಂಬುದನ್ನು ಈಗಾಗಲೇ ಉಲ್ಲೇಖಿಸಲಾಗಿದೆ.

ಓರ್ಗಲ್ಲರಾಯನಿಗೆ ಗೆಜ್ಜೆ ತೊಡಿಸಿ ಅವಮಾನಗೊಳಿಸಿ. ಎಲ್ಲಮ್ಮ ಪಟ್ಟ ಆನಂದ ವರ್ಣಿಸಲಸದಳ. ತನ್ನ ಗಂಡುತನದ ಬಗ್ಗೆ ಅಹಂಕಾರ ಭಾವವಿದ್ದು ಆತನ ಸೊಕ್ಕು ಮುರಿದ ಸಂಗತಿ. ಗೆಜ್ಜೆ ಕಟ್ಟಿಸಿದ ಆಚರಣೆ ರೂಪಕವಾಗಿ ಹೊರ ಹೊಮ್ಮಿದೆ.

"ಕಾಲಿನ ಬೇನಿ ತೆಗಿಯೇ ಜಗದಂಬಾ ಓರ್ಗಲ್ಲರಾಯಾ
ಕಾಲಿಗಿ ಗೆಜ್ಜೆ ಕಟ್ಟಿನಂತಾನ ಓರ್ಗಲ್ಲರಾಯಾ
ಕಾಲಿಗೀ ಗೆಜ್ಜೆ ಕಟ್ಟಾನವ ಓರೇಜಗಾಹೊತ್ತಾನ

ಬೇಟಾಸುರ ಹಾಗೂ ಕಾರ್ತವೀರ್ಯಾರ್ಜುನರ ಕಣ್ಣುಗಳನ್ನು ಕವಡೆಸರ ...ುತ್ತದೆ. ಒಂಟಿ ಹೆಣ್ಣಾದ ಎಲ್ಲಮ್ಮನಿಗೆ ಅನೇಕ ಶತ್ರುಗಳಿದ್ದುದು ಇವರಿಂದ ...ಗುತ್ತದೆ. ತಾಂತ್ರಿಕ ಆಚರಣೆಯಲ್ಲಿ ಕವಡೆಗಿರುವ ಮಹತ್ವವನ್ನರಿತ ಎಲ್ಲಮ್ಮನ ...ು ವಿಶೇಷವಾಗಿ ಜೋಗತಿಯರು ಅದನ್ನು ಪೋಣಿಸಿ ಕೊರಳಿಗೆ ಹಾಕಿಕೊಂಡಿರುತ್ತಾರೆ.



ಎಲ್ಲಮ್ಮನೊಂದಿಗಿನ ಸಂಪರ್ಕಸಾಧನವಾಗಿಯೂ ಅದನ್ನವರು ಬಳಸುತ್ತಾರೆ. ( ಕವಡೆ ಹಾಕಿ ಶಾಸ್ತ್ರ ಹೇಳುವ ರೀತಿಯಲ್ಲಿ)

**ಮರ್ಲ್ಯೋದ ಹರಕೆ ಸೆನಸ್ಸಾಳು:**

ಎಲ್ಲಮ್ಮನ ಜಾತ್ರೆಯಲ್ಲಿ ನಾನಾ ಹರಕೆಗಳನ್ನು ತೀರಿಸುವ ಭಕ್ತರು ಕಣ್ಣಿಗೆ ಬೀಳುತ್ತಾರೆ.

ಎಲ್ಲ ದೇವರುಗಳ ಬಗ್ಗೆ ಇರುವ ಭೀತಿಯಂತೆ ಎಲ್ಲಮ್ಮನ ಬಗೆಗೂ 'ಆಕೆ ಕಾಡಾಟ ಹಚ್ಚೌಳೆ."ನಾಗರಕಾಟವಾಗಿ ಕಾಡ್ತಾಳೆ', 'ಬ್ಯಾನಿ ಹಾಕ್ತಾಳೆ' ಎಂಬ ಭಾವನೆಯಿರುವುದನ್ನು ಕಾಣಬಹುದು. ಎಲ್ಲಮ್ಮ ಒಲಿದರೆ ದೇವಿ ಕಾಡಿದರೆ ಇಧಿಮಾಯಿ ಎಂಬುದೂ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿದೆ. ಭಾರತ ಹುಣ್ಣಿಮೆಯಂದು ಸವದತ್ತಿ ಎಲ್ಲಮ್ಮನ ಗುಡ್ಡಕ್ಕೆ ಹೋದಾಗ ಭಕ್ತರು ಶ್ರದ್ಧಾಭಕ್ತಿಗಳಿಂದ ಸಲ್ಲಿಸುತ್ತಿದ್ದ ವಿವಿಧ ಹರಕೆಗಳನ್ನು ನೋಡುವ ಅವಕಾಶ ಸಿಕ್ಕಿತು.

ಎಲ್ಲ ಗ್ರಾಮದೇವತೆಗಳಂತೆ ಎಲ್ಲಮ್ಮನಿಗೂ ಕೃತಜ್ಞತಾ ದ್ಯೋತಕವಾದ ಮುನ್ನೆಚರಿಕೆಯ ಕ್ರಮದ ಹರಕೆಗಳಿವೆ. ಅವು ಸ್ಥೂಲವಾಗಿ ಹೀಗಿವೆ. ಎಲ್ಲಮ್ಮ ತಾಯಿಯನ್ನು ಬಯಸುವದರಿಂದ ತೆಂಗಿನಕಾಯಿಗಳನ್ನು ಒಡೆಯುವುದು ಸಾಮಾನ್ಯ ರೂಢಿ. ದೇವಿಗೆ ಹೊಸ ಸೀರೆಯುಡಿಸಿ ಉಡಿತುಂಬುವುದು ಇದೆ. ರೋಗರುಜಿನದಿಂದ ಪಾರಾದುದರ ದ್ಯೋತಕವಾಗಿ ಮುಖ. ಕಣ್ಣು. ಮೀಸೆ ಮುಂತಾದವುಗಳನ್ನು ಓದಿಕೆ ಮಾಡುವುದೂ ಇದೆ.

'ಜನಗಿಹರಕೆ' ಎಂಬುದು ವಿಶಿಷ್ಟವಾದುದು. ಒಂದು ವೇಳೆ ಮನೆಯಲ್ಲಿ ಹಸುಗಳು ಹಾಲು ಕರೆಯದಿದ್ದಲ್ಲಿ ದೇವಿಯ ಹೆಸರಿನ ಮೇಲೆ ಒಂದು ಕರುವನ್ನು ಬಿಟ್ಟು ಬಿಡುವ ಪದ್ಧತಿ ಇದೆ. (ಬಸವಿ ಪದ್ಧತಿಯ ಮೂಲವಿರುವುದು ಇಲ್ಲೆ)

ಬನದ ಹುಣ್ಣಿಮೆಯ ಜಾತ್ರೆಯ ಸಂದರ್ಭದಲ್ಲಿ ಮುದುಕಿಯೊಬ್ಬಳು ಒಂದು ಮುಷ್ಟಿಯ ತುಂಬ ಉಪ್ಪಿಟ್ಟುಕೊಂಡು ಎಲ್ಲಮ್ಮನ ಗುಡಿಯ ಪ್ರದಕ್ಷಿಣೆ ಹಾಕುತ್ತಿದ್ದಳು. ಏಕೆಂದು ಕೇಳಿದಾಗ ಕುಷ್ಠರೋಗದಿಂದ ಪಾರಾದುದನ್ನು ತಿಳಿಸಿ ಅದರ ಪ್ರತಿಫಲವೇ ಉಪ್ಪುಗಂಟಿನ ಹರಕೆ ಎಂದಳು.

ಬೆತ್ತಲೆ ಸೇವೆಯನ್ನು ಸರ್ಕಾರ ನಿಷೇಧಿಸಿದ್ದರೂ ಅದು ಗುಪ್ತವಾಗಿ ನಡೆಯುತ್ತಿರುವ ಬಗೆಗೆ ವರದಿಗಳಿವೆ. ಕೆಲವೊಮ್ಮೆ ಬೇವಿನಗೊಂಚಲುಗಳನ್ನು ಸಿಗಿಸಿಕೊಂಡು ಇದೇ ಹರಕೆ ಸಲ್ಲಿಸುತ್ತಾರೆ.

'ಅಂಬರದ ಉಟಿಗೆ' ಹನ್ನೆರಡನೇ ಶತಮಾನದ ಶರಣೆಗೆ ಅಕ್ಕಮಹಾದೇವಿಯ ಬತ್ತಲಿನಿಂದ ಪ್ರೇರಿತವಾದದ್ದು. ಈ ದಿಗಂಬರ ಹರಕೆ ನಡೆಯುವುದು ರಾತ್ರಿಯಲ್ಲಿ ಜೋಗುಳ ಬಾವಿಯಿಂದ ಹೊರಟು ಪೂರ್ಣ ಬತ್ತಲಾಗಿ ದೇವಿ ಪ್ರದಕ್ಷಿಣೆಗೆ ಹಾಕುವ ಬಗ್ಗೆ ಕೆಲವರು ಗಮನ ಸಳೆದಿದ್ದಾರೆ.

ಗಂಧದವುಟ್ಟಿಗೆ ಎಂಬುದು ಬೇವಿನ ಸೊಪ್ಪಿನ ಧಾರಣೆಯೆ. ಪೂಜೆಗೆ ಗಂಧ ಶ್ರೇಷ್ಠ ಎಂಬುದು ಹೀಗೆ ಕರೆಯಲು ಸಾಧ್ಯವಾಗಿದೆ.

'ಬೇವಿನ ಉಟ್ಟಿಗೆ' ಸೇವೆಯಲ್ಲಿ ಸುಶಿಕ್ಷಿತ ಯುವಕ ಯುವತಿಯರು ಸಲ್ಲಿಸುತ್ತಿರುವುದನ್ನು ಜಾತ್ರೆಯಲ್ಲಿ ಗಮನಿಸಲಾಯಿತು. ಬೆತ್ತಲೆ ಸೇವೆಗೆ ಮನ ಒಪ್ಪದವರು ಈ ಬಗೆಯ ಸೇವೆ ಸಲ್ಲಿಸುತ್ತಿರಬೇಕು.

ಫೆಬ್ರುವರಿ ತಿಂಗಳಂದು ಬರುವ ಭಾರತ ಹುಣ್ಣಿಮೆಯಂದು ಸತ್ಯವ್ವನ ಗುಡಿಯ ಮುಂದೆ'ಉಧೋ ಉಧೋ ಎನ್ನುತ್ತಾ ಸೇವೆಸಲ್ಲಿಸುತ್ತಿದ್ದುದನ್ನು ಅವಲೋಕಿಸಲಾಗಿದೆ.

ಮಾತಂಗಿಯರು ಪ್ರಧಾನ ಪಾತ್ರಧಾರಿಗಳು ಇವರು ಸಮಗಾರರ-ಮ್ಯಾದರ ಮನೆತನದವರು.

'ಉಟಗಿ ಸೇವೆ' ನಡೆಸುವವರಲ್ಲಿ ಬೇಡರು. ತಳವಾರರು ಹಾಗೂ ಹರಿಜನರೂ ಹೆಚ್ಚಾಗಿರುತ್ತಾರೆ ಎಂಬುದು ಗಮನಾರ್ಹ.

ಮಾತಂಗಿ ಗುಡಿಯ ಪೂಜಾರಿ ಸ್ತ್ರೀಯಾಗಿರುತ್ತಾಳೆ. ಆಕೆಯ ಸಮ್ಮುಖದಲ್ಲಿ ಉಟಗಿ ಸೇವೆ ನಡೆಯುತ್ತದೆ. ಹರಕೆ ತೀರಿಸುವಾಗ ಮಾತಂಗಿಯರು ಉಪಸ್ಥಿತರಿರುತ್ತಾರೆ. ಅವರ ಕಾಲು ತೊಳೆದು ಭಂಡಾರ ಕುಂಕುಮ ಕೊಟ್ಟು ಅವರಿಗೆ ದಕ್ಷಿಣೆ ಸಲ್ಲಿಸಿದ ನಂತರವೇ ಸೇವೆಗೆ ಪ್ರಾರಂಭ. ಹರಕೆ ಮಾಡುವಾಗ ಬಾಯಲ್ಲೂ ಬೇವಿನ ಕಡ್ಡಿಯನ್ನು ಕಚ್ಚಿ ಹಿಡಿದಿರುತ್ತಾರೆ.

ಇನ್ನು ದಿಂಡ್ಯುರುಳು ಸೇವೆ ಹಾಗೂ ದಂಡ ನಮಸ್ಕಾರಗಳು ದೇಹದಂಡನೆಯ ಹರಕೆಗಳಾಗಿವೆ. ಇವು ಕೃತಜ್ಞತಾಪೂರ್ವಕವಾಗಿವೆ.

ಮಾತಂಗಿಯೊಡನೆ ಎಲ್ಲಮ್ಮನಿಗೆ ಇದ್ದ ವಾತ್ಸಲ್ಯದ ಫಲವಾಗಿ ಚಂಬಳಿಕೆ ಹರಕೆ ಹುಟ್ಟಿದೆ. ಚರ್ಮದಿಂದ ಪಾದರಕ್ಷೆ ಮಾಡಿ ಎಲ್ಲಮ್ಮ ದೇವಿಗೆ ಅರ್ಪಿಸುವುದು ಪದ್ಧತಿ. ಹರಕೆ ಸಲ್ಲಿಸುವವರು ಅದನ್ನು ತಲೆ ಮೇಲೆ ಹೊತ್ತುಕೊಂಡು ದೇವಾಲಯದ ಎದುರಿನ ಪಾದಗಟ್ಟೆಯ ಬಳಿಬಂದು ಪೂಜಾರಿಗೆ ಅದನ್ನು ಕೊಟ್ಟಾಗ ಹರಕೆ ಮುಗಿಯುತ್ತದೆ.

ಪರಶುರಾಮನು ತಾಯಿಯ ತಲೆ ಕಡಿಯಲು ಬೆನ್ನು ಹತ್ತಿ ಬಂದಾಗ ಅಸಹಾಯಕಳಾದ ಆಕೆಗೆ ಮಾತಂಗಿ ಆಸರೆ ನೀಡಿ ಒಂದು ಮರದ ಬಾನಿಯಲ್ಲಿ ಅಡಗಿಸಿದ್ದಳಂತೆ. ಅದನ್ನು 'ದೊಣೆ'ಯನ್ನುತ್ತಾರೆ. ಅದನ್ನು ತೊಗಲಿನಿಂದ ಮುಚ್ಚಿದ್ದರಂತೆ. ತೊಗಲಿನ ನೀರು ತೀರ್ಥವೆಂದು ಎಲ್ಲಮ್ಮ ಸಂಪ್ರದಾಯದಲ್ಲಿ ಪರಿಗಣಿಸಲ್ಪಟ್ಟಿದೆ. ಅದು ರೋಗ ನಿವಾರಕವೆಂಬ ನಂಬಿಕೆಯು ಕೂಡಾ ಉಂಟು.

ಜೋಗುಳ ಭಾವಿಯ ಸತ್ಯವ್ವನಿಗೆ ತೊಟ್ಟಿಲು ನೀಡುವ ಹರಕೆಯೂ ಇದೆ. ತೊಟ್ಟಿಲನ್ನು ಕೆರೆಯಲ್ಲಿ ತೇಲಿಬಿಟ್ಟು ನಂತರ ಅದನ್ನು ಹಿಂದೆ ಪಡೆಯುವ ರೂಢಿಯೂ ಇದೆ.

ಹರಕೆ ಹೇಳಿಕೊಂಡು ಮರೆಯುವವರಿಗೆ ಎಲ್ಲಮ್ಮ ಎಂತೆಂಥಾ ಕಾಟ ಕೊಡುತ್ತಾಳೆಂಬುದನ್ನು ತಿಳಿಯಲು ಜನಪದರನ್ನೇ ಮೊರೆಹೋಗಬೇಕು. ಆಕೆ ಗಂಟಲು, ಕಣ್ಣು, ಮೂಗು ಮುಂತಾದವಕ್ಕೆ ಎಂತೆಂಥ ಕುರುಗಳನ್ನು ಕೊಡುತ್ತಾಳೆಂಬುದನ್ನು ಡಾ. ಜೀ. ಶಂ. ಪ.ರವರ "ಕರುಣೆ ಕಣ್ಣು ತೆರೆಯೇ" ಕೃತಿಯಲ್ಲಿ ಬರುವ ಹಾಡೊಂದರಲ್ಲಿ ಕಾಣಬಹುದು. ಹರಸಿಕೊಂಡು ಮರೆತು ಹೋದವರಿಗೆ ದೇವಿ ಜುಲ್ಮಾನೆ ಹಾಕುವುದೂ ಇದೆ.



ಏನು ಹರಸಿಕೊಂಡಿದ್ದರೋ ಅದನ್ನು ಮರೆತಿದ್ದಕ್ಕೆ ದಂಡನಮಸ್ಕಾ[illegible]ರುಳು ಸೇವೆ ಮಾಡುವ... ರಂತೆ.

ಕೆಲವೊಮ್ಮೆ ಅಶಕ್ತಿ ಉಂಟಾದಾಗ 'ಕಳಶ ಕಂಡಲ್ಲಿ ಕೈಯ ಮುಗದೆ' ಎಂಬಂಥ. 'ಮನವೇ ಮಂತ್ರಾಲಯ'ವೆಂಬ ರೀತಿಯ ಮಾತುಗಳು ಭಕ್ತರ ಬಾಯಿಯಿಂದ ಬರುವುದುಂಟು.

ಅಂಗಾಳ ದಾಟ್ಹೊತ್ತಿಗೆ
ಮುಂಗಾಲ ಜುಮ್ಮೆಂದಾವ
ಗಿರಿಯು ದೂರವ್ವ ಬರಲಾರೆ
ಉಧೋ ಉಧೋ

ಎಂದಿದ್ದೂ ಉಂಟು. ಎಲ್ಲಮ್ಮನನ್ನು ಗೆಳತಿಯಂತೆ ಕಂಡು ಹೇಳುವ ಹಾಡಿದು. ಆದ್ದರಿಂದಲೇ'ಒಪ್ಪುಳ ಬ್ಯಾಟೆ'ಯನ್ನು 'ಮಾವುಳ್ಳ ಹೋತನನ್ನೂ' ಕಂದನ ಕೈಯಲ್ಲಿ ಕೊಟ್ಟು ಕಳಿಸುವೆನೆಂಬ ಆಕೆಯ ಬಿನ್ನಹ ಸಹಜವಾದುದು.

ಎಲ್ಲಮ್ಮ ಎಲ್ಲ ಮತಧರ್ಮೀಯರ ಪ್ರಭಾವಕ್ಕೆ ಒಳಗಾದುದರಿಂದ ಒಮ್ಮೊಮ್ಮೆ ಸಸ್ಯಾಹಾರಿಯಾಗಿಯೂ ಒಮ್ಮೊಮ್ಮೆ ಮಾಂಸಹಾರಿಯಾಗಿಯೂ ಕಾಣಿಸಿಕೊಳ್ಳುತ್ತಾಳೆ ಹಾಗಾಗಿಯೇ ಅವಳಿಗೆ 'ಮಣ ಅಕ್ಕಿ' ಸಲ್ಲುವಂತೆಯೇ 'ಹೋತದ ಬ್ಯಾಟೆ'ಯೂ ಅರ್ಪಿತವಾಗುತ್ತದೆ. ಆದ್ದರಿಂದಲೇ

"ಹೂ ನನಗೆ ಮೀಸಲು ರಾಮಾ
ಹಣ್ಣು ನನಗೆ ಮೀಸಲು ರಾಮಾ
ಹೂವು ಎಂಬುದು ಹುಳುವಿನೆಂಜಲು
ಹಣ್ಣೆಂಬುದು ನೊಣವಿನೆಂಜಲು"
ಎಂಬ ಗೀತೆಯೂ
'ಕುರಿಯು ನನಗೆ ಮೀಸಲು ರಾಮಾ
ಕೋಣ ನನಗೆ ಮೀಸಲು ರಾಮಾ
ಕುರಿ ಎಂಬುದು ಚೂರಿಯೆಂಜಲು
ಕೋಣನೆಂಬುದು ಕೊಡಲಿಯೆಂಜಲು'
ಎಂಬ ಪದವೂ ಹುಟ್ಟಲು ಸಾಧ್ಯವಾಗಿರುವುದು!

ಎಲ್ಲಮ್ಮ ಪರಂಪರೆಯ ದೇವತೆಯಾದ ಉಚ್ಚಂಗೆಮ್ಮಯನ್ನು ವರ್ಣಿಸುವ ಹಾಡಿನಲ್ಲಿ ಆಕೆಯ ಗುಡಿಯ ಮುಂದೆ ನೆತ್ತರ ಪ್ರವಾಹವೇ ಹರಿವ ಚಿತ್ರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಎಲ್ಲಮ್ಮ ಕನಸಿನಲ್ಲಾದರೂ ಮೂಡಿ ಬಂದು "ಹರಕೆ ಹನ್ನೆರಡು ವರ್ಷ" ಎಂದು ಹೇಳಿ ತನ್ನನ್ನು ಉಪೇಕ್ಷಿಸುವವರಿಗೆ ಎಚ್ಚರಿಕೆ ನೀಡುತ್ತಾಳೆಂಬುದು ಶ್ರದ್ಧಾವಂತರ ನಂಬಿಕೆ.

**ನುಡಿಯನೆಳದಾಗ ಎದ್ದೆವ್ವ!**

ಎಲ್ಲಮ್ಮನ ಹೆಸರಿನೊಂದಿಗೇ ಹಾಡು ಕುಣಿತಗಳ ಮೇಳವೂ ಇರುತ್ತದೆ. ಚೌಡಕಿ ಎಂಬ ತಂತೀ ಹಾಗೂ ಚರ್ಮವಾದ್ಯವನ್ನು ಮೀಟುತ್ತಾ ಮೂರ್‍ನಾಲ್ಕು ಜನರು ಗುಂಪಾಗಿ ನರ್ತಿಸುವ ನೋಟ ಯಾರಿಗೆ ತಾನೆ ಮುದಕೊಡದು?

ಎಲ್ಲಮ್ಮನ ಗುಡಿಯ ಸುತ್ತಮುತ್ತ ಇಳಕಲ್ಲಿನ ಸೀರೆ ಹಾಗೂ ಗುಳೇದಗುಡ್ಡ ಚೋಲಿ ಧರಿಸಿದ ಜೋಗ್ತಿಯರು ಹಣೆಯಲ್ಲಿ ಭಂಡಾರ ಕುಂಕುಮ ಹಚ್ಚಿಕೊಂಡು ನಾದ ಸೇವೆಯನ್ನು ನಿರಂತರವಾಗಿ ಮಾಡುತ್ತಿರುತ್ತಾರೆ.

ಒಮ್ಮೊಮ್ಮೆ ಅಸಹ್ಯ ಚೇಷ್ಟೆಗಳನ್ನು ಮಾಡುತ್ತ ಯಾತ್ರಿಕರ ಲಕ್ಷ್ಯ ಚಂಚಲಗೊಳಿಸುವುದೂ ಇದೆ. ಕೇರಳದ ಕೊಡುಂಗಲ್ಲೂರು ಕರುಂಭ ಭಗವತಿಯ ಭರಣಿ ಜಾತ್ರೆಯಲ್ಲಿ ಅಶ್ಲೀಲ ಸಾಹಿತ್ಯ ಹಾಡಿದ್ದಕ್ಕಾಗಿ ದಂಡಕ್ಕೊಳಗಾದ ಭಕ್ತರೂ ಇದ್ದಾರೆ.

ಏನೇ ಇರಲಿ ಚೌಡಕಿ ಪದಗಳು ಜೋಗತಿ ಹಾಗೂ ಎಲ್ಲಮ್ಮ ಸಂಪ್ರದಾಯಕ್ಕೆ ಪ್ರಚಾರ ನೀಡುತ್ತದೆ. ಹಾಡುವವರೂ ತನ್ಮಯರಾಗಿ ಕೇಳುಗರನ್ನು ಸಮ್ಮೋಹನಗೊಳಿಸುತ್ತಾರೆ. ಚೌಡಕಿ ವಾದ್ಯಕ್ಕೆ ಕಥೆಗಳನ್ನು ಕಟ್ಟಿ ಹೇಳುತ್ತಾರೆ. ಜನಪದರು ಸಹಸ್ರಾರ್ಜುನನ ಶಿರ ಹಾಗೂ ಕರುಳಿನಿಂದ ಮಾಡಿದ್ದು ಎಂಬುದು ಒಂದು ಕಥೆ. ಬೇಟಾಸುರನ ತಲೆಯಿಂದ ಮಾಡಿದ್ದು ಎಂಬುದು ಮತ್ತೊಂದು.

ಒಮ್ಮೆ ಎಲ್ಲಮ್ಮ ಕೊಳದಲ್ಲಿ ಅಡಗಿ ಕುಳಿತುಬಿಟ್ಟಳು. ಆಕೆಯನ್ನು ಬರೇ ಹಾಡಿನಿಂದ ಎಷ್ಟೇ ಸ್ತುತಿಸಿದರೂ ತಲೆ ಎತ್ತಲಿಲ್ಲ. ನದಿಯ ದಂಡೆಯಲ್ಲಿ ಚೌಡಕಿ ಬಾರಿಸಿದಾಗ ಛಂಗನೆ ಮೇಲೆ ಬಂದಳೆಂದು ಪ್ರತೀತಿ. ಅದಕ್ಕಾಗಿಯೇ 'ನುಡಿಯನೆಳೆದಾಗ ಎದ್ದೆವ್ವ ರೇಣುಕ' ಎಂದು ಭಕ್ತರ ಹೊಗಳಿಕೆಯಿದೆ.

ಎಲ್ಲಮ್ಮ ವೈಧವ್ಯ, ಪತಿವಿಯೋಗ, ರೋಗ, ಮಗನ ಕ್ರೌರ್ಯ ಇವನ್ನು ಎದುರಿಸಿದಂತೆಯೇ ಬಂಜೇತನವನ್ನು ಅನುಭವಿಸಿದವಳು.

ಜೋಗು ಹಾಕುತ್ತಾ ಎಂದರೆ ಭಿಕ್ಷೆ ಬೇಡುತ್ತಾ ಶಿವನನ್ನು ಕಂಡಳು. ತನಗೆ ಪುತ್ರನನ್ನು ನೀಡೆಂದು ಕಾಡಿದಳು. ಆದರೆ ಶಿವ "ಅದು ಸಂಕಟ ನಿರ್ಮಿಸುವುದರಿಂದ ಅದನ್ನು ಬಿಟ್ಟು ಬೇರೆ ವರ ಕೊಡುತ್ತೆನೆಂದು" ಹೇಳಿದಾಗ "ಏನೇ ಬರಲಿ" ಎದುರಿಸುತ್ತೇನೆ ಎಂದು ಹೇಳಿ ಮಗನನ್ನು ಪಡೆದಳು.

**ಎಲ್ಲಮ್ಮ ಬಸಿರಾದಾಗಿನ ಸ್ಥಿತಿ ಕುರಿತೂ ಹಾಡುಗಳಿವೆ**

'ಒಂದೊಂದು ತಿಂಗಳಿಗೆ ಏನೇನು ಬಯಸ್ಯಾಳೆ ರಾಮಾ ರಾಮಾ ಎಲ್ಲಮ್ಮ ಬಯಸ್ಯಾಳೆ ಎಳೆಯ ಹುಣಸಿಕಾಯಿ ರಾಮಾ ರಾಮಾ' ಮುಂತಾಗಿ ಹಾಡುತ್ತಾ ಎಳೆಯ ಸವತೇಕಾಯಿ, ನನೆದಂಡೆ, ಮೂಡಲದಿಕ್ಕಿನ ಮಗಿಮಾವು, ಉತ್ತತ್ತಿ ಕೊಬ್ಬರಿ ಹಾಗೂ ಕೊಡ ತುಪ್ಪವನ್ನೂ ಬಯಸಿದಳೆಂದು ವಿವರ ನೀಡುತ್ತಾರೆ.

ತವರಿಗೆ, ಜನಪದರಲ್ಲಿ ತುಂಬ ಮಹತ್ವವಿದೆ. ಹೀಗಾಗಿ ಆಕೆ ಬಸಿರಾದಾಗ ಅಣ್ಣ ಈರಣ್ಣನಿಗೆ ಬಳೆ ತರಲು ಹೇಳಿಕಳಿಸುವುದು ಇತ್ಯಾದಿ ಕುರಿತೂ ಭಾವುಕವಾಗಿ ಹಾಡು ಕಟ್ಟಿದ್ದಾರೆ.

ಎಲ್ಲಮ್ಮನನ್ನು ಹೊಗಳುವ ಪದಗಳಲ್ಲಿ ರಂಗಿನ ಸಿದ್ಧರನ್ನು ಆಕೆ ದಮನ ಮಾಡಿದ್ದು ಮುಖ್ಯವಾದದ್ದು. ಅದು ಬಹುಜನಪ್ರಿಯಗೀತೆ ಕೂಡಾ ಆಗಿದೆ.

ಉಂಡು ತಿಂದು ಕುಂತ ಬಳಿಕ



ರಂಗಿನ ಸಿದ್ಧರೇನಂತಾರ
ತಲಬಾತು ತಂದು ಕೊಡ ಗಾಂಜೀಪುಡಿ
ಅರವಿನೊಂದ ಕಕ್ಯಾಡ ಮಾಡಿ
ಮರವಿನೊಂದ ಚಿಲುಮೀ ಮಾಡಿ
ಹದಮಾಡಿ ತಂದುಕೊಟ್ಯಾಳ ಪುಡೀ ಪುಡೀ

ಹೀಗೆ ಹಾಡುತ್ತಾ ಏಳು ಮಂದಿ ಸಿದ್ಧರಿಗೆ ಆಕೆ ತಕ್ಕಶಾಸ್ತಿ ಮಾಡಿದ್ದನ್ನು ಮೈ ಮರೆತು ಹಾಡುತ್ತಾರೆ.

ಉತ್ತರ ಕರ್ನಾಟಕದಲ್ಲಿ 'ಹಾಡಿ ಬರುವರೇಳೆಲ್ಲವ್ವ' ಹಾಗೂ 'ಜಗಪಾವನ ಮಾಡ ಜಗದಂಬಿ' ಎಂಬ ಹಾಡುಗಳು ತುಂಬ ಜನಪ್ರಿಯವಾಗಿವೆ.

ದೇವಿಯಲ್ಲಿ ಸಾಲವಿಡುವುದು ತಪ್ಪು, ದೇವಿಯ ಹೆಸರಿನಲ್ಲಿ ಗಂಟೆ ಬಾರಿಸುತ್ತ ಅಧಿಕ ಹಣ ಸಂಪಾದನೆ ಮಾಡುವುದು ತಪ್ಪು ಎಂಬುದು ಈ ಹಾಡಿನ ತಿರುಳು.

ಬೆಳ್ಳಿಕಾಯಿನಾ ಚೌರನಾದ್ರು
ಮಾಡಿಸಿರುದಾಳ
ನನ್ಮೇಲ್ ಹಾರಿಸಿರದಾಳ
ವಾರವಾರ್ಕು ತಪ್ಪದ ಎಣ್ಣೆ
ತರಬೇಕಂತಾಳ ತಾಯಿ ಬರಬೇಕಂತಾಳ

ಎಂದು ದೇವಿಯ ನಿರೂಪವನ್ನು ತಿಳಿಸುತ್ತಾರೆ.

ಎಲ್ಲಮ್ಮನನ್ನು ಕೆಣಕಿ ಚಳ್ಳೆಹಣ್ಣು ತಿಂದವರಲ್ಲಿ ನಾಗಶೆಟ್ಟಿ ಎಂಬುವವನೂ ಮುಖ್ಯ.

ಬೆಳ್ಳೀಯ ತ್ರಾಸ ಮಾಡಿ
ಬಂಗಾರ ಪರಡೀನಾಗೆ
ತೂಗ್ಯಾನ ನಾಗಯ್ಯ ಶೆಟ್ಟಿ
ಒಂದು ಬಟಾಟೆ ಬೇಡಿದಾಗ
ನಾಲಿಗಿ ಸೀಳೆನಂದ!
ಅವ್ನ ಹೈನ ನೆತ್ತರ ಕಾರ್‍ಯಾವ
ಒಂದು ಉಳ್ಳಾಗಡ್ಡಿ ಬೇಡಿದಾಗ
ಬೆನ್ನಿಗಿ ಬರೇ ಹಾಕೇನಂದ
ಅವನ ಹೈನ ಬರದಾಡುವ
ದೇವೀ ಸಾಕವ್ವ ಮಾಯಿ
ನಿನ್ನ ಗುಡ್ಡಾ ಹತ್ತತೀನಿ
ಯೆವ್ವ ಮುತ್ತ ಬೇಡಿ
ಹಾಕ್ಯೋತೇನಿ ಸಾಕ್ಮಾಡವ್ವ

ಎಂಬಲ್ಲಿಯವರೆಗೆ ಆಕೆ ಅವನನ್ನು ತಂದಳು. ಎಲ್ಲಮ್ಮನನ್ನು ಕುರಿತು ಇನ್ನೂ ಇಂಥ ಅನೇಕ ಹಾಡುಗಳಿವೆ. ಶುಕ್ರವಾರ ಮಂಗಳವಾರ 'ಎಕ್ಕೆಲಿಗೋ ಎಂದು ಬೇಡುತ್ತಾ ಮನೆ ಹತ್ತಿರ ಬರುವ ಜೋಗತಿಯರು ಹಾಡಿನ ಭಂಡಾರವೇ ಸರಿ.

ಎಲ್ಲಮ್ಮ ಮುಟ್ಟಿದವರನ್ನು ಸುಡುವಾಕೆ ಎಂದು ಒಂದೆಡೆ ಜನಪದರು ಹಾಡಿದ್ದಾರೆ. ಇದು ಮೋಹಿನಿ ಅವತಾರದ ಪ್ರಭಾವವಿರಬಹುದು. ಅಲ್ಲದೆ ದ್ರೌಪದಿ

ಅಗ್ನಿಯುಪಾ...ನೆಯಿಂದ ಹುಟ್ಟಿದವಳಾದ್ದರಿಂದ ಎಲ್ಲಮ್ಮ ಆಕೆಯ ಅವತಾರವೆಂಬುದರಿಂದ

ಶಿಸ್ಸೀನ ಸಿರಿಗೌರಿ ಬಂದೆವ್ವ ನೀನು
ದುರುಳ ರಕ್ಕಸರನ್ನು ಸುಟ್ಟೆ ನೀನು
ಎಂಬ ಪದ ಉದಿಸಿರಬೇಕು.

ಚೌಡಕಿ ಪದಗಳ ವೈಶಿಷ್ಟ್ಯವೆಂದರೆ ಅವುಗಳಲ್ಲಿ ಕಂಡುಬರುವ 'ದೇಸಿ'ಯಸೊಗಡು.

ಉದಾಹರಣೆಗೆ 'ನಾಗಜೋಗಿ' ಎಂಬ ಭಕ್ತನ ಪವಾಡ ಕುರಿತು ಹೇಳುವ ಹಾಡನ್ನು ಗಮನಿಸೋಣ.

ಅಕ್ಕ ಕೇಳತಂಗಿ ಚಿಕ್ಕ ಬಾಲೆಯ ಮಾತುಗೋಳ
ತಪ್ಪೇನ ಮಾಡಿಸಲುವಮ್ಮ ದೇವಿ ಎಲ್ಲಮ್ಮ
ಪಾರನೀ ಮಾಡಿಸಲುವಮ್ಮ ತಾಯಿ ಎಲ್ಲಮ್ಮ

ಈ ನಾಗಜೋಗಿ ಉಕ್ಕಿದ ಪಾಯಸಕ್ಕೆ ಕೈ ಹಾಕಿ ತಿರುವುವಾತ ಸಿಡಿಯಾಡುವಾತ ನೂಲೇಣಿಯ ಮೇಲೆ ದೊಂಬರಂತೆ ಆಡಬಲ್ಲವ. ಓಡುವ ಬಂಡಿಯನ್ನೇ ತರುಬುವವ!

ಈ ಹಾಡಿನಲ್ಲಿ ಸಂಸ್ಕೃತ ಪದಗಳು ತುಂಬ ಕ್ವಚಿತ್ತಾಗಿ ಬಳಕೆಯಾಗಿವೆ. ಇಲ್ಲವೇ ಇಲ್ಲ ಎಂದರೂ ನಡೆಯುತ್ತದೆ.

ಎಲ್ಲಮ್ಮ ತನ್ನ ಜಾತ್ರೆಯನ್ನು ನೋಡಿ ಆನಂದಿಸುವ ಚಿತ್ರವೂ ಹೀಗೆಯೇ. ಹದವಾದ ರುಚಿಯಾದ ಕನ್ನಡ ಶಬ್ಧಗಳಿಂದ ಮಿದ್ದಿದ ಪಾಕವಾಗಿ ಮನ ಸೂರೆಗೊಳ್ಳುತ್ತದೆ.

ಉಗ್ಗರದೆಲ್ಲವ್ವ ನುಗ್ಗೆಯ ಮರನೇರಿ
ಬಗ್ಗಿನೋಡ್ತಾಳ ತನ್ನ ಪರಿಷೆ
ಮನದಿ ಒಗ್ಗಿ ನೋಡ್ತಾಳ ಭಕ್ತರನ
ಹೆಬ್ಬುಲಿಗುಡ್ಡದಾಗ ಒಬ್ಬಳೆ ಸರಿಯಿಲ್ಲ
ಹುಲಿ ಮೀಸಿ ಓಡದ ನಗುವಂಥ ತಾಯಿಯ
ಮುದ್ದ ದನಿಯಾಕ ತಡದಾವ?

ಜನಪದರು 'ಉಗ್ರ'ವನ್ನು 'ಉಗ್ಗರ'ವೆಂದೂ 'ಧ್ವನಿ'ಯನ್ನು 'ಧನಿ' ಎಂದೂ ಕನ್ನಡವಾಗಿಸಿಕೊಂಡದ್ದು ಗಮನಾರ್ಹ.

ಇಮವರೆಗೆ ಉದ್ಧೃತವಾದ ಕೆಲವು ಭಾಗಗಳನ್ನು ನೋಡಿದರೂ ಪ್ರತಿ ಚೌಡಕಿ ಪದವೂ ಒಂದು ಐತಿಹ್ಯಕ್ಕೆ ...ಗೆ. ಆಚರಣೆಗೆ. ಒಪಿದ ಕನ್ನಡಿಯಾಗಿರುವುದು ಸ್ಪಷ್ಟ.

(ಜನಪದ ಸಾಹಿತ್ಯದ ವೈಶಿಷ್ಟ್ಯವಿರುವುದೇ ಇಲ್ಲಿ. ಅದು ವೈಯುಕ್ತಿಕ ಭಾವದ ಅಭಿವ್ಯಕ್ತಿಯಾದರೂ ಹುಟ್ಟಿದ್ದು 'ಸಮೂಹ ಸಂದರ್ಭ'ದಲ್ಲಿ).

ಎಲ್ಲಮ್ಮನನ್ನು ಹುಲಿಗೆಮ್ಮ. ಕೆಂಚಮ್ಮ ಉಚ್ಚಂಗೆಮ್ಮ. ಕೊಪಟನೂರ ಕೊರವಂಜಿ. ಗುತ್ತೆಮ್ಮ ಎಂದೆಲ್ಲ ಜನಪದರು ಹಾಡಿರುವ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ ಇವರೆಲ್ಲ ರೇಣುಕೆಯ ವಿವಿಧ ಮುಖಗಳೇ ಎಂಬುದು ಸ್ಪಷ್ಟ.

ಸವದತ್ತಿ ಎಲ್ಲಮ್ಮನಂತೆಯೇ ಇವರಿಗೂ ತಮ್ಮದೇ ಜೋಗತಿ. ಜೋಗಪ್ಪರುಂಟು. ಆಕೆಯಂತೆಯೇ ಕೆಲವೆಡೆ ಸಸ್ಯಾಹಾರ ಕೆಲವೆಡೆ ಮಾಂಸಾಹಾರದ ಎಡೆ. ನಪುಂಸಕರು



ದೇವಿಯ ಮಕ್ಕಳೆಂದು ತಮ್ಮನ್ನು ಕರೆದುಕೊಂಡರೆ ದೇವದಾಸಿಯರಾದವರು ತಮ್ಮನ್ನು ದೇವಿಯ ಹೆಂಡಿರೆಂದೇ ಕರೆದುಕೊಳ್ಳುತ್ತಾರೆ.

ರಂಡೆ ಹುಣ್ಣಿಮೆ. ಭಾರತ ಹುಣ್ಣಿಮೆ. ಜಾತ್ರೆಗಳೂ ಸಮಾನ ಆಚರಣೆಗಳಾಗಿವೆ ಮತ್ತು ಈ ಎಲ್ಲ ಕ್ಷೇತ್ರಗಳಲ್ಲೂ ಪೂಜಾರಿಗಳು ಮುತ್ತು ಕಟ್ಟುತ್ತಾರೆ. ಒಟ್ಟಾರೆ ಶಿಷ್ಟ ಪರಂಪರೆಯ ರೇಣುಕೆ, ಹಾಗೂ ಜನಪದ ಪರಂಪರೆಯ ಎಲ್ಲಮ್ಮ ಒಡಗೂಡಿ 'ರೇಣುಕಾಯಲ್ಲಮ್ಮ'ನಾಗಿರುವ ಸಂದರ್ಭ ಉತ್ತರ ಕರ್ನಾಟಕದಲ್ಲಿದೆ. ಬೃಹತ್ ಪರಂಪರೆ, ಕಿರಿಯ ಪರಂಪರೆಯ ಮೇಲೆ ಬೀರುವ ಗಾಢ ಪ್ರಭಾವಕ್ಕೆ ಇದು ಉದಾಹರಣೆ.

ವಿಶೇಷವೆಂದರೆ ಎಲ್ಲಮ್ಮನ ಜಾತ್ರೆಯಲ್ಲಿ ಎಲ್ಲ ಕೋಮುಗಳವರೂ ಸೇರುವುದು.

ಮುನಿಗಳ ಸೇವೆ ಮಾಡಿದಿಯಮ್ಮ
ಮಹೇಶ್ವರಿ ಕುಲವ ಕೆಡಿಸಿದೆಮ್ಮ

ಎಂಬ ಹಾಡಿನಲ್ಲೂ ನಾನಾರ್ಥಗಳಿವೆ. ಮುಕ್ತ ಲೈಂಗಿಕ ವಾದಿಗಳು ಇದನ್ನು ಕಟ್ಟಿದ್ದಿರುವ ಸಾಧ್ಯತೆಯಿದೆ. ಎರಡನೆಯದಾಗಿ ಆದಾಗಲೇ 'ವಿಲೋಮ ವಿವಾಹ'ದಿಂದ ಶುದ್ಧಳಾಗಿ ಉಳಿಯದ ತಮ್ಮ ದೇವಿಯನ್ನು ಕೊಂಚ ಲೇವಡಿ ಮಾಡುವ ಉದ್ದೇಶವೂ ಇರಬಹುದು.

'ಕುಲವಕೆಡಿಸಿದಿ' ಪ್ರಶಂಸಾಪರವೂ ಇರಬಹುದು. ಎಲ್ಲಮ್ಮನ ಮೂಲ ನದೀ ಮೂಲದಂತೆಯೇ ನಿಗೂಢವಾಗಿದೆ. ವಿವಿಧ ಜಾತಿಗಳವರು ಆಕೆಯ ಮೇಲೆ ಹಕ್ಕು ಸ್ಥಾಪಿಸಲು ಹಣದ ಹೊಳೆ ಹರಿದಿರುವುದೂ ಒಂದು ಕಾರಣ. ಆದ್ದರಿಂದಲೇ ಆಕೆ ಒಮ್ಮೆ ಜೈನರು, ಒಮ್ಮೆ ವೀರಶೈವರು, ಮತ್ತೊಮ್ಮೆ ಬ್ರಾಹ್ಮಣರು ಮಗುದೊಮ್ಮೆ ಮಾದಾರ ಪೈಕಿ ಹೆಣ್ಣು ಮಗಳು.

ಮಾದರವಳಾದ ಆಕೆ ಸಿದ್ಧರನ್ನು ಕೂಡಿ ವೀರಶೈವಳಾದಳೆಂದು ಹಲವರೆಂದರೆ, ಬ್ರಾಹ್ಮಣ ಜಮದಗ್ನಿಯಿಂದ ಬ್ರಾಹ್ಮಣ ಸ್ತ್ರೀಯಾದಳೆಂದು ಹಲವರ ಅಂಬೋಣ. ಪದ್ಮಾವತೀಯಕ್ಷಿಯೇ ಈಕೆ ಎಂದು ಕೆಲವರೂ, ತುಳಜಾಪುರ ಅಂಭಾಭವಾನಿಯೇ ಈಕೆ ಎಂದು ಹಲವರು ಅಭಿಪ್ರಾಯ ಪಟ್ಟಿದ್ದಾರೆ.

ಇನ್ನು ಈ ಚೌಡಕಿ ಪದಗಳ ಗಾಯಕರ ಬಗ್ಗೆ ಕೊಂಚ ಗಮನ ಹರಿಸೋಣ. ಈ ಪದಗಳು ಹಾಡಲ್ಪಡುವುದು ಉಚ್ಚ ವರ್ಣೀಯರಿಂದಲ್ಲ. (ಬ್ರಾಹ್ಮಣರಾಗಲೀ ವೀರಶೈವರಾಗಲೀ ಚೌಡಕಿ ಹಿಡಿದದ್ದನ್ನು ಈ ಲೇಖಕಿ ಕಂಡಿಲ್ಲ) ಮ್ಯಾದರು, ತಳವಾರರು. ಬೇಡರು ಹರಿಜನರು ಕೆಲವೊಮ್ಮೆ ಲಂಬಾಣಿಗರು ಹಾಡುತ್ತಾರೆ. ಲಂಬಾಣಿ ಭಾಷೆಯಲ್ಲಿ 'ಎಲ್ಲೂತಾಯಿ'ಯನ್ನು ಹೊಗಳುವ ಹಾಡೊಂದನ್ನು ಕ್ಷೇತ್ರದಲ್ಲಿ ಗಮನಿಸಲಾಗಿದೆ.

ಗಮನಾರ್ಹ ಅಂಶವೆಂದರೆ 'ಕರುಂಬ ಭಗವತಿ'ಯ ಗುಪ್ತಾಂಗಗಳನ್ನು ವರ್ಣಿಸಿ ಭಕ್ತರು ಹಾಡುವಂತೆ ಈ ಪದಗಳಲ್ಲೂ ಅಶ್ಲೀಲತೆಯ ಸೋಂಕಿಲ್ಲದಿರುವುದು. ವಚನಕಾರರು, ಉಝದಲೊತ್ತಿ ಬಾರಿಸು ಎಂದಂತೆ ಈ ಗಾಯಕರು ತಮ್ಮ ವ್ಯಕ್ತಿತ್ವದ ಸಮಸ್ತ

ಶ್ರದ್ಧೆಯನ್ನು ಹಾಕಿ ಹಾಡುತ್ತಾರೆ. ಸಾಹಿತ್ಯವೂ ಅಷ್ಟೇ ಸರಳಸುಂದರ. ಧರ್ಮಪ್ರವರ್ತನೆಯ ಪರಿಕಾರರಂತೆ ಈ ಗಾಯಕರ ಶೈಲಿಯಿದೆ.

ಚೌಡಕಿ ಹಿಡಿದು ಬೇಡುವವರು ವಿರಳ. ಇದೊಂದು ಸೇವಾಕ್ರಮ ಎನ್ನಬಹುದು. ಡೊಳ್ಳಿನ ಪದ ಹಾಡುವ ಕುರುಬರು ತಮ್ಮ ಮಾಳಪ್ಪ, ಬೀರಪ್ಪ, ರೇವಣಸಿದ್ಧರನ್ನು ನಾಯಕರನ್ನಾಗಿಸಿ ಬಗೆ ಬಗೆಯಾಗಿ ಕೈವಾರಿಸುವಂತೆ ಇದೂ ಎಲ್ಲಮ್ಮನ ನಾನಾ ಸಾಮರ್ಥ್ಯವನ್ನು ಪ್ರಶಂಸಿಸುತ್ತದೆ.

ಎಲ್ಲಮ್ಮನ ಹೆಸರಿನ ನರ್ತನವನ್ನು 'ಆಡುವುದು' ಎನ್ನುತ್ತಾರೆ. ಕುಣಿತವೆನ್ನುವುದಿಲ್ಲ. ಆ ಸಮಯದಲ್ಲಿ ದೇವಿಯ ಆವಾಹನೆಯಾಗಿರುತ್ತೆಂಬುದು ಜನರ ನಂಬಿಕೆ.

ಜೋಗಪ್ಪರು (ನಪುಂಸಕರು) ತಾವು ಹೆಣ್ಣಿನ ತಳಿದವರೆಂದು ನಿರೂಪಿಸಲು ಅತಿಯಾದ ಬಿನ್ನಾಣ ಮಾಡುತ್ತ ನರ್ತಿಸುವುದು ಅಶ್ಲೀಲವಾಗಿ ಕಾಣುತ್ತದೆ. ಆದರೆ ಅವರು ಕೊಡ ಹೊತ್ತು ಆಯ ತಪ್ಪದಂತೆ ನರ್ತಿಸುವುದು ವಿಸ್ಮಯಕಾರಿ. ಚೌಡಕಿ ಪದವಲ್ಲದೆ 'ಚೆನ್ನಪ್ಪ ಚೆನ್ನಗೌಡಾ' ಮುಂತಾದ ಶರೀಫ್ ಸಾಹೇಬರ ಪದಗಳನ್ನು ನೃತ್ಯದ ಮೂಲಕ ವಿಜೃಂಭಿಸಿ ತೋರುತ್ತಾರೆ.

ಕೆಲವರು 'ಇದು ಕಲೆಯಲ್ಲ' ಎಂದು ಸಾರಾಸಗಟಾಗಿ ತಿರಸ್ಕರಿಸಿರುವುದುಂಟು. ಆದರೆ ಇದನ್ನು 'ನಪುಂಸಕ ಸಮೂಹದ' ಒಂದು ಅಭಿವ್ಯಕ್ತಿ ಎಂದು ಸಾಂಸ್ಕೃತಿಕ ದೃಷ್ಟಿಯಿಂದ ಪರಿಗಣಿಸಬಹುದು. ಇದಕ್ಕೆ ಯಾವ ಧಾರ್ಮಿಕ ಹಿನ್ನೆಲೆಯೂ ಇಲ್ಲ.

ಉಪಜೀವನದ ಕಾರಣವಾಗಿ ಇವೆಲ್ಲ ಕಸರತ್ತುಗಳ ಜರೂರು ಬಿದ್ದಿರಬಹುದು.

**ತುಂಬಿ ಬಂದಾಳವ್ವ ತಂಗೀ**

ಏಳುಮಂದಿ ಅಕ್ಕತಂಗೇರಾದ ದ್ಯಾಮವ್ವ, ಕರಿಯವ್ವ, ಮುಂತಾದವರಂತೆ ಎಲ್ಲಮ್ಮನೂ ಭಕ್ತರ, ಪೂಜಾರಿಗಳ, ಮೈದುಂಬಿ ಬರುವುದಿದೆ.

ಚೌಡಕಿ ಧ್ವನಿ ಕೇಳಿಯೇ ದೇವಿ ಮೈತುಂಬಿದ ದೃಷ್ಟಾಂತಗಳಿವೆ. ಈ ಲೇಖಕಿ ಸಂದರ್ಶಿಸಿದ ಜೋಗವ್ವನೋರ್ವಳು ಮಂಗಳವಾರ 'ರೇಡಿವೋ ಕೇಳಿದ ತಕ್ಷಣ' ಮೈದುಂಬುವುದಾಗಿ ತಿಳಿಸಿದಳು.

ಜಲಸಂಪ್ರದಾಯದ ದೇವತೆಯಾದ ಎಲ್ಲಮ್ಮನಿಗೆ 'ಜಳಕ' ಮುಖ್ಯ. ಜಳಕ ಮಾಡಿ ಭಂಡಾರ ಕುಂಕುಮ ಬಳಿದುಕೊಂಡು ಸನ್ನಿಗೆ ಒಳಗಾಗುವುದಿದೆ. ಎಲ್ಲಮ್ಮನ ಹೊಗಳಿಕೆಯ ಪದಗಳನ್ನು ಕೇಳಿದ ತಕ್ಷಣ ಮೈದುಂಬುವ ಭಕ್ತರೂ ಇದ್ದಾರೆ.

ದೇವಿ ಮೈದುಂಬಿದಾಗ ಭಕ್ತರು 'ಕಾರ್ಣೀಕ' ಕೇಳಲೂಬಹುದು. ಪರೀಕ್ಷೆ ಪರಿಣಾಮ, ಆಸ್ತಿ, ಕೋರ್ಟು ವ್ಯವಹಾರ, ದಾಯಾದಿ ವ್ಯವಹಾರ, ವರ್ಗಾವಣೆ ಇತ್ಯಾದಿ ಎಲ್ಲ ಪ್ರಶ್ನೆಗಳಿಗೂ ದೇವಿ ಉತ್ತರಿಸುತ್ತಾಳೆ. ಉತ್ತರ ತಪ್ಪು ಬಂದ ಸಂದರ್ಭವೇ ಹೆಚ್ಚು.

ಒಮ್ಮೆ ತಪ್ಪು ಬಂದರೆ ಮತ್ತೆ ಹಲವು ಸಲ ಪೂಜೆಗೆ, ಸನ್ನಿಧಿಗೆ ಬರಲು ತಿಳಿಸುವ ಜೋಗವ್ವರು ಹೆಚ್ಚಿಗಿದ್ದಾರೆ.



ಜಾತ್ರೆಯಲ್ಲಿ ದೇವಿಗುಡಿಗೆ 'ಪಾಳಿ' ಹಚ್ಚಿದ್ದಾಗಲೇ ಮೈ ಮೇಲೆ ದೇವಿ ಆವಾಹನೆಯಾಗುತ್ತದೆಂದು ಕೆಲವರ ಅನಿಸಿಕೆ.

ದಯವಿರಲೇ ತಾಯಿ ದಯವಿರಲೇ
ನಿನ್ನ ಕುದರಿಯ ಮ್ಯಾಲೆ ನಜರಿರಲೇ

ಎಂದು ಮೈತುಂಬಿದ ವ್ಯಕ್ತಿಯನ್ನು 'ವಾಹನ'ವನ್ನು ದಣಿಸಬಾರದೆಂದು ಬೇಡುವ ಪ್ರಸಂಗಗಳೂ ಇವೆ. ಶುಕ್ರವಾರ ಮಂಗಳವಾರಗಳಂದು ಹುಣ್ಣಿಮೆ ಅಮಾವಾಸ್ಯೆಗಳಂದು ದೇವಿ ಜಾಗೃತಳಾಗುವಳೆಂಬ ನಂಬಿಕೆಯಿದೆ. ಒಂದು ಸಂದರ್ಭದಲ್ಲಿ ಯಾರಿಗೋ ನೌಕರಿಕೊಡಿಸುವಾಗ ಮಧ್ಯಸ್ತಿಕೆದಾರರಾದ ಇಂಥವರನ್ನು ಕಾಣ್ರಿ ಎಂದು ಅಪ್ಪಣೆ ಕೊಡಿಸಿದ್ದೂ ಇದೆ.

ಇದೆಲ್ಲದರ ಮತಿತಾರ್ಥವಿಷ್ಟೇ. ಜನರ ಮೌಢ್ಯ, ಅನಕ್ಷರತೆ ಅಮಾಯಕತೆಗಳು ಇಂಥ ಸಂದರ್ಭಗಳನ್ನು ಹುಟ್ಟುಹಾಕಿರುವುದು. ಎಲ್ಲಮ್ಮನ ನಾಲಿಗೆಗಳೇ ತಾವೆಂದು ಹೇಳಿಕೊಳ್ಳುವ ಇವರಿಗೆ ಯಾವ ಕಾನೂನೂ ಏನೂ ನಿರ್ಬಂಧ ಹೇರಲಾರದು. ಕಾಯಿದೆಗಿಂತ ಹೆಚ್ಚಾಗಿ, ಸಮಾಜಸೇವಾ ಸಂಸ್ಥೆಗಳು ಈ ದಿಶೆಯಲ್ಲಿ ಚೆನ್ನಾಗಿ ಕೆಲಸ ಮಾಡಬಲ್ಲವು.

'ಸಾವಳಿ' 'ವಿಮೋಚನಾ' ಮುಂತಾದ 'ಸ್ವಯಂಸೇವಾಸಂಸ್ಥೆ'ಗಳು ಈ ದಿಶೆಯಲ್ಲಿ ಸಲ್ಲಿಸುತ್ತಿರುವ ಸೇವೆ ಅನುಕರಣೀಯವಾದುದು.

ಶಿಬಿರಗಳನ್ನು ನಡೆಸುವುದು, ದೃಶ್ಯ ಮಾಧ್ಯಮ ಪ್ರದರ್ಶಿಸುವುದು, ಸಂಕಿರಣಗಳನ್ನು ಆಯೋಜಿಸುವುದು ಇವೆಲ್ಲವುಗಳಿಂದ ಜನಮನ ತಿದ್ದಬಹುದು.

ದೇವದಾಸಿಯರ ಮಕ್ಕಳಿಗೆ ವಸತಿ ಶಾಲೆ ಕಲ್ಪಿಸುವ ಮೂಲಕ ಅವರು ತಮ್ಮ ವಿಷಯ ಪರಿಸರ ಮರೆಯುವಂತೆ ಮಾಡಬಹುದು. ಅಧ್ಯಯನ 'ವಿಮೋಚನಾ' ಸಂಸ್ಥೆಯ ಶ್ರೀ ಬಿ. ಎಲ್. ಪಾಟೀಲರು ಈಗಾಗಲೇ ಇಂಥ ಶಾಲೆ ಸ್ಥಾಪಿಸಿದ್ದಾರೆ.

ಜೀವನೋಪಾಯದ ಕಾರೂ ಹೊರತುಪಡಿಸಿ ನೋಡಿದಾಗ ಎಲ್ಲಮ್ಮ ದೇವಿ ಮೈದುಂಬುವುದಕ್ಕೆ ಮನೋವೈಜ್ಞಾನಿಕ ಕಾರಣಗಳಿರುವುದನ್ನು ಕಾಣಬಹುದು. ಸಂಗೀತ ಒಂದು ಬಗೆಯ ನಿಶೆ ಹುಟ್ಟಿಸುವುದು ಒಂದು ಕಾರಣ. ಭಕ್ತಿಯ ಪಾರವಶ್ಯ ಇನ್ನೊಂದು ಕಾರಣ.

'ಕುಟುಂಬ ಜೀವನ ವಿರೋಧಿ'ಗಳೂ ಕೂಡ ಎಲ್ಲಮ್ಮ ಸಂಪ್ರದಾಯದ ಪ್ರಚೋದಕರು. ಜಾತ್ರೆಯಲ್ಲಿ ಭೇಟಿಯಾದ ಅನೇಕರಿಗೆ ಈ ಸಂಪ್ರದಾಯ ಬೆಚ್ಚನೆ ಮಡಿಲ ಆಶ್ರಯ ಕೊಟ್ಟಿರುವುದನ್ನು ಗಮನಿಸಿದೆ. ಅದಕ್ಕೆ ಕಾರಣಗಳನ್ನು ಸ್ಪಷ್ಟವಾಗಿ ಕೊಟ್ಟಿದ್ದಿದೆ.

'ನಾವ್ಯಾಕ್ರಮ್ಮ ನಾಚಿಗಿ ಪಡಬೇಕು. ಮನೆತನದ ಪದ್ಧತೀ ಹಂಗೆ ನಡಕೊಂಡಿದ್ದೀವಿ'
'ನಮ್ಮನಿಯಾಗ ಬರೇ ಹೆಣ್ಣುಡುಗ್ರಾಗ್ತಿದ್ರುರೀ. ದೇವಿಗೆ ಬೇಡಿಕೊಂಡಿಂದ ಮುತಿನಂಥಾ ಮಗ ಹುಟ್ಟಿದ್ರು'
'ಗಂಡ ಭಾಳ ಉರಿಸ್ಯಾಡತ್ತಿದ್ದನ್ರಿ. ಮೂಳಗೆ ದೇವೀನ ಪಾಠ ಕಲ್ಸಿದಳ್ರಿ'
'ಹರಕೆ ಸಲ್ಸಿಲ್ಲಾಂದ್ರ ದೇವಿ ಕನಸಿನಾಗ ಕಾಡಾಕ ಸುರೂ ಮಾಡಿದಳ್ರಿ'
'ಕಳಶ ಕಾಣೋದು ಸರ್ಪಾ ಹೆಡೀ ತಗಿಯೋದು ಎಷ್ಟಾಂತ ತಾಳಿಕೊಳ್ಳಬೇಕ್ರಿ'

ಇತ್ಯಾದಿ.

ಮತ್ತೂ ಕೆಲವರು ಚರ್ಮರೋಗ ಬಂದ ಸಂದರ್ಭದಲ್ಲಿ ದೇವಿಗೆ ಬೇಡಿಕೊಂಡು ಅದು ವಾಸಿಯಾದದ್ದರಿಂದ ಗಂಡನನ್ನು ಬಿಟ್ಟೆ ಎಂದು ಗುಡ್ಡದಲ್ಲಿ ಅಲೆದಾಡ ಹತ್ತಿದ್ದರ ಬಗ್ಗೆ ಹೇಳಿದರು.

'ಲಜ್ಜಾಗೌರಿ' ಎಂಬ ದೇವಿಯ ಆರಾಧನೆ ಲೈಂಗಿಕತೆಯನ್ನು ಉದ್ದೀಪಿಸುವಂಥದ್ದು. ಹಾಗೇ ಹಿಂದೂ ಸಂಸ್ಕೃತಿಯಲ್ಲಿ ಪುರುಷನ ಜನನೇಂದ್ರಿಯದ ಆರಾಧನೆಯಿದ್ದುದರ ಉಲ್ಲೇಖವೂ ಇದೆ. ಹೀಗಿರುವಾಗ ದೇವಿಯ ಹೆಸರಲ್ಲಿ ಪ್ರಜನನ ಶಕ್ತಿಯನ್ನು ಜಾಗರಿಸಿಕೊಳ್ಳುವುದು ತಾಂತ್ರಿಕ ವಿಧಾನ ಎಂಬ ಹಿನ್ನೆಲೆಯಲ್ಲೂ ಎಲ್ಲಮ್ಮನ ಭಕ್ತರ ಚಟುವಟಿಕೆಗಳ ಅಧ್ಯಯನ ಯೋಗ್ಯವಾಗಿವೆ.

**ಪೂಜೆ ನೋಡುನು ಬಾರ ಎಲ್ಲಮ್ಮನಾ**

ಸವದತ್ತಿ ಎಲ್ಲಮ್ಮನ ಪೂಜೆಗೆ ಎಂಟೂ ತಂಡಗಳಲ್ಲಿ ಪೂಜಾರಿಗಳನ್ನು ನಿಯುಕ್ತಗೊಳಿಸಲಾಗಿದೆ. ಇವರು ವೀರಶೈವರು. ಇವರು ಸವದತ್ತಿಯಿಂದ ಸುಮಾರು ಎಂಟು ಕಿಲೋಮೀಟರ್ ದೂರದ ಉಗರಗೊಳ್ಳದಲ್ಲಿರುತ್ತಾರೆ. ಎಲ್ಲಮ್ಮನ ಪೂಜಾರಿಗಳಿಗೆ ಮಡಿಹುಡಿ ಬಹಳ. ಬಹುಶಃ ಇದು ಸಂಸ್ಕೃತೀಕರಣದ ಪ್ರಭಾವ.

ದೇವಿಗೆ ಅಭಿಷೇಕ ಮಾಡಲು ಗುಡ್ಡದ 'ಎಣ್ಣೆಗೊಂಡ ನೋಡ'ದ ನೀರನ್ನು ಬಳಸಿಕೊಳ್ಳುತ್ತಾರೆ. ದೇವೀ ವಿಗ್ರಹವನ್ನು ಎರಡು ಹೊತ್ತು ತೊಳೆದು ಅಲಂಕರಿಸುವುದು ಪದ್ಧತಿ. ದೇವಿ 'ಮೆರೆದಾಡುವವಳು. ಹೀಗಾಗಿ ಒಮ್ಮೆ ಉಡಿಸಿದ ಸೀರೆಯನ್ನು ಮತ್ತೊಮ್ಮೆ ಉಡಿಸುವುದಿಲ್ಲ. ಭಕ್ತರಲ್ಲಿ ಕೂಡ ಉಡಿ ತುಂಬಿಸುವವರೇ ಹೆಚ್ಚು.

ಅನ್ನ ಬೇಳೆ. ಹೂರಣಗಡುಬು ಮುಂತಾದವನ್ನು ದೇವಿಗೆ ನೈವೇದ್ಯ ಮಾಡುತ್ತಾರೆ. ಮುಂಜಾನೆ ಪಂಚಾಮೃತ ಎಡೆ ಮಾಡುವ ಪದ್ಧತಿಯಿದೆ. ಸಂಜೆ ಪಲ್ಯ ರೊಟ್ಟಿ ಮುಂತಾದವನ್ನು ನೀಡಲಾಗುವುದು.

ಅರಿಶಿಣ. ಕುಂಕುಮ ಇವುಗಳ ಬಳಕೆ ಧಾರಾಳ. ಕಾಯಿ ಕರ್ಪೂರ ಪೂಜೆ ನಿರಂತರ ನಡೆದಿರುತ್ತದೆ. ದೇವಿ ಮೆರೆದಾಡುವುದು ಶ್ರಾವಣಮಾಸದಲ್ಲಿ. ಬೆಳಗಿನ ಜಾವ ಎರಡೂವರೆಗೇ ಎದ್ದ ಅರ್ಚಕರು ದೇವಿಯ ಮಜ್ಜನ ಇತ್ಯಾದಿಗಳನ್ನು ಸಂಭ್ರಮದಿಂದ ಮಾಡುತ್ತಾರೆ. ಪ್ರತಿ ಮಂಗಳವಾರ. ಶುಕ್ರವಾರ. ಹಾಗೂ ಹುಣ್ಣಿಮೆಗಳಂದು ದೇವಿಯ ಬೆಳ್ಳಿಯ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಪ್ರಾಕಾರದ ಸುತ್ತ ಉತ್ಸವ ನಡೆಸುತ್ತಾರೆ.

ನವರಾತ್ರಿಯ ಕೊನೆಯದಿನ ದೇವಿ ಪಲ್ಲಕ್ಕಿಯಲ್ಲಿ ಹೊರಟು ಜಮದಗ್ನಿ ಗುಡಿ ಹಾಯ್ದು ಬನ್ನಿ ಗಿಡಕ್ಕೆ ಹೋಗಿ ಬನ್ನಿ ಮುಡಿಯುತ್ತಾಳೆ. ಮರಳಿ ಗುಡಿ ಸೇರುತ್ತಾಳೆ.

ಪಾಲಕ್ಕಿ ಉತ್ಸವ. ಎಲ್ಲಮ್ಮ ವೈಧವ್ಯ ಎದುರಿಸಿದ ನಾಲ್ಕು ತಿಂಗಳು ನಡೆಯುವುದಿಲ್ಲ. ದೇವಿಯ ಭಕ್ತರು ಆಕೆಗಾಗಿ ಬುಟ್ಟಿಯಲ್ಲಿ ಹೋಳಿಗೆ. ಗಾರಿಗೆ. ಕರ್ಜೀಕಾಯಿ. ಪಲ್ಯ ಮುಂತಾದುವನ್ನು ತಂದು ಅರ್ಪಿಸುತ್ತಾರೆ. ಪೂಜಾರಿಗಳೂ ಕೂಡ ಪಾಳಿಯ ಮೇಲೆ



'ಮಹಾಬಾನ'ಅರ್ಪಿಸುತ್ತಾರೆ. ಪಾಯಸ. ತುಪ್ಪ. ಅನ್ನಗಳನ್ನು ಇದರ ಮೂಲಕ ನಿವೇದಿಸುತ್ತಾರೆ.

ಇಪಲ್ಲದೆ ಕಾರ್ತೀಕದಲ್ಲಿ ಯುಗಾದಿಯಲ್ಲಿ ಅಂದರೆ ದೀಪಾವಳಿ ಹಾಗೂ ಪಾಡ್ಯದಲ್ಲಿ ಹಡಿಗೆ ಒಯ್ದು ಮುಟ್ಟಿಸುವುದು ಪರಿಪಾಠ.

ಕೆಲವು ಅರ್ಚಕರು ರಂಡೆ ಹುಣ್ಣಿಮೆಯಿಂದ ಮುತ್ತೈದೆ ಹುಣ್ಣಿಮೆಯ ತನಕ ಮನೆತನದಲ್ಲಿ ಸೂತಕ ಆಚರಿಸುವುದು ಪರಿಪಾಠ.

ದೇವಿಗೆ ನಡೆಸುವ ಶಯನೋತ್ಸವವೂ ವಿಶಿಷ್ಟ. ಇದು ದಿನಂಪ್ರತಿಯ ಆಚರಣೆ. ಪೂಜಾನಂತರ ದೇವಿಯ ಸುತ್ತಲ ಜಾಗವನ್ನು ಸ್ವಚ್ಛವಾಗಿ ಗುಡಿಸುತ್ತಾರೆ. ಸಾರಿಸಿದನಂತರ ಊದಗಡ್ಡಿ ಹಚ್ಚುತ್ತಾರೆ. ಲೋಲಾನ ಹಾಕುತ್ತಾರೆ. ಮಂಚವೊಂದರ ಮೇಲೆ ದೇವಿಯ ಮೂರ್ತಿ ಇಟ್ಟು ಪಲ್ಲಂಗದ ಹತ್ತಿರ ಚರಿಗೆ ನೀರಿಡುತ್ತಾರೆ. ತಾಂಬೂಲವನ್ನು 'ಮುಖವಾಸ'ವೆಂದು ಇಡುತ್ತಾರೆ. ಆಚೀಚಿ ಎರಡು ದೀಪದ ಕಂಭಗಳಿರುತ್ತವೆ.

ದೇವಿಯ ಅಲಂಕಾರ ಪ್ರಿಯತೆಯ ಬಗೆಗೂ ಹಾಡುಗಳಿವೆ. ಭಕ್ತರು ಮಾಡಿಸಿಕೊಟ್ಟ ಒಡವೆಗಳ ಬಣ್ಣನೆ ಒಂದು ಹಾಡಿನಲ್ಲಿ ಹೀಗಿದೆ.

ನಡಿನಲ್ಲಿ ನಡಿಧಾರಿ
ಕುಂಕುಮದ ಗೆರಿ
ಮಾಣಿಕದ ಹರಳದೇವಿ
ಗಣಿತವಿಲ್ಲದಗಣಿತ ದೈಸಿರಿ
ಮ್ಯಾಲೆ ಗಮಗಮ ಕಸ್ತೂರಿ
ತಲಿನಿಂದ ಕಾಲ್ತನಕ
ಗುಳದಾಳಿ ಒಂದಗಟ್ಟಿ
ಮಂಟಪ ಸರಪಳಿನಿಟ್ಟಿ
ಒಳ್ಳೆ ಗೆಜ್ಜೆ ಕಾಲುಮೆಟ್ಟಿ
ಮ್ಯಾಲೆ ಕಿರೀಟವನಿಟ್ಟಿ
ಕಮಳದಹಾರ ಕದರಮಲ್ಲಿಗಿ

ಇಂಥ ದೇವಿಯನ್ನು 'ಮಂಗಳದ ಮಾಪೂರ' ಎನ್ನುವುದು ಜನಪದರಿಗಿಷ್ಟ.

**ಕಯ್ಯಾಗ್ಹಡ್ಲಿಗೀ ಹಿಡದ ಮೆರೆಸೀದಿ**

ಜಾತ್ರೆಯುದ್ದಕ್ಕೂ ಕಣ್ಣಿಗೆ ಬೀಳುವ ದೃಶ್ಯವೆಂದರೆ ಪಡಲಿಗಿ(ಹಡ್ಲಿಗೆ)ತುಂಬಿಸುವುದು. ಗುಡ್ಡದ ಬಯಲು ಪ್ರದೇಶಗಳಲ್ಲಿ ಗಡಗಡ ಬ್ಯಾಳಿಯಹೂರಣ ಅರೆವ ಸಡಗರ.

ಸಣ್ಣಬಿದಿರಿನ ತಟ್ಟೆಆದರಲ್ಲೂ ಹೂರಣಗಡುಬು. ಬದನೇಕಾಯಿಪಲ್ಯ. ರೊಟ್ಟಿ ಮುಂತಾದುವಿರುತ್ತವೆ. ಎಲ್ಲಮ್ಮ ಬದನೇಕಾಯಿ ಪ್ರಿಯೆಯೆಂದು ಪ್ರತೀತಿ. (ಉಡಿಯಲ್ಲಿ ಕಾಯಿ ತುಂಬಿಕೊಂಡ ಆಕೆಯನ್ನು ಕಳ್ಳಿ ಎಂದು ಬೆನ್ನು ಹತ್ತಿದವರು ನಿರ್ನಾಮವಾದ ಕಥೆಗಳು ಜನರ ನಾಲಿಗೆಯಲ್ಲಿವೆ)

'ಬಾರಮ್ಮ ದೇವೀ ನೀನ ಕರೆಯುತ್ತೀನ' ಎಂಬ ಹಾಡಿನಲ್ಲಿ ಸ್ಥಾವರವಾಗಿ ನಿಂತ ಆಕೆಯನ್ನು ಬುಟ್ಟಿಗೆ ಅಥವಾ 'ಜಗ'ಕ್ಕೆ ಆಹ್ವಾನಿಸಿ ಜಂಗಮ ಬದುಕನ್ನು ಆರೋಪಿಸುವ

ಯತ್ನವಿದೆ. ದೂರದ ಗುಡ್ಡಕ್ಕೆ ಹಗಲೆಲ್ಲ ಹೋಗಲಾರದವರು ದೇವಿಯನ್ನು 'ಜಗ'ದಲ್ಲಿ ಕೂರಿಸಿಕೊಳ್ಳುವ ಪ್ರಯತ್ನ ಮಾಡಿರುವುದು ಸ್ಪಷ್ಟ.

ಜಾತ್ರೆಯಲ್ಲಿ ವಿವಿಧ ಅಳತೆಯ, ನಮೂನೆಯ 'ಜಗ'ಗಳನ್ನು ಕಾಣಬಹುದು. ಎಲ್ಲಮ್ಮನು ತನ್ನ ಶತ್ರುಗಳನ್ನು ಸದೆಬಡಿದು ತನ್ನ ಜಗ ಹಾಗೂ ಪಡ್ಲಿಗೆ ಹೊರಲು ಹಚ್ಚಿದ ಬಗ್ಗೆ ಹಾಡುಗಳು ಇವೆ.

ಸೊಕ್ಕ ಮಾಡಿದವರ ತಪ್ಪ ಮುಚ್ಚೀವಿ
ಕೈಯಾಗ್ಹ ಡ್ಲಿಗೀ ಹಿಡದ ಮೆರೆಸ್ಕೀಯವನ

ಕೊಡ ಹೊರುವ ಪದ್ಧತಿ ಜೋಗತಿಯರಲ್ಲಿದೆ. ಇದೂ ಎಲ್ಲಮ್ಮನ ಸಂಚಾರೀ ವ್ಯಕ್ತಿತ್ವದ ಪ್ರತೀಕ. ಅಲ್ಲದೆ ಪ್ರಾಚೀನ ಪದ್ಧತಿ ಪ್ರಕಾರ 'ದಿವ್ಯ' ಎಂಬ ಸತ್ವ ಪರೀಕ್ಷೆಯ ಸಂಕೇತ. ಘಟಸರ್ಪವಿದ್ದ ಕೊಡಕ್ಕೆ ಕೈಹಾರಿಸಿ ಸತಿತ್ವ ನಿರೂಪಿಸಲು ಕೇಳಿದ ಅನೇಕ ಕ್ರೌರ್ಯ ಘಟನೆಗಳು ಜನಪದರಲ್ಲಿವೆ. ನಮ್ಮ ಸಾಂಸ್ಕೃತಿಕ ಇತಿಹಾಸದಲ್ಲಿವೆ.

ಎಲ್ಲಮ್ಮನ ಬದುಕು ಪಲ್ಲಟಗೊಂಡ ಸ್ಥಿತಿಯಲ್ಲಿ 'ಕೊಡ'ದ ಪಾತ್ರ ಮಹತ್ವದ್ದು. ಆಕೆ ತನ್ನ ಗಂಡನ ಅನುಷ್ಠಾನಕ್ಕಾಗಿ ನಿತ್ಯ ಉಸುಕಿನ ಕೊಡಮಾಡಿ, ಸರ್ಪನ ಸಿಂಬಿ ಮಾಡಿ ತಲೆ ಮೇಲೆ ನೀರುಹೊತ್ತು ತರಬೇಕಿತ್ತಂತೆ. ಒಮ್ಮೆ ಕೊಳವೊಂದರಲ್ಲಿ ಜೋಡಿ ಮೀನುಗಳನ್ನು ಕಂಡು ಚಿತ್ತ ವಿಚಲಿತಗಂಡಿತು. ಆಗ ಸರಕ್ಕನೆ ಕೊಡ ಕುಸಿದು, ಹಾವು ಹರಿದು ಮಾಯವಾಯಿತು. ಅದು ಆಕೆಯು ಸತಿತ್ವ ಪರೀಕ್ಷೆಯಲ್ಲಿ ವಿಫಲಳಾದುದರ ಸಂಕೇತ. ಗಂಡ ದಿವ್ಯಜ್ಞಾನದಿಂದ ಆದುದನ್ನು ತಿಳಿದು'ತೊನ್ನು ರೋಗ ಬರಲಿ' ಎಂದು ಶಪಿಸಿ ಆಕೆಯನ್ನು ಕಾಡಿಗೆ ಅಟ್ಟಿದನಂತೆ.

ಈ ಘಟನೆ ಜನಪದರನ್ನು ಗಾಢವಾಗಿ ಕಲಕಿದೆ. ತಮ್ಮ ಆರಾಧ್ಯದೇವಿಯನ್ನು ಅನುಕರಿಸುವ ಹಂಬಲದಿಂದ ತಾವೂ ಕೊಡಹೊರಲು ಶುರು ಮಾಡಿರಬಹುದು.

**ಜಡಿಗಾಗಿ ಮಾಭಾರ್ತ ಆಯ್ತಲ್ಲ ಹಿಂದ**

ಇನ್ನು ಜಾತ್ರೆಯಲ್ಲಿ ಜಡೆ ಬಿಟ್ಟವರ ದೃಶ್ಯ ಸಾಮಾನ್ಯ. ಇದರಲ್ಲಿ ಹೆಣ್ಣು ಗಂಡೆಂಬ ಭೇದವಿಲ್ಲ. ಜಡೆ ಜಟೆಗಟ್ಟಿ ಎಲ್ಲಾ ಕಳೆದುಕೊಂಡಿರುತ್ತದೆ. ಈ ಜಡೆ ಎಲ್ಲಮ್ಮನ ಅವತಾರವೆಂದು ಜನರ ನಂಬಿಕೆ. ದ್ರೌಪದಿಯ ಅವತಾರವಾದ್ದರಿಂದ ಆಕೆಯ ಮುಡಿ ಮಹಾಭಾರತಕ್ಕೆ ಕಾರಣವಾದ್ದರಿಂದ ಈ ಭಾವ ವ್ಯಾಖ್ಯಾನ 'ಪುಣ್ಣೇದ ವಸ್ತು' ಎಂದು'ಜಡಿ'ಯನ್ನು ಆ ಕಾರಣಕ್ಕಾಗೇ ಕರೆಯಲಾಗಿದೆ.

ಎಲ್ಲಮ್ಮನ ಭಕ್ತರ ವೈಚಿತ್ರ್ಯಗಳಲ್ಲೊಂದಿದು. ಈ ಜಡಿ ಬರಲು ಶುಚಿತ್ವದ ಅಭಾವ ಕಾರಣ. ಕೂದಲನ್ನು ಸರಿಯಾಗಿ ಶುಚಿ ಮಾಡದೇ ಆರೈಕೆ ಅಲಕ್ಷಿಸಿರುವುದು ಕಾರಣ. ಜಡೆ ಬರುವುದು ಹೆಚ್ಚಾಗಿ ಪರಿಜನರಿಗೆ, ತಳವಾರರಿಗೆ, ಬೇಡರು ಮುಂತಾದ ನಿಮ್ನ ವರ್ಗದವರಿಗೆ ವೈದ್ಯರ ಹೇಳಿಕೆ ಪ್ರಕಾರ ಫಂಗಸ್ ಸೋಂಕು, ಇದರ ಮೂಲ. ಜಳಕವೆಂದು ಸಡಗರಿಸುವ ಜೋಗ್ತಿಯರು ಸಾಬೂನು, ಸೀಗೇಪುಡಿಗಳನ್ನು ಬಳಸದಿರುವುದೂ ಇದಕ್ಕೆ ಕಾರಣವೆಂದು ಅವರ ಅನಿಸಿಕೆ.



ಈ ತರಹದ ಕೂದಲು ಕಾಲವರೆಗೆ ಬೆಳೆದಿರುವುದೂ ಇದೆ. ಅದಕ್ಕೆ ಕತ್ತರಿ ಹಾಕುವುದು ಪಾವಿತ್ರ್ಯ ಭಂಗ. ಒಟ್ಟಾರೆ ಜೈವಿಕ ವೈಚಿತ್ರ್ಯ ಅಥವಾ ಅಸ್ವಾಭಾವಿಕತೆಗೆ ದೈವಿಕತೆಯನ್ನು ಆರೋಪಿಸಿರುವುದು ವಿಚಿತ್ರ. 'ಕೈಮುಗಿಯಿನುಬಾರ' ಎಂಬ ಹಾಡೊಂದು ಜಡಿ ಬಂದವರಿಗೆ ಸಾರ್ವಜನಿಕರು ತೋರಬೇಕಾದ ಆದರದ ಬಗ್ಗೆ ಹೇಳುತ್ತದೆ.

ಮೂಗಿಗೆ ನತ್ತು ಛಂದ
ಜೋಗ್ತಿಯ ಜಡಿ ಛಂದ
ಕೊಳ್ಳಾನ ಗುಳದಾಳಿ ಛಂದ
ಹೆಣ್ಣಿನ ಮೈಯ ಮ್ಯಾಗ
ನಾಗಯುರಿಗೆ ಛಂದ
ತಾಯಿಯ ಜಡಿಛಂದ

ಜಡಿ ಕೂಡ ದೇವಿಯಂತೆಯೇ'ಗಂಡ ಹೆಂಡಿರ ಬಿಡಿಸುವ' ಪಾತ್ರ ವಹಿಸುತ್ತದೆ! ಜಡಿ ಬಂದದ್ದರಿಂದ ಹೆಣ್ಣಿನ ಮಾನುಷತೆ ಖಿಲಬಾಗಿ ಅತಿಮಾನುಷತೆಯ ಲೇಪ ಒದಗಿ ವಿಪಕ್ವರಂಪರೆಯೇ ಶುರುವಾಗುತ್ತದೆ.

ಬಿಡಿಸಿತೋ ಜಡಿ
ಗಂಡ ಹೆಣತೀರನ್ನ
ನಾಗರ್ಹೆಡಿಯಂಗಾಡಿ
ತೂಗಿತೋ ಜಡಿ
ಮಾಡಿತು ಗಡಿಬಿಡಿ

ಎಂಬ ಪದ ಜಾತ್ರೆಯ ಸಮಯದಲ್ಲಿ ಕಿವಿಗೆ ಬಿತ್ತು. ವಕ್ಕಗಳು ಜಡಿ ದೇವೀ ತದ್ರೂಪೆಂದರು. ಒಬ್ಬಾಕೆಗೆ ಮಕ್ಕಳಾದನಂತರ ಜಡಿ ಬಂತು. ಆಕೆಯ ತರುಣ ಗಂಡ ಆಕೆಯಿಂದ ದೂರವಾದ. ಜಡಿಗೆ ಹೆದರಿದ ದುಷ್ಟ ಗಂಡನೊಬ್ಬ ಹೆಂಡತಿಗೇ ಕೈಮುಗಿದು ನಡಕೊಳ್ಳಹತ್ತಿದ. ಹರೆಯದಲ್ಲಿ ಗಂಡನ ಸಖ್ಯ ದೊರೆಯದ್ದರಿಂದ ಆಕೆ ಅನೈತಿಕ ಹಾದಿ ಹಿಡಿದಳು. ಗಂಡನೂ ಪತ್ನಿ ಬಿಟ್ಟು ಇತರರಲ್ಲಿ ಭೋಗ ಹೊಂದಿ ನಾನಾ ವ್ಯಾಧಿ ಪಡೆದ.

ಹೀಗೆ 'ಜಡಿ' ವಿಘಟನೆಗೆ ಕಾರಣವಾಯಿತು ಗಂಡನಿಂದ ದೂರವಾದ ಹೆಣ್ಣಿಗೆ ತವರಿನ ಬಾಗಿಲೂ ಮುಚ್ಚಿತು. ಕಾರಣ ವಿಚಿತ್ರವಾಗಿತ್ತು. ಜಡಿ ಬಂದವರಿಗೆ ಮಡಿಹುಡಿಯಿಂದ ನಡಕೊಳ್ಳಲು ಆಗುವುದಿಲ್ಲ ಎಂದರು!ಇನ್ನೊಂದು ಸಂದರ್ಭದಲ್ಲಿ ಜಡಿ ಬಂದಿದ್ದರಿಂದ ಓರ್ವ ಹೆಣ್ಣಿಗೆ ಮದುವೆ ಮಾಡಲಿಲ್ಲ. ಆಕೆ ಕಾದು ಬೇಸತ್ತು ಆತ್ಮಹತ್ಯೆ ಮಾಡಿಕೊಂಡಳು.

ಈ ಕಾರಣಗಳಿಂದಾಗಿ ಜೋಗತಿಯರಿಗೆ ವೈದ್ಯಕೀಯ ಶಿಬಿರಗಳಲ್ಲಿ ಸೂಕ್ತ ಮಾಹಿತಿ ನೀಡುವ ಅಗತ್ಯವಿದೆ. ಶುದ್ಧ ನೀರಿನ ಬಳಕೆ, ಸಾಬೂನಿನ ಬಳಕೆ ಇವುಗಳ ಬಗೆಗೂ ತಿಳುವಳಿಕೆ ನೀಡುವ ಜರೂರಿದೆ. ತಲೆಗೂದಲಲ್ಲಿ ಗಮನಾರ್ಹ ಬದಲಾವಣೆ ಕಂಡಕೂಡಲೇ ವೈದ್ಯರನ್ನು ಸಂಪರ್ಕಿಸಲು ತಿಳಿಸಬೇಕು.

ಎಲ್ಲಮ್ಮನ ಹೆಸರಿನಲ್ಲಿರುವ ಮೂಢನಂಬಿಕೆಗಳನ್ನು ಪ್ರಶ್ನಿಸುವ, ಒರೆಗೆ ಹಚ್ಚುವ, ಮನಸ್ಸುಗಳಿಗೆ ಪ್ರೇರಣೆ ನೀಡಬೇಕು. ಎಲ್ಲಮ್ಮನ ಬದುಕಿನ ಅಭಿಶಾಪಗಳನ್ನು ತಮ್ಮದೆಂದು ಭಾವಿಸಿರುವ ಭಕ್ತರಲ್ಲಿ ಕುಷ್ಠರೋಗಿಗಳು ಮುಖ್ಯರು. ಸವದತ್ತಿ ಜೋಗುಳ ಭಾವಿ ಹತ್ತಿರ ನೊಣಮುತ್ತಿಕೊಂಡಿದ್ದರೂ ಲಕ್ಷಿಸದ ಅಸಂಖ್ಯ ಕುಷ್ಠ ರೋಗಿಗಳಿದ್ದಾರೆ. ಜಾತ್ರೆಯ

ಸಮಯ ಇವರಿಗೆ ಸುಗ್ಗಿ ಇದ್ದಂತೆ. ಕುಷ್ಠವು ವಾಸಿಯಾಗುವಂತಹ ರೋಗವಾಗಿದ್ದರೂ ಖರ್ಚು ಮಾಡಲು ಹಣವಿಲ್ಲದವರು. ಮನೆಯವರಿಂದ ತಿರಸ್ಕಾರಕ್ಕೆ ಒಳಗಾದವರೂ. ದೇವಿಯ ಹೆಸರಿನಲ್ಲಿ ಭಿಕ್ಷೆ ಬೇಡುತ್ತಿರುತ್ತಾರೆ.

ಇವರು ಕುಷ್ಠಕ್ಕೆ ಬೇವಿನ ರಸವನ್ನು ಔಷಧಿಯಾಗಿ ಬಳಸುತ್ತಿರುತ್ತಾರೆ. ಬೇವು ಮತ್ತು ಅರಿಶಿಣಗಳು ಆಂಟಿಸೆಪ್ಟಿಕ್ ಗುಣ ಪಡೆದಿರುವುದೂ ಇದಕ್ಕೆ ಕಾರಣ.

ಮುಕ್ತ ಲೈಂಗಿಕಾಸಕ್ತರು ಚರ್ಮವ್ಯಾಧಿಗೆ ಬಲಿಯಾಗುವುದು ಹೆಚ್ಚು. ಲೈಂಗಿಕ ರೋಗಗಳು ತಕ್ಷಣಕ್ಕೆ ವಾಸಿಯಾಗುವುದಿಲ್ಲ. ಪದೇ ಪದೇ ಮರುಕಳಿಸುವುದರಿಂದ ಚಿಕಿತ್ಸೆಗೆ ಹಣವಿಲ್ಲದ್ದರಿಂದ ಎಲ್ಲಮ್ಮನ ಗುಡ್ಡ ಸೇರಿ ಭಿಕ್ಷಾಟನೆ ಮಾಡುವ ದೃಷ್ಟಾಂತ ಹೆಚ್ಚಾಗಿರುತ್ತವೆ.

ಎಲ್ಲಮ್ಮನನ್ನು ಕುಷ್ಠರೋಗಿಯಾಗೆಂದು ಶಪಿಸಿದ ಜಮದಗ್ನಿಯನ್ನು ಕೆಲವರು ಜರೆಯುತ್ತಿರುತ್ತಾರೆ. ಇದು ಸಹಜವೇ ಆಗಿದೆ. ಜೋಗುಳ ಬಾವಿಯಲ್ಲಿ ಹಾಗೂ ಉಳಿದ ನೀರಿನ ಹೊಂಡಗಳಲ್ಲಿ ಔಷಧೀಯ ಗುಣಗಳಿವೆ ಎಂಬುದು ಅನೇಕರ ನಂಬಿಕೆ. ಹೀಗಾಗಿ ಬೇವಿನ ತಪ್ಪಲದ ರಸ ಕುಡಿಯುತ್ತ, ಮೈಗೂ ಲೇಪಿಸಿಕೊಳ್ಳುತ್ತ ವರ್ಷಾನುಗಟ್ಟಳೆಯಿಂದ ಗುಡ್ಡದಲ್ಲೇ ಉಳಿದವರು ಅನೇಕ ಮಂದಿ.

ಕೆಲವರು ಮನೆಮಂದಿ ತಮ್ಮನ್ನು ದೂರವಿಟ್ಟುದನ್ನೂ, ಗುಡ್ಡದಲ್ಲಿ ತಮಗೆ ಮನ್ನಣೆ ದೊರೆತಿರುವುದನ್ನು ಎದೆ ಬಿಚ್ಚಿ ಹೇಳಿದರು. ಓರ್ವ ಜೋಗುತಿ

ಓರ‍್ಗಲ್ಲರಾಯನವ್ವ ಭಾಳ ಶೀಲವಂತನು
ಬಾಳಾ ಶೀಲವಂತನವ್ವ ಭಾಳಾ ಲಿಂಗುವಂತನು
ಎಂಬ ಹಾಡನ್ನು ಹಾಡಿ ತೋರಿಸಿದರಲ್ಲದೆ
ಕಾಲಿನ ಬ್ಯಾನಿ ತೆಗಿಯೇ ಜಗದ ಬಾ ಓರ‍್ಗಲ್ಲರಾಯಾ
ಕಾಲಿಗಿ ಗೆಜ್ಜೆ ಕಟ್ಟೇನಂತಾನೆ ಓರ‍್ಗಲ್ಲರಾಯಾ
ಕಾಲಿಗಿ ಗೆಜ್ಜೆ ಕಟ್ಟ್ಯಾನವ ಹಿರೇಜಗ ಹೊತ್ತಾನ

ಎಂದೂ ಮುಂದುವರೆಸಿ ಕಾಲಿನ ಬ್ಯಾನಿ ಎಂದರೆ ಕುಷ್ಠ ಎಂದು ಹೇಳಿದಳು.

ದೇವಿ ಸಿಟ್ಟಾದರೂ ಸಹ ಕುಷ್ಠ ನೀಡಾವಳೆಂದು ಜನರ ನಂಬಿಕೆ.

ಕಿವಿಗೆ ಕರ್ಣಜ್ವಾಲೆ ಕೊಟ್ಟವ್ಳೆ
ಹಲ್ಲಿಗಿ ಹಲ್ಲುಕುರ ಕೊಟ್ಟವ್ಳೆ
ಮಂಡಿಗೆ ಮಂಡಮ್ಮ ಕೊಟ್ಟವ್ಳೆ
ಉಗುರಿಗೆ ಉಗ್ರುಸುತ್ತ ಕೊಟ್ಟವ್ಳೆ

ರಾಮ ರಾಮ ಮನಹಿಸಿದಳೇ ಎಲ್ಲಮ್ಮ ತಾಯಿ!ಎಂಬ ಹಾಡು ಖ್ಯಾತ ಸಂಗ್ರಾಹಕ ಡಾ. ಜೀಶಂಪ ರವರ 'ಕರುಣೆ ಕಣ್ಣು ತೆರಿಯೆ' ಎಂಬ ಸಂಗ್ರಹದಲ್ಲಿದೆ. ಇದು ದಕ್ಷಿಣ ಕರ್ನಾಟಕದ ಪ್ರಸಿದ್ಧ ಹಾಡು.

ರೋಗಕ್ಕೆ ತುತ್ತಾದ ಮಂದಿಗೆ ಇದು ದೇವಿಯ ಆಗ್ರಹದ ಫಲವಲ್ಲ ಎಂದು ತೋರಿಸಿಕೊಟ್ಟು ಅವರನ್ನು ಸರ್ಕಾರೀ ದವಾಖಾನೆಗಳಲ್ಲಿ ಸೇವೆ ಪಡೆದುಕೊಳ್ಳುವಂತೆ ಪ್ರೇರಿಸಬೇಕಾದುದು ಸುಶಿಕ್ಷಿತರ ಕೆಲಸ.



ಕೊಡಹೊರುವ, ಕುಷ್ಠವನ್ನು ಪ್ರದರ್ಶಿಸುವ ಧೋರಣೆಗಳನ್ನು ಅವಲೋಕಿಸಿದಾಗ ಇವು ಎಲ್ಲಮ್ಮನನ್ನು ಆದರ್ಶವಾಗಿ ಆದರಿಸುವ ಮನೋಧರ್ಮವನ್ನು ಪ್ರತಿನಿಧಿಸುವಂತೆಯೆ'ಸ್ವಸಹಾನುಭೂತಿ'ಪರವೂ ಆಗಿರುವುದನ್ನು ಒಡೆದು ಹೇಳುತ್ತದೆ.

## ಎಲ್ಲಮ್ಮಗ್ಹೋಗಿ ಬರಬೇಕ

ಜಾತ್ರೆಯ ಹೊರಗಿನ ದೃಶ್ಯಗಳು ಕಣ್ಣಿಗೆ ಬಿದ್ದದ್ದು ಅಚ್ಚಳಿಯದಂತಿವೆ. ಹಳ್ಳಿಗಳಿಂದ ಬಂದ ಭಕ್ತರು ಬಂಧು ಸಮೇತರಾಗಿ ಅಲಂಕರಿಸಿದ ಚಕ್ಕಡಿಗಳಲ್ಲಿ ಹೊರಟು ಬಂದಿರುತ್ತಾರೆ. ಮಾರ್ಗದಲ್ಲಿ ಅಲ್ಲಲ್ಲಿ ತಂಗುತ್ತ ಹಾಡು ಕುಣಿತಗಳಲ್ಲಿ ಮೈಮರೆತಿರುತ್ತಾರೆ. ಒಂದು ಜನಪದಗೀತೆ ಎಲ್ಲಮ್ಮನ ಜಾತ್ರೆಯ ಸಿದ್ಧತೆಯ ವೈಭವವನ್ನು ಹೀಗೆ ಹೇಳುತ್ತದೆ.

ಎಲ್ಲಮ್ಮಗ್ಹೋಗಾಕ ಎಲ್ಲ ಸಾಹಿತ್ಯ ಬೇಕ
ಎಲ್ಲಿ ಮಲ್ಲೆಂಬಾ ಎರಡೆತ್ತ ಹೂಡಿಕೊಂಡು
ಎಲ್ಲಮ್ಮಗ್ಹೋಗಿ ಬರಬೇಕ.

ಬಂಡೀಯ ಹಿಡಿತಮ್ಮ ಬಂಡೀಯ ಹೂಡಿತಮ್ಮ
ಬಂಡಿಗೆ ಭಂಡಾರ ಹೂಡಿತಮ್ಮ ಉಗ್ರಗೊಳ್ಳ
ಎಲ್ಲಮ್ಮಗ್ಹೋಗಿಬರಬೇಕ

ಇದು ಜಾತ್ರೆಯ ತಯಾರಿಯಾದರೆ ಎಲ್ಲಮ್ಮನ ಕಣ್ಮಣಿಯಾದ ಪರಶುರಾಮನಿಗೆ ಏನು ಒಯ್ಯಬೇಕು?ಎಲ್ಲಮ್ಮಗ್ಹೋಗಾಕ ಎಳ್ಳು ಬೆಲ್ಲವನೊಯ್ದು

ಮಲ್ಲೀಗಿ ಒಯ್ದು ತುರಬೀಗೆ ಪರಶುರಾಮ್ನ
ಜಲ್ಲಿಗೀ ಬೇಕು ಬಿಳಿಮುತ್ತ.
ತಾಯಿ ಮಕ್ಕಳ ಒಂದು ಜೋಡಿ ಚಿತ್ರ ಕೊಡುತ್ತದೆ ಈ ತ್ರಿಪದಿ.

ಎಲ್ಲಮ್ಮ ಮಗನಿದ್ದರೂ, ಕೆಂಡದಂಥಾ ನಿಷ್ಠ ಋಷಿಯ ಪತ್ನಿಯಾಗಿದ್ದರೂ ಕೊನೆಗೂ ಒಬ್ಬಂಟಿ. ಬಹಳ ಹಾಡುಗಳಲ್ಲಿ ಆಕೆ ಒಬ್ಬಳೇ ಅಡ್ಡಾಡುವ ಚಿತ್ರಗಳಿವೆ. ಇದೂ ಅಂಥದೊಂದು ದೃಶ್ಯ.

ಗುಡ್ಡದ ಏರ್ಯಾಗೆ ಒಬ್ಬಾಕೆ ಎಲ್ಲಮ್ಮ
ಇಬ್ಬನಿ ಬಾಳಾ ನೆಲಗಂಟು ಬಿದ್ದರುಸ್ಕೆತ
ಹಬ್ಬ ಜಾತುರಿ ನಡೆದಾವ್ವ.

ಇದು ಬಹುಶಃ ಭಾರತ ಹುಣ್ಣಿಮೆ ಸಂದರ್ಭದ್ದೇ. ಏಕೆಂದರೆ ಫೆಬ್ರವರಿ ತಿಂಗಳಲ್ಲಿ ಇಬ್ಬನಿ ಬೀಳುತ್ತಿರುತ್ತದೆ. ಹಾಗೇ ಬಿಸಿಲೂ ಚುರುಕಾಗಿರುತ್ತದೆ ಎಂಬುದನ್ನಿಲ್ಲಿ ನೆನೆಯಬಹುದು.

ಸಾಂಸ್ಕೃತಿಕವಾಗಿ ಸಮೃದ್ಧವಾದ ಎಲ್ಲಮ್ಮನ ಜಾತ್ರೆ ವೇಶ್ಯಾಗಾರಿಕೆಯ ರೂಪಕ್ಕೆ ತಳ್ಳುವ ದಲ್ಲಾಳಿಗರ 'ಅಜ್ಞ ಪೋಷಕರ, ಅಸಹಾಯಕ ಬಲಿಪಶುಗಳ, ಸಮ್ಮೇಳನವೂ ಆಗಿರುವುದು ಬದುಕಿನ ದುರಂತಗಳಲ್ಲೊಂದು.

ಮುತ್ತುಕಟ್ಟುವ ವಿಧಿಯನ್ನು ಈಗ ಸರ್ಕಾರ ನಿಷೇಧಿಸಿರುವುದರಿಂದ ಸಮೀಪದ ಉಗರಗೊಳ್ಳದಲ್ಲೋ ಹೂಲಿಯಲ್ಲೊ ಕದ್ದು ಮುಚ್ಚಿ ಸಾಗಿಸಲಾಗುತ್ತಿದೆ.

ಅಲ್ಲಿ ಅಡ್ಡಾಡುತ್ತಿರುವ ಹಿರೇಜೋಗ್ತಿಯತರನ್ನು ಸಂದರ್ಶಿಸಿದಾಗ ಅವರು ಮುತ್ತು ಹೊರಿಸುತ್ತಿರುವುಧನ್ನು ಒಪ್ಪಿದರಲ್ಲದೇ ಬಲವಾಗಿ ಸಮರ್ಥಿಸಿಕೊಂಡರು. ಪೋಲೀಸರಿಗೂ ಇದರಲ್ಲಿ ಪಾಲಿರುವುದರಿಂದ ಅವರೂ ಜಾಣಕುರುಡಾಗಿರುವುದು ಸ್ಪಷ್ಟ.

ಪೂಜಾರಿಗಳದು ಅಗ್ರ ಪಾತ್ರವಾದರೂ ಅವರು ಮನ ತೆರೆದು ಮಾತಾಡಲಿಲ್ಲ. ಮೊಗುಂ ಆಗಿದ್ದರು.'ಮುತ್ತು ಕಟ್ಟಿದರೆ ತಪ್ಪೇನ್ರಿ ಚಂದ್ರಗುತ್ತಿ ಗುಡಿಯಾಗೆ ಕಟ್ತಾರಲ್ರಿ' ಎಂದರು. ಅವರ ಅಭಿಪ್ರಾಯದಂತೆ ಮುತ್ತು ಕಟ್ಟಿದರೆ ಅದು ಸೂಳೆ ಮುತ್ತು ಅಥವಾ ಎಂಜಲು ಮುತ್ತು ಎಂತಲೇ ಆಗಬೇಕಿಲ್ಲ. ಅವರು ಹೇಳಿದ ಮತ್ತೊಂದು ಹೇಳಿಕೆಯಂತೆ ಎಂಜಲು ಮುತ್ತು ಕಟ್ಟಿಕೊಳ್ಳುವವರು ಸವದತ್ತಿಗೇನೇ ಬರಬೇಕಿಲ್ಲ. ಸ್ಥಳೀಯ ಎಲ್ಲಮ್ಮ ಗುಡಿಗಳಲ್ಲೋ, ಜೋಗ್ತಿಯರ ಮನೆಗಳಲ್ಲೇ ಕಟ್ಟಿಕೊಳ್ಳಬಹುದು. ಚಂದ್ರಗುತ್ತಿಯಲ್ಲಿ ಗುಡಿಯಲ್ಲೇ ಅಧಿಕೃತವಾಗಿ ಮುತ್ತು ಕಟ್ಟುತ್ತಾರೆ. ಆ ಮುತ್ತು ಗರತಿ ಮುತ್ತೇ ಆಗಿರಬೇಕಿಲ್ಲ ಎಂದೂ ಕೆಲವರು ಹೇಳಿದರು.

ಜೋಗಪ್ಪರನ್ನು ಸಂದರ್ಶಿಸಿದಾಗ ಅವರು ತರಹೇವಾರಿಯಾಗಿ ಪ್ರತಿಕ್ರಿಯಿಸಿದರು.

ತಾನು 'ಹೆಣ್ಣು' ಎಂದು ಒಬ್ಬಾತ ಹೇಳಿದರೆ ಕಾಮ ಕಳೆದುಕೊಂಡ ತಾನು ದೇವಿಯ ರೂಪೇ ಎಂದ!ಜೋಗತಿಯರ ಹಾಗೆ ತಾವು ಅನೈತಿಕರಲ್ಲ ಎಂದು ಮಗದೊಬ್ಬ ಹೇಳಿದ.

ಕೆಲವು ಗಂಡುಗಳೇ ತಮ್ಮನ್ನು ಕಾಮಿಸಿ ಬಂದಿದ್ದರಬಗೆಗೆ ಒಬ್ಬ ಹೇಳಿದಾಗ ಅದು ಅನೈಸರ್ಗಿಕ ಸಂಬಂಧವೆಂದು ತೋರಿತು.

ಎಲ್ಲಮ್ಮನಿಗೆ ಪುರುಷದ್ವೇಷದ ಪಟ್ಟ ಕಟ್ಟಿದ ಭಕ್ತರೂ ಇದ್ದಾರೆ. ಆಕೆ ಗಂಡನ್ನು ಹೆಣ್ಣಾಗಿಯೂ ಹೆಣ್ಣನ್ನು ಗಂಡಾಗಿಯೂ ಮಾಡಿರುವ ನಿದರ್ಶನಗಳನ್ನು ಹೇಳುತ್ತಾರೆ.

ಎಲ್ಲಮ್ಮ ಗಂಡ, ಹಾಗೂ ಮಕ್ಕಳಿಂದ ಪಟ್ಟ ಪಡಿಪಾಟಲನ್ನು ಇದಕ್ಕೆ ಸಮರ್ಥನೆಯಾಗಿ ನೀಡುತ್ತಾರೆ. ಎಲ್ಲಮ್ಮ ಶಕ್ತಿ ದೇವತೆಯಾದ್ದರಿಂದ ಇದು ಸಮರ್ಥನೀಯವಿರಬಹುದು. ಎಲ್ಲಮ್ಮನ ಗಡ್ಡಕ್ಕೆ ಮೀಸೆ ಅಂಟಿಸಿದ ಪ್ರಸಂಗವೂ ಇದಕ್ಕೆ ಸಂಕೇತ.

'ನಿನಗೆ ಮೂಗಿನ ಕೆಳಗೆ ಮೀಸೆಯಿದ್ದರ ನನಗೆ ಎದೀಮ್ಯಾಲದ, ಎಂಬುದಾಗಿ ಉತ್ತರ ಕರ್ನಾಟಕದಲ್ಲಿ ಸ್ತ್ರೀಯರು ವಾಡಿಕೆಯಾಗಿ ಹೇಳುವ ಮಾತೂ ಇದಕ್ಕೆ ಪೂರಕವಾಗಿದೆ.

* * * * *

## ಜೋಗತಿಯರ ಪರ್ವಾಚರಣೆಗಳು

ಪ್ರಕೃತಿ ಪರಿಸರವನ್ನವಲಂಬಿಸಿ ಹಿಂದೂ ಸಂಸ್ಕೃತಿಯಲ್ಲಿ ಜಾತ್ರೆ ಉತ್ಸವಗಳನ್ನು ನಿಗಧಿಗೊಳಿಸಲಾಗಿದೆ. ಉದಾಹರಣೆಗೆ ರಥಸಪ್ತಮಿ ಎಂದು ಕರೆದಿರುವುದರಲ್ಲೆ ಸೂರ್ಯನ ಚಲನೆಯಲ್ಲಿನ ಬದಲಾವಣೆಯನ್ನು ಕಾಣಭಹುದು. ಹಾಗೆಯೇ ಹಬ್ಬವಾದ ಸಂಕ್ರಾಂತಿ, ಯುಗಾದಿಗಳು, ವಸಂತ ಪಂಚಮಿ, ಹೋಳಿ, ಮುಂತಾದವುಗಳು ಒಂದು ಸಾಂಸ್ಕೃತಿಕ ಪರಿವೇಶವನ್ನೇ ಕಲ್ಪಿಸುವಂಥವು ಒಂದೊಂದು ಸಂದಲ್ಲೂ ಒಂದೊಂದು ಆಚರಣೆ. ಸಂಕ್ರಾಂತಿಯಲ್ಲಿ ಎಳ್ಳು ಬೆಲ್ಲ ತಿಂದು ಒಳ್ಳೆಮಾತಾಡು ಎಂದರೇ ದಸರೆಯಲ್ಲಿ ಬನ್ನಿ ಮುಗಿದು ನಾವು ನೀವು ಒಂದಾಗಿರೋಣ ಎಂಬ ಆಶಯ.ಯುಗಾದಿಯಂತು ಕಷ್ಟ ಸುಖಗಳನ್ನು ಸಮವಾಗಿ ಸ್ವೀಕರಿಸಬೇಕೆಂಬುದಕ್ಕೆ ಬೇವು ಬೆಲ್ಲಗಳನ್ನು ಕುಟ್ಟಿ ಜೀವನವೆಲ್ಲ ಬೇವುಬೆಲ್ಲ ಎರಡು ಸವಿಯನ್ನು ಕಲಿಮಲ್ಲಾ ಎಂಬ ಕವಿತೆಗೆ ಪ್ರೇರಣೆಯಾಗಿದೆ.

ಜೋಗತಿಯವರು ಯುಗಾದಿಯನ್ನು ವಿಶೇಷ ರೀತಿಯಲ್ಲಿ ಆಚರಿಸುತ್ತಾರೆ ಜಳಕ ಮಾಡಿದ ಅವರು ಐದು ಮನೆಗಳನ್ನು ಜೋಗು ಹಾಕಿ ಬರುತ್ತಾರೆ. ತಮ್ಮ ದೇವಿಯನ್ನು ಕೊಂಡಾಡುತ್ತಿರುತ್ತಾರೆ. ಮರುದಿನ ದೇವಿಯ ಗಾಡಿಯಲ್ಲಿ ಕೂತು ಬರುವುದನ್ನು ಸ್ವಾಗತಿಸುತ್ತಾರೆ. ಅಂದು ಭಕ್ತಾಧಿಗಳು ಯಾತ್ರಿಕರು ಕಾಳು ಕೊಡುವುದಲ್ಲದೆ. ಆಯರ ಮಾಡುವುದು ಇದೆ.

ವೈಶಾಖ ಮಾಸದಲ್ಲಿ ಬರುವ ಬಸವ ಜಯಂತಿಯನ್ನು ಸಹ ಇವರು ಆಚರಿಸುತ್ತಾರೆ. ೧೨ನೇ ಶತಮಾನದಲ್ಲಿ ಆಗಿ ಹೋದ ಬಸವಣ್ಣನವರು ನಂದಿಯ ಅವತಾರವೆಂದೇ ಜನರ ನಂಬಿಕೆ ಹೀಗಾಗಿ ಅವರು ಮನೆಯಲ್ಲಿನ ಎತ್ತುಗಳನ್ನು ಅಲಂಕರಿಸಿ ಕೊಡುಗಳಿಗೆ ಬಣ್ಣ ಹಚ್ಚಿ ಸಿಂಗರಿಸುತ್ತಾರೆ ಇಲ್ಲಿ ಬಸವಣ್ಣ ದೇವರೆಂಬ ಭಾವಕ್ಕಿಂತ ಕೃಷಿಯಲ್ಲಿ ಪ್ರಧಾನ ಪಾತ್ರ ವಹಿಸುವುದೇ ಮುಖ್ಯವಾಗಿ ಕಾಣುತ್ತದೆ. ಮರೆವಾಡ ಮುಂತಾದ ಕಡೆ ಬಸವನಿಗೆ ಪ್ರತ್ಯೇಕ ದೇವಾಲಯಗಳಿದ್ದರೂ ಇದು ವಿರಳ. ಬಸವ ಅಥವಾ ನಂದಿಗಿದ್ದ ಪ್ರಾಮುಖ್ಯ ಕೊಂಚ ಕಡಿಮೆಯಾದಾಗ 'ಬಸವಿ' ಯರ ಸ್ಥಾನವೂ ಕೆಳಗಿಳಿದುದೂ ಗಮನಾರ್ಹ.

ಇದರಂತೆಯೇ ನಾಡಿನಾದ್ಯಂತ ಸಡಗರ ತರುವ ಹಬ್ಬ ನಾಗರ ಪಂಚಮಿ ಹಬ್ಬ. ಹೆಣ್ಣುಮಕ್ಕಳ ಹಬ್ಬ. ಶ್ರಾವಣದಲ್ಲಿ ಬರುವ ಇದು ಸರ್ಪ ಪೂಜೆಗೆ ನಿಮಿತ್ತ. ನಾಗರಾಧನೆ ಪ್ರಾಚೀನ ಕಾಲದಿಂದ ಅಸ್ತಿತ್ವದಲ್ಲಿದೆ. ನಾಗನಿಗೂ ಲೈಂಗಿಕ ಕಲ್ಪಿಸಿರುವ ಮನೋವಿಜ್ಞಾನಿಗಳಿದ್ದಾರೆ.

ಬಸವನಿಗೆ ಅರ್ಪಿಸಿದ ಬಸವಿಯಂತೆ, ನಾಗನಿಗೂ ಅರ್ಪಿತರಾದ ನಾಗಿಣಿಯರು ಇರುತಿದ್ದುದು ಸಂಶೋಧನೆಯಿಂದ ಸ್ಥಿರಪಟ್ಟಿದೆ. ಕೆಲವೊಮ್ಮೆ ಸರ್ಪ ಮೈತುಂಬಿದಂತೆ ಮಾಡುತ್ತಾ ನರ್ತಿಸುವ ದೇವದಾಸಿಯರು ಈ ಮಾತಿಗೆ ಸಾಕ್ಷಿಯಾಗಿದ್ದಾರೆ. ದೇವದಾಸಿಯರು ಸಂಭ್ರಮದಿಂದ ಭಾಗಿಯಾಗುವ ಹಬ್ಬವೆಂದರೆ ಹೋಳಿ ಅಥವಾ ಕಾಮಣ್ಣನ ಹಬ್ಬ. ಅ ಸಂದರ್ಭದಲ್ಲಿ ಹೋಳಿ ಹುಣ್ಣಿಮೆ ಹಾಡುಗಳನ್ನು ಹಾಡುವುದು

ರೂಢಿ.ಅವು ಅಶ್ಲೀಲವಾಗಿರುವುದು ರೂಢಿ ಕಾಮಣ್ಣನೆಂಬ ಗೊಂಬೆಯನ್ನು ಮಾಡಿಟ್ಟು ಅದಕ್ಕೆ ಪೂಜೆ ಸಲ್ಲಿಸುವುದು ವಾಡಿಕೆ. ಪ್ರತಿ ರಾತ್ರಿ ಜೋಗತಿಯರು ಅಲ್ಲಿ ಹಾಡು ನೃತ್ಯ [illegible] ಸಲ್ಲಿಸುತ್ತಾರೆ. ಕಾಮಣ್ಣನನ್ನು ಸುಟ್ಟ ನಂತರ ಓಕುಳಿ ಮಾಡುವುದು ಒಂದು ಆಚರಣೆ.

ಜೋಗತಿಯರು, ದೇವದಾಸಿಯರು ಗುಂಪಾಗಿ ಬಂದು ಕುಳಿತಿರುತ್ತಾರೆ. ಯುವಕರ ಹಾಗೂ ಇವರ ನಡುವೆ ಸರಸ ಪಂದ್ಯ ಆರಂಭ. ಇನ್ನು ದೀಪಾವಳಿಯಲ್ಲಿ ಜನಪದರರು ಕರೆಯುವ ಹಟ್ಟಿ ಹಬ್ಬದ ಆಚರಣೆ ವಿಭಿನ್ನರೀತಿಯದು. ವೈಷ್ಣವ ಸಂಪ್ರದಾಯದ ಪ್ರಭಾವದಿಂದ ಕೃಷ್ಣನ ಆರಾಧನೆ ಮುಖ್ಯವಾಗಿರುತ್ತದೆ. ಅಂದು ಜೋಗತಿ ಅಥವಾ ದೇವದಾಸಿಯೊಡನೆ ಕಳೆಯುವುದು ಪ್ರಜಾನನ ಶಕ್ತಿಯ ಉದ್ದೀಪನ ಮಾಡುತ್ತದೆಂಬುದು ಜನರ ನಂಬಿಕೆ.

ವಿಜಯ ನಗರದ ಅರಸರ ಕಾಲದಲ್ಲಿ ಸಾನಿಯರಿಗೆ ಮನ್ನಣೆಯಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ದಸರೆ ಮೆರವಣಿಗೆಯಲ್ಲಿ ಅವರು ಪ್ರಮುಖ ಪಾತ್ರವಹಿಸುತ್ತಿದ್ದರಂತೆ. ದೇವದಾಸಿಯರಿಗಿದ್ದ ಮನ್ನಣೆ ಕೆಳಗಿಳಿದು ಅವರು ವೇಶ್ಯರೆಂದೇ ಪರಿಗಣಿತರಾದ ನಂತರ ಹಬ್ಬಗಳಲ್ಲಿ ಅವರ ಪಾತ್ರಗಳನ್ನು ಪರಿಮಿತಗೊಳಿಸಲಾಯಿತು. ಈಗ ಒಕುಳಿಯೆರಚುವುದರಲ್ಲಿ [illegible]ವರ ಪಾತ್ರ ಕ್ವಚಿತ್ತಾವಾಗಿರುವುದು ಗಮನಾರ್ಹ. ಆದರೆ ಮೊದಲಿಗಿಂತ ಈಗ [illegible] ಜಾತ್ರೆಯ ಸಮಯದಲ್ಲಿ ಹಣದ ಥೈಲಿಗಳು ಓಡಾಡುತ್ತಿರುತ್ತವೆ. ಟ್ಯಾಕ್ಸಿ, ಬಸ್ಸುಗಳಲ್ಲಿ ಜೋಗತಿ ಧೀಕ್ಷೆ ತೆಗೆದುಕೊಂಡ ಕನ್ಯೆಯರನ್ನು ತುಂಬಿಸಿಕೊಳ್ಳುವ ದಳ್ಳಾಳಿಗಳು ಸವದತ್ತಿಯಂತಹ ಕ್ಷೇತ್ರಗಳಲ್ಲಿ ಕಂಡುಬರುತ್ತಾರೆ. ತಕ್ಷಣ ಅಂತಹವರನ್ನು ಕೆಂಪು ದೀಪದ ಪ್ರದೇಶಗಳಿಗೆ ರವಾನೆ ಮಾಡುವ ವ್ಯವಸ್ಥೆ ಇರುತ್ತದೆ. ಪುಣೆಯ ಬುಧವಾರ ಪೇಟೆ ಹಾಗು ಮುಂಬಾಯಿಯ ಕಾಮಾಟಿ ಪುರಗಳಲ್ಲಿ ಯುವತಿಯರೇ ಹೆಚ್ಚಾಗಿರುವುದು ಇದನ್ನು ಸಾಭೀತು ಪಡಿಸುತ್ತದೆ.

* * * * *

## ಹೆಣ್ಣುಮಕ್ಕಳ ಅರ್ಪಣೆಯ ಹಿನ್ನೆಲೆ

ಪೆನ್ಸರ್ ಉಲ್ಲೇಖಿಸುವಂತೆ ಗುಜರಾತ್ ಪ್ರಾಂತ್ಯದಲ್ಲಿ ೨೦ ಸಾವಿರ ಹೆಣ್ಣುಮಕ್ಕಳ ಬೌದ್ಧದೇವಾಲಯಗಳಿದ್ದು ಬುದ್ಧ ವಿಗ್ರಹಕ್ಕೆ ನೈವೇದ್ಯ ಹಾಗು ಪುಷ್ಪಗಳನ್ನು ಏರಿಸುವ ಹೊತ್ತಿನಲ್ಲಿ ಹಾಡಬೇಕಾಗಿತ್ತು. ಈ ಮಧ್ಯೆ ಇದೆಲ್ಲದ್ದರಿಂದ ಬೇರೆಯಾದ ಸಂದರ್ಭ ಒಂದಿದೆ. ಮೊಗಲ್ ಸಾಮ್ರಾಜ್ಯದ ಔರಂಗ ಜೇಬನಿಗೆ ಕಲಾಶಕ್ತಿ ಇಲ್ಲದ ಕಾರಣ ಒಂದು ಅನುಕೂಲವಾಯಿತು. ಅರಸ ಒಂದು ಸನದು ಹೊರಡಿಸಿ ಹೆಣ್ಣುಮಕ್ಕಳು ಹಾಡಿ ನರ್ತಿಸುವುದನ್ನು ನಿಷೇದಿಸಿದನಲ್ಲದೆ. ಅಂತಹ ಹೆಣ್ಣುಮಕ್ಕಳಿಗೆ ಮದುವೆಯಾಗಬೇಕೆಂದು ಶಿಕ್ಷೆ ವಿಧಿಸಿದನಂತೆ! ತಪ್ಪಿದರೆ ಸಾಮ್ರಾಜ್ಯದಿಂದ ಹೊರ ಹೋಗಬೇಕೆಂದು ಸಾರಿದನಂತೆ.

ಪೂರ್ವ ಭಾರತದಲ್ಲಿ ಒರಿಸ್ಸಾದ ಜಗನ್ನಾಥ ದೇವಾಲಯದಲ್ಲಿ ಸುಮಾರು ೯ ನೇ ಶತಮಾನದ ಹೊತ್ತಿಗೆ ದೇವರೆದುರು ನರ್ತಿಸುತ್ತಿದ್ದ ನರ್ತಕಿಯರು ಬಿಡುವಿನಲ್ಲಿ ತಮ್ಮಿಚ್ಛೆಬಂದವರೊಡನೆ ರಮಿಸುತ್ತಿದ್ದರ ಐತಿಹಾಸಿಕ ದಾಖಲೆಗಳಿವೆ.

ಕ್ರಿ. ಶ. ೧೦೨೯ರಲ್ಲಿ ಚೀನಿ ಯಾತ್ರಿಕನೊಬ್ಬನು ದಾಖಲಿಸಿದನಂತೆ ಮಲಬಾರಿನ ತಿರುವಾಂಕೂರಿನಲ್ಲಿ ತಂದೆ ತಾಯಿಗಳೇ ಸ್ವಪ್ರೇರಣೆಯಿಂದ ಮಕ್ಕಳನ್ನು ದೇವಿಗೆ ಅರ್ಪಿಸುತ್ತಿದ್ದರು. ವಿಧ್ಯುಕ್ತ ಆಚರಣೆಯ ನಂತರ ದೇವರ ಪ್ರತಿನಿಧಿ ಎಂದರೇ ಪೂಜಾರಿಯೊಂದಿಗೆ ಅವರು ರಮಿಸಬೇಕಿತ್ತು.

ಉತ್ತರ ಭಾರತವು ವಿದೇಶಿ ಶಕ್ತಿಗಳಿಗೆ ಹಾಗೂ ಪ್ರಭಾವಗಳಿಗೆ ಹೆಚ್ಚಾಗಿ ಪಕ್ಕಾದ್ದರಿಂದ ಅಲ್ಲಿಗಿಂತ ದಕ್ಷಿಣ ಭಾರತದಲ್ಲಿ ದೇವದಾಸಿಯರ ಪಾತ್ರ ಪ್ರಧಾನವಾಗಿ ಕಾಣುತ್ತದೆ. ಎಂಬುದು ಇತಿಹಾಸಕರ ಹಾಗೂ ಸಂಸ್ಕೃತಿ ಶಾಸ್ತ್ರಜ್ಞರ ಅಭಿಮತ.

ಕರ್ನಾಟಕದಲ್ಲಿ ದೇವದಾಸಿಯರನ್ನು ಮುತ್ತುಕಟ್ಟಿ ಕೊಂಡವಳು ದೇವರ ಸೂಳೆ, ನಿತ್ಯ ಸುಮಂಗಲಿ, ಜೋಗತಿ ಗೆಜ್ಜೆಪೂಜೆಗೊಂಡವಳು, ಕಸಬೆ, ಸಾನಿ ಮುಂತಾಗಿ ಗುರುತಿಸಲಾಗಿದೆ.

ಶೈವ ಧರ್ಮದ ಅನುಯಾಯಿಗಳು ಅಂದರೆ ಮುಖ್ಯವಾಗಿ ನಂದಿಯನ್ನು ಆರಾಧಿಸುವವರು ಬಸವಿಯರೆನಿಸಿಕೊಂಡರು. ದೇವರಿಗಾಗಿ ಬಸವನನ್ನು ಅರ್ಪಿಸುವ ಪದ್ಧತಿ ಇದ್ದುದರಿಂದ ಹೆಣ್ಣುಮಕ್ಕಳನ್ನು ಅರ್ಪಿಸುವಾಗ ಬಸವಿಯರೆಂದೇ ಕರೆದರು.

'ರಂಗಸಾನಿ' ಎಂಬ ಗುಂಪು ವೈಷ್ಣವರದು. ದೇವಾಲಯಗಳಲ್ಲಿ ನೀರಿನ ಸೇವಾಕಾರ್ಯ ನಡೆಸುವವರು 'ಗಂಗಾಸಾನಿ' ಎಂದು ಕರೆಯಲ್ಪಟ್ಟರು. ಇವರೆಲ್ಲರ ಕರ್ತವ್ಯ ಜೋಗತಿಯರು ಅಥವಾ ದೇವದಾಸಿಯರದಕ್ಕಿಂತ ಭಿನ್ನವೇನಿಲ್ಲ. ಆದರೆ ಈ ಮುಂದೆ ಹೇಳುವ ಕೆಲವು ಕಾರಣಗಳು ಇದೆಲ್ಲದರ ಮೂಲದ ಕಡೆಗೆ ಬೆಳಕು ಚೆಲ್ಲುತ್ತದೆ.

**ಮಾತೃದೇವತಾರಾಧನೆ**

ಪ್ರಾಚೀನ ಭಾರತದಲ್ಲಿ 'ಬೃಹತ್ ಯೋನಿ' ಎಂದೇ ದೇವಿಯನ್ನು ಪೂಜಿಸುತ್ತಿದ್ದರು. ವೇದ ಶಾಸ್ತ್ರಗಳು ಮಾತೃ ದೇವೋಭವ ಎಂದು ಸ್ತ್ರೀ ಪ್ರಾಧಾನ್ಯವನ್ನು ಸಾರಿದ್ದರೂ ಸಹ ಪುರುಷ ಪ್ರಧಾನ್ಯ ಧೋರಣೆಗಳು ತಮ್ಮ ಶಾರೀರಿಕ ಶಕ್ತಿಯನ್ನೇ ಮುಂದು ಮಾಡಿಕೊಂಡು ಪ್ರತಿರೋಧಿಸಿದವು. ಉತ್ತರ ಭಾರತದಲ್ಲಿ ಅದು ಯಶಸ್ವಿಯಾಯಿತು. ಪುರುಷ ದೇವತೆಗಳು ಹುಟ್ಟಿಕೊಂಡರು. ಆದರೆ ದಕ್ಷಿಣ ಭಾರತದಲ್ಲಿ ಮಾತೃ ಪ್ರಾಧಾನ್ಯ: ಪುರಸ್ಕರಿಸಿದ್ದರಿಂದ ಪುರುಷದೇವತೆಯೊಬ್ಬ ತಮ್ಮ ದೇವಿಯನ್ನು ಧಮನ ಮಾಡುತ್ತಾನೆಂದು ದೇವಿಯನ್ನು ರಕ್ಷಿಸಲು ಸೈನ್ಯದ ಪರಿಚಾಲಕರ ಅಗತ್ಯವಿದೆಯೆಂದು ದೇವಿಯ ಪ್ರಜಾನನ ಶಕ್ತಿ ಉದೀಪ್ತವಾಗಿರಬೇಕೆಂದು ಅದು ನೇರವಾಗಿ ಸಾಧ್ಯವಿಲ್ಲದ್ದರಿಂದ ದೇವಿಗೆ ಅರ್ಪಿತರಾದ, ಆಕೆಯ ಗುಲಾಮರಿಂದ ಜಾಗರಿಸಬೇಕೆಂದು ಪ್ರತಿಪಾದಿಸಿದರು.

ಕೆಲವರು ಸ್ತ್ರೀ ದೇವಿಗಿದ್ದ ಪ್ರಾಬಲ್ಯ ಕಡಿಮೆ ಮಾಡಲು ಆಕೆ ಎಂದಿದ್ದರೂ ಗಂಡನ ಮನೆಗೆ ಹೊಗತಕ್ಕವಳು ಅಲ್ಲದೆ ಆಕೆಯ ಉತ್ತರಾಧಿಕಾರಿ ಗಂಡೇ ಇರಬೇಕೆಂದು ತೀರ್ಮಾನಿಸಿ ಆಕೆಗೋರ್ವ ತಮ್ಮನನ್ನು ಒಂದು ವಯಸ್ಸಿನವರೆಗೆ ಕಾಪಾಡುವಂತೆ ತಂದೆಯನ್ನು ಸೃಷ್ಟಿ ಮಾಡಿದರು.

ಧಾರ್ಮಿಕ ಸ್ಥಿತ್ಯಂತರಗಳ ಕಾಲದಲ್ಲಿ ಆಕೆಯ ಗಂಡನೆಂದು ಪುರುಷ ದೇವರನ್ನು ತರಲಾಯಿತು. ಇದರಿಂದ ಮೊದಲಿನ ಪೂಜಾರಿಗಳಿಗೂ ಭಕ್ತರಿಗೂ ಕಸಿವಿಸಿಯಾಯಿತು. ಅವರು ಶಕ್ತಿ ದೇವತೆಯ ಪ್ರಭಾವವನ್ನು ವಿವರಿಸುವ ಪ್ರಮೇಯ ಒದಗಿತು.

**ರಾಜಕೀಯ ಕಾರಣಗಳು**

ವಿದೇಶಿಯರ ಆಕ್ರಮಣ ಕಾಲದಲ್ಲಿ ಸ್ವದೇಶದಿಂದ ಬಂದ ಹೆಣ್ಣುಮಕ್ಕಳು ಕಡಿಮೆಯಾಗಿದ್ದುದರಿಂದ ಸ್ಥಳೀಯ ಹೆಂಗಸರನ್ನು ಅವರು ಬಳಸ ಬಯಸಿದಾಗ ತಮಗೆ ಹುಟ್ಟುವ ಮಕ್ಕಳ ಹಾಗೂ ತಮ್ಮ ಭವಿಷ್ಯದ ಭಯದಿಂದ ಸ್ಥಳೀಯ ದೇವಿಗೆ ತಮ್ಮನ್ನು ಅರ್ಪಿಸಿಕೊಂಡ ನಂತರ ದಂದೆಗೆ ಇಳಿದುದು ಈಗ ಇತಿಹಾಸ. ಧರ್ಮವು ಬಡವರಿಗೆ, ಅಸಹಾಯಕರಿಗೆ ರಕ್ಷಾಕವಚವಾಗಿ ಬಂತು.

**ಧಾರ್ಮಿಕ ಕಾರಣಗಳು**

ಸಂಸ್ಕೃತೀಕೃತಗೊಂಡ ದೇವತೆಯನ್ನು ದರ್ಶಿಸಿದಾಗ ಸ್ವಂತದ ಹರಕೆಗಳನ್ನು ಬೇಡಿಕೊಂಡ ಹೊತ್ತಿನಲ್ಲಿ ಎಂದರೆ, ಖಾಯಿಲೆ ಪರಿಹಾರ, ಗಂಡು ಸಂತಾನದ ಕೋರಿಕೆ, ವಂಶಾಭಿವೃದ್ಧಿಗೆ, ಸಮೃದ್ಧಿಗೆ ಹೆಣ್ಣುಗಳನ್ನು ಅರ್ಪಿಸುವ ಪದ್ಧತಿ ಹುಟ್ಟಿಕೊಂಡಿತು. ಧರ್ಮಗುರುಗಳೆಲ್ಲ ಮೇಲುವರ್ಗದವರೇ ಇದ್ದುದು ಇದಕ್ಕೆ ನೆರವಾಯಿತು. ಧಾರ್ಮಿಕ ಆದೇಶಕ್ಕೆ ತಲೆ ಬಗ್ಗಿಸಿ ನಡೆವ ಕುರಿಗಳಾದರು ಅವರು.

**ಜಾತೀಯ ಕಾರಣಗಳು**

ದಕ್ಷಿಣ ಭಾರತ ಅದರಲ್ಲೂ ಕರ್ನಾಟಕದಲ್ಲಿ ಸೈನ್ಯದಲ್ಲಿದ್ದವರು ತಳವಾರರು. ಅವರು ಕದನದಲ್ಲಿ ಮಡಿದಾಗ ವಿಧವೆಯಾದ ತರುಣಿಯರು ತಮ್ಮನ್ನು ಸ್ಥಳೀಯ ದೇವತೆಗೆ



ಅರ್ಪಿಸಿಕೊಳ್ಳುವ ಪದ್ಧತಿ ಹುಟ್ಟಿತು. ಇದರಿಂದ ವಿಧವೆಯರಿಗೆ ರಕ್ಷಣೆ ಸಿಕ್ಕ ಸಂದರ್ಭಗಳೂ ಇದ್ದುವು. ಹುಟ್ಟಿದ ಮಗುವಿಗೆ ದೇವಿಯ ಹೆಸರಿಟ್ಟು ಹೆಮ್ಮೆಯಿಂದ ಅರ್ಪಿಸುವುದೂ ನಡೆಯಿತು.

**ಪುಂಸತ್ವದ ಅಭಾವ**

ಗಂಡ ನಪುಂಸಕನಾಗಿದ್ದ ಸಂದರ್ಭಗಳಲ್ಲಿ ಹೆಂಡತಿಯನ್ನು ದೇವಿಗೆ ಅರ್ಪಿಸಿ ಆಕೆ ಗರ್ಭಧರಿಸುವವರೆಗೆ ಯಾರೊಂದಿಗಾದರೂ ಕೊಡಬಹುದೆಂಬುದಕ್ಕೆ ಸಮ್ಮತಿಯಿತ್ತು.

ಅಲ್ಲದೆ ಮನೆಯಲ್ಲಿ ಬರೇ ಹೆಣ್ಣು ಮಕ್ಕಳಿದ್ದ ನಿದರ್ಶನಗಳಲ್ಲಿ ತಮ್ಮ ಮಗಳೊಬ್ಬಳನ್ನು ದೇವಿಗೆ ಬಿಟ್ಟು ಅವಳಿಂದ ಗಂಡು ಸಂತಾನ ಪಡೆಯುವ ಹಂಬಲವೂ ಕೆಲವರಿಗಿದ್ದುದು ಕಂಡು ಬಂದಿದೆ.

**ಸಂಪ್ರದಾಯವಾದ**

ಪರಂಪರೆಯನ್ನು ಸದಾ ಜಾಗೃತವಾಗಿರಿಸುತ್ತ ಭೋಗೇಶ್ವರ ಇಂದ್ರನ ಭಕ್ತರಾಗಿದ್ದವರು ಸ್ವರ್ಗವನ್ನೇ ತಮ್ಮ ಧರೆಯ ಆಸ್ಥಾನಕ್ಕೂ ಇಳಿಸಲು ತವಕಿಸಿದ್ದರು. ಅದಕ್ಕೆ ಸಂವಾದಿಯಾಗಿರಲೆಂದೇ ತಂತಮ್ಮ ಆಸ್ಥಾನಗಳಲ್ಲಿ ಕಲಾವಂತೆಯರಾದ ಸುಂದರ ಸ್ತ್ರೀಯರನ್ನಿರಿಸಿಕೊಂಡರು.

(ಕರ್ನಾಟಕದ ಉತ್ತರರ ಭಾಗದಲ್ಲಿ ಈಗಲೂ ಕಲಾವಂತ ಎಂಬ ಹೆಸರಿನ ಉಪಜಾತಿಯಿದೆ)

ರಾಜ್ಯವಿಸ್ತರಣೆಯಲ್ಲೂ ಇವರ ಕೈವಾಡವಿರುತ್ತಿತ್ತು. ಅನೇಕ ಸುಂದರಿಯರಿಂದ ರಾಜ್ಯಗಳ ಉದ್ಧಾರ ಪತನ ಎರಡೂ ಆದುವು!

**ದೇವದಾಸಿ ಬೆಳೆದು ಬಂದ ಬಗ್ಗೆ:**

ಕನ್ನಡ ಶಾಸನಗಳಲ್ಲಿ ದೇವದಾಸಿ ಎಂಬ ಶಬ್ಧ ಕಂಡು ಬರುವುದಿಲ್ಲ. ಪರ್ಯಾಯ ಪದವಾಗಿರುವುದು 'ಸೂಳೆ' ಎಂಬುದು ಕಾವ್ಯಗಳಲ್ಲಿ ಇವರುಗಳ ಬಗೆಗಿನ ವರ್ಣನೆ ಪ್ರಸ್ತಾಪ ಬಂದಿರುವುದನ್ನು ಗಮನಿಸಬಹುದು.

ಹರಿಶ್ಚಂದ್ರ ಕಾವ್ಯದಲ್ಲಿ ಬರುವ ಗಾಣ ನಾಯತಿಯರು ದೇವದಾಸಿಯರ ನೆನಪು ತರುತ್ತಾರೆ.

ಕನಕದಾಸರ ಮೋಹನ ತರಂಗಿಣಿಯಲ್ಲಿ ಸೂಳೆಗೇರಿಯ ಬಣ್ಣನೆ ಬಂದಿದೆ.

ಪಂಪ ಕವಿಯ ' ಆದಿಪುರಾಣ'ದಲ್ಲಿ ಬರುವ ನೀಲಾಂಜನೆ ದೇವದಾಸಿಯಿದ್ದಳು.

ವಿವಿಧ ಭಾಗಗಳಲ್ಲಿ ಬರುವ ಉಲ್ಲೇಖಗಳು:

ಕರ್ನಾಟಕದಲ್ಲಿ ದೇವದಾಸಿ. ರಾಜದಾಸಿ. ಬಸವಿ. ಆಯಗಾರ್ತಿ. ರಂಡಿ. ಗುಡ್ಡಿ ಮುಂತಾದವು

ಆಂಧ್ರದಲ್ಲಿ ಭೋಗಂ. ಬಸವಿ. ಸಾನಿ. ಕಲಾವಂತಲು ಇತ್ಯಾದಿ.

ರೂಪಿನಲ್ಲಿ ಅರವಾನನ ಕೈಹಿಡಿಯುತ್ತಾಳೆ. ಅರವಾನ ಮರುದಿನದ ಯುದ್ಧದಲ್ಲಿ ಹುತಾತ್ಮನಾದ ತಕ್ಷಣ ಆಕೆ ಕೈ ಬಳೆ ಒಡೆದುಕೊಂಡು, ಅರಿಶಿಣ ಕುಂಕುಮ ಅಳಿಸಿಕೊಂಡು ಶೋಕಿಸುತ್ತಾಳೆ.

ಇದನ್ನು ಅನುಕರಿಸುತ್ತ ಶಿಖಂಡಿಗಳು' ಅರವಾನನ' ವಿಗ್ರಹವನ್ನು ಸಿಡಿಸಿ ತಕ್ಷಣ ಮಂಗಳ ಸೂತ್ರ ತೆಗೆದುಹಾಕಿರೋದಿಸುತ್ತಾರೆ. ಇದು ಉತ್ಸವದ ಪರಮೋದ್ದೇಶ. ಇದರಿಂದ ಭಕ್ತರ ಬೇಡಿಕೆಗಳು ಈಡೇರುತ್ತವೆಂದು ಜನರ ನಂಬಿಕೆ.

ಇಲ್ಲಿಯೂ 'ಮೋಹಿನಿ'ಯ ನೆವದಲ್ಲಿ ನಪುಂಸಕತೆಯನ್ನು ಸಂರಕ್ಷಿಸುವ ಪ್ರಸಂಗ ವಿದೆಯಲ್ಲವೇ?

ಈ ಸಂಬಂಧ ಸವದತ್ತಿ ಜಾತ್ರೆಯ ಸಂದರ್ಭದಲ್ಲಿ ಕೆಲವು ' ಜೋಗಪ್ಪ'ರು ಮನಬಿಚ್ಚಿ ಮಾತನಾಡಿದರು

'ಚನ್ನಾ' ಎಂಬ ಜೋಗಪ್ಪನಿಗೆ ಸುಮಾರು ಮೂವತ್ತು ವರ್ಷ ವಯಸ್ಸು. ತಾನು ಗಂಡಲ್ಲವೆಂಬುದು ಅವನಿಗೆ ಮದುವೆಯಾಗುವ ತನಕ ಗೊತ್ತಾಗದಷ್ಟು ಅಮಾಯಕ. ಮಾದರ ಜಾತಿಗೆ ಸೇರಿದ ಅವನಿಗೆ ಗಂಡಸು ತನವಿಲ್ಲೆಂದು ಹೆಂಡತಿ ಹಾಗೂ ಬೀಗರ ಕಡೆಯವರು ಡಂಗುರ ಸಾರಿದರು. ಅವನ ಅಕ್ಕ ತಂಗಿಯರೇ ತಿರಸ್ಕಾರ ತೋರಿಸಿದರು. ವಾರಿಗೆಯವರ ತನ್ನನ್ನು ಹೆಣ್ಣಿನಂತೆ ಮುಟ್ಟಿ ಕೀಟಲೆ ಮಾಡಿದರು. ಕಡೆಗೆ ಬೇಸತ್ತು ಹೆಂಗಸಿನಂತೆ ಸೀರೆಯುಡತೊಡಗಿದ. ಅವನೇ ಹೇಳುವಂತೆ'ಇಜ್ಜಡ್' ಬಂತು! ದೇವಿಯ ಪತ್ನಿ ತಾನು ಎಂದು ಎಲ್ಲಮ್ಮನಿಗೆ ನಡೆದುಕೊಂಡ. ಮನೆಯವರಷ್ಟೇ ಏಕೆ ಬೀಗರು ಬಿಜ್ಜರೂ ಬಂದು ಮರ್ಯಾದೆ ವ್ಯಕ್ತಪಡಿಸಿದರು.

'ಚನ್ನಾ'ನಿಗೆ ಗಡ್ಡಮೀಸೆಗಳಿಲ್ಲ. ರೂಪಿನಲ್ಲಿತಿದ್ದಿದ ಗೊಂಬೆಯಂತಿದ್ದ ಅವನನ್ನು ಜೋಗತಿಯರು ಮುಟ್ಟಿ ತಮಾಷೆ ಮಾಡುತ್ತಿದ್ದರೂ ಅವನಿಗೆ ಬೇಸರವಿರಲಿಲ್ಲವೆನಿಸಿತು.

' ಎಲ್ಲಮ್ಮನಂಥಾಕ್ಕಿನೆಲ್ಲೂ ಕಾಣೆ ಎಂಬ ಹಾಡನ್ನು ತುಂಬ ಇಂಪಾಗಿ ಹಾಡಿ ಮೈಮರೆಸಿದ.

ಮತ್ತೊಬ್ಬ ಜೋಗಪ್ಪ ರಾಮಪ್ಪ ತಿಕೋಟಾ. ತಿಕೋಟಾ ಊರಿನವನೇ ವಯಸ್ಸು ಅಜಮಾಸು ಐವತ್ತು; ಕಟ್ಟುಮಸ್ತು ಆಳು. ಅವರ ವಂಶದಲ್ಲಿ ಹಲವರು ನಪುಂಸಕರು ಆಗಿ ಹೋಗಿದ್ದಾರೆ. ಆ ಕುರಿತು ಅವನಿಗೆ ವಿಷಾದವಿಲ್ಲ. ದೇವಿ ಒಳ್ಳೊಳ್ಳೇ ಫಲಗಳನ್ನು ಸ್ವೀಕರಿಸುವಂತೆ ತನ್ನನ್ನೂ ಸ್ವೀಕರಿಸಿದ್ದಾಳೆಂದು ಅವನ ನಂಬಿಕೆ. ಅವನು ಸವದತ್ತಿಯ ಖಾಯಂ ನಿವಾಸಿಯಾಗಲು ನಿಶ್ಚಯಿಸಿದ್ದಾನೆ." ದುಡೀತೀನಿ ಉಣ್ಣುತೀನಿ. ಯಾರ ಹಂಗಿನ್ಯಾಗೂ ಇಲ್ರೀ ನಾನು" ಎಂದು ತುಂಬ ವಿಶ್ವಾಸದಿಂದ ಹೇಳಿದ ಅವನನ್ನು " ಏನು ದುಡಿಮೆ" ಎಂದು ಪ್ರಶ್ನಿಸಿದರೆ " ಅಕೀ ದುಡಿಸಿಗೊಂತಾಳ ನಂದೇನದ" ಎಂದು ಮಾರ್ಮಿಕವಾಗಿ ನುಡಿದ ಆತ. (ಕೂತಂಡವರ್, ದೇವಾಲಯದ ಬಗೆಗೆ ಸಿಕ್ಕ ಮಾಹಿತಿಯಲ್ಲಿ ನಪುಂಸಕರ ಜಾತ್ರೆಯಲ್ಲಿ ' ಏಡ್ಸ್ ರೋಗ ನಿರೋಧಕ ಶಿಬಿರಗಳಿವೆ ಎಂಬ ಉಲ್ಲೇಖನದ



ನೆನಪಾಯಿತು) ವಕ್ಯವನ್ನು ಕೆದಕಿ ಕೇಳಿದರೆ ಅವನು ನಾಚಿ ತಲೆತಗ್ಗಿಸಿದ. ಮತ್ತು ಕೆಲವರು ಆ ಜೋಗಪ್ಪನನ್ನು ಕರೆದು ಕೈ ಹಿಡಿದು ಏನೋ ಸಮಾಲೋಚನೆ ಮಾಡಿದಾಗ ಅನುಮಾನ ಬಲವಾಯಿತು.' ಸಮರತಿ'ಯಲ್ಲಿ ಆಸಕ್ತರಾದವರು ಇಂಥವರನ್ನೂ ಬಳಸಿಕೊಳ್ಳುವುದರ ಬಗ್ಗೆ ಕೇಳಿದ್ದು ನೆನಪಾಯಿತು. ಬಹುಶಃ ಅಂಥ ಸಂಬಂಧದಿಂದಲೂ ' ಏಡ್ಸ್' ಹರಡುತ್ತಿರಬಹುದೆನ್ನಿಸಿತು.

ಮತ್ತೊಬ್ಬ ಹದಿಹರೆಯದ ಹದಿನೆಂಟರ ಹುಡುಗ ವಿರೋಬಾ ತಾತ್ಯಾ. ಊರು ಹೇಳಲಿಲ್ಲ. ಆದರೆ ಆತನೂ ಸೀರೆಯುಟ್ಟಿದ್ದು ಒಯ್ಯಾರವಾಗಿ ಮಾತಾಡುತ್ತಿದ್ದುದು ಮೋಜೆನಿಸಿತು.

" ತಾತ್ಯಾ ಮನೆಬಿಟ್ಟು ಯಾಕೆ ಓಡಿ ಬಂದಿ" ಎಂದದ್ದಕ್ಕೆ " ಮತ್ತೇನ್ರೀ ಮಾಡೋದು ಹಡದ ಅವ್ವನೇ ಸರೀ ನಡಕೊಳ್ಳಲ್ರಿ. ಅಣ್ಣಂದಿರು ಹೊಡೂದು ಬಡೂದ ಮಾಡಹತ್ತಿದ್ದರ್ರಿ. ತಾಳಲಾರದ್ದಕ್ಕೆ ಓಡಿಬರಬೇಕಾತ್ರಿ" ಎಂದ

" ನಿನಗ ಜೋಗಪ್ಪರ ಕೂಡ ಇರೂದು ಅರಾಮನ ಸುತ್ತೊ ಹೆಂಗ" ಎಂದಿದ್ದಕ್ಕೆ

"ಇಲ್ರಿ ಅವರೂ ಅಸಯಸಯ್ಯ ಮಾಡ್ತಾರ್ರಿ ಹಿಡೀಲಿಕ್ಕೆ ಬರ್ತಾರ್ರಿ" ಎಂದ

ಹೆಚ್ಚಾಗಿ ಒಂಟಿಯಾಗಿರುತ್ತಾನೆಂದು ತಿಳಿಯಿತು.

ಕಾಲಿಗೆ ಗೆಜ್ಜೆಕಟ್ಟಿ ಕೊಡಹೊತ್ತಿದ್ದ ಅವನು ನೋಡಲು ಮಾತ್ರ ಗಂಡಸಂತೆಯೇ ಇದ್ದ.

' ನಿನ್ನ ತಾಯಿ ಹೆಸರೇನು' ಎಂದರೆ ' ಎಲ್ಲಮ್ಮ' ಎಂದ ' ತಂದೆ? ಎಂದಿದ್ದಕ್ಕೂ ಹಾಗೇ ಉತ್ತರಿಸಿದ!

ಒಟ್ಟಾರೆ ಸಮಾಜ ಅಸಡ್ಡೆಯಿಂದ ಕಾಣುವ ನಪುಂಸಕರಿಗೆ ' ಎಲ್ಲಮ್ಮ ಸಂಪ್ರದಾಯ' ದಲ್ಲಿ ಒಳ್ಳೆಯ ಸ್ಥಾನವಿದೆ. ಅಂಧಶ್ರದ್ಧೆ, ಅನಕ್ಷರತೆಗಳೂ ಇಂಥವರ ಆತ್ಮಬಲ ಕುಗ್ಗಿಸಿ ಜೋಗಪ್ಪರಾಗಲು ಪ್ರೇರೆಪಿಸಿವೆ.

ಅವಲೋಕನದಲ್ಲಿ ಸ್ಪಷ್ಟವಾದದ್ದೆಂದರೆ ಎಲ್ಲಮ್ಮನ ಜೋಗಿಗಳಾದವರಲ್ಲಿ ಹೆಚ್ಚಿನ ಮಂದಿ ಹುಟ್ಟು ನಪುಂಸಕರಾದವರೇ ಎಂಬ ಅಂಶ.

ಜಾತ್ರೆಯಲ್ಲಿ ' ಜಡಿ' ಬಂದವರನೇಕರು ಕಣ್ಣಿಗೆ ಬಿದ್ದರು.

ಅವರಲ್ಲಿ ಒಬ್ಬಾಕೆ ಶೇಖವ್ವ. ಕಂದು ಬಣ್ಣದ 'ಜಡಿ' ಕಾಲತನಕ ಬಂದಿತ್ತು. ಅದನ್ನು ಸರ್ಪದಂತೆ ಸಿಂಬಿಸುತ್ತಿ ಇಟ್ಟುಕೋಬೇಕಾಗುತ್ತದೆ ಎಂದಾಕೆ ತಿಳಿಸಿದಳು.

ಸ್ನಾನ ಮಾಡುವಾಗ ಸಾಬೂನು ಬಳಸುವುದಿಲ್ಲವೆಂದಳು. ಯಾವಾಗಾದರೊಮ್ಮೆ ' ಅಂಟಿವಾಳ ಕಾಯಿ' ಹಚ್ಚಿ ತಲೆತೊಳಕೊಳ್ಳುವೆ ಎಂದಳು. ' ಸಾಬೂನು' ಬಾಲ್ಯದಿಂದ ಅವಳಿಗೆ ಒಗ್ಗದ ವಸ್ತು. ಸಾಬೂನು ತರಲು ರೊಕ್ಕ ಎಲ್ಲಿಂದ ಬರಬೇಕು ಎಂಬುದೂ ಅವಳ ಪ್ರಶ್ನೆ.

೬೪ ವಯಸ್ಸಿನ ಓಬಳವ್ವ ಎಲ್ಲಮ್ಮನ ಜಡಿ ಬಿಟ್ಟಾಕವಳು. ಹಾಗೂ ಬಿಳಿ ಉಡುಗೆ ತೊಟ್ಟವಳು. ಶುಕ್ರವಾರ ಮಂಗಳವಾರ ಐದು ಮನೆಯ ಭಿಕ್ಷ ಎತ್ತಿಯೇ ಮುಂದಿನ ಕೆಲಸ. ಅವಳು ಹೋಗುವ ಜಾಗವೂ ಕೊಳಗೇರಿ ಮಾದರ ಮಂದಿ. ಹರಿಜನ ಮಂದಿ ವಾಸಿಸುವ ಅಲ್ಲಿ ಶುಚಿತ್ವದ ಅಭಾವ ಎದ್ದು ಕಾಣುತ್ತದೆ. ಆಕೆ ತನ್ನ ಮನೆ ಶುಚಿಯಾಗಿರಿಸಿಕೊಂಡರೂ ಸುತ್ತಲ ದೂಷಿತ ಪರಿಸರ ಆಕೆಯ ಮೇಲೆ ಪರಿಣಾಮ ಬೀರಿದೆ. ಅವಳಿಗೆ 'ಜಡಿ' ಬಂದುದು ತೀರ ಈಚೆಗೆ ಈ ವಯಸ್ಸಿನಲ್ಲಿ ಎಲ್ಲಮ್ಮನಿಗೆ ಕಟ್ಟುನಿಟ್ಟಾಗಿ ನಡೆಕೊಳ್ಳಲು ಆಗದಲ್ಲ ಎಂಬ ಕೊರಗು ಆಕೆಗಿದೆ.

ನರಸಪ್ಪ ಅಂಗಡಿ ಎಂಬಾತನಿಗೂ ಜಡಿ ಬೆಳೆದಿದೆ. ಆದರೆ ಅದು ಭುಜದವರೆಗೆ ಮಾತ್ರವಿದೆ. ಅವನು ಜಾತಿಯಿಂದ ತಳವಾರ. ನಳದ ಅನಾನುಕೂಲತೆಯಿಂದ ನಿತ್ಯ ಜಳಕ ಆಗುವುದಿಲ್ಲವೆಂದ.

ಈ ಎಲ್ಲ ಜನರು ಕೊಟ್ಟು ಮಾಹಿತಿಯ ಪ್ರಕಾರ 'ಜಡಿ' ಒಂದು ಶಾರೀರಿಕ ನ್ಯೂನತೆ. ಸರಿಯಾಗಿ ಜಳಕ ಹಾಗೂ ಎಣ್ಣೆಯ ಪೋಷಣೆಯಿಲ್ಲದೆ ಕೂದಲು ಸೊಂಪುತನ ಕಳೆದುಕೊಂಡು ಬಣ್ಣಗೆಟ್ಟಿರುವುದು ಸ್ಪಷ್ಟ. ಜತೆಗೆ ಹೇನು ಮಂತಾದುವನ್ನು ತೆಗೆಯದೇ ಬಿಟ್ಟಿದ್ದರಿಂದ ಅದೂ ಕೂದಲು ಅಂದಗೆಡಲು ಕಾರಣವಾಗಿರಬೇಕು. ಉಚ್ಛವರ್ಗದವರಲ್ಲಿ 'ಜಡಿ' ಬಂದಿರುವುದು ತೀರರ ಕ್ವಚಿತ್ತಾಗಿ. ಒಂದೆರಡು ಅಪವಾದಗಳಿದ್ದರೂ ಅವು ಸೊಂಕು ಪರಿಣಾಮದ ಫಲಗಳು ಎಂಬುದು ಅರಿವಾಗುತ್ತದೆ.

ಇನ್ನು ಹಣೆತುಂಬ ಅರಿಶಿಣ ಬಳಿದುಕೊಂಡು ಜೋಗತಿಯರು ಗುಡ್ಡದ ತುಂಬ ಸಂಭ್ರಮಿಸುತ್ತಿದ್ದುದು ಕಂಡಿತು. ಕೆಲವರು ಬದನೆ ಕಾಯಿ ಹೆಚ್ಚುತ್ತಿದ್ದರು. ಹೆಚ್ಚಿನ ಮಂದಿ ಬೇಳೆ ಹೂರಣಕ್ಕಾಗಿ ರುಬ್ಬುತ್ತಿದ್ದರು.

ಸೇಡಂದ ಹಣಮಂತವ್ವ ಎಮ್ಮಿಯವರ್ ಎಂಬಾಕೆಗೆ ವಯಸ್ಸು ಸುಮಾರು ಐವತ್ತು ಗಂಡನೇ ಬೇರೆಯವರಿಗೆ ತನ್ನನ್ನು ಕೂಡಿಸಿಕೊಟ್ಟಾಗ ಅಸಹಾಯಕಳಾದಳು. ರೋಗ ಬಂದಾಗ ಚಿಕಿತ್ಸೆಗೆ ಕೂಡ ಕಷ್ಟವಾಗುವ ಪರಿಸ್ಥಿತಿಯಿತ್ತು. ವಯಸ್ಸು ಹೋದ ಮೇಲೆ ಮಕ್ಕಳ ತಿರಸ್ಕಾರಕ್ಕೆ ಒಳಗಾದಳು. ಗಂಡನೇ ಅವರಿಬ್ಬರ ನಡುವೆ ಜಗಳ ತರುತ್ತಿದ್ದ. ಕಡೆಗೆ ತಡೆಯಲಾರದೆ ಹೇಳದೆ ಕೇಳದೆ ಎಲ್ಲಮ್ಮನ ಗುಡ್ಡಸೇರಿಕೊಂಡಳು.

'' ಈಗ ನಾನುಂಟು ಆಕೀ ಉಂಟು. ಆಕೀನೆ ನನಗ ಧಣಿ' ಎಂದು ಹೇಳುವಾಗ ನೆರಿಗೆ ಮಾಡುತ್ತಿದ್ದ ಅವಳ ಮುಖದಲ್ಲಿ ಶಾಂತಿಯಿತ್ತು.

ಇದೆಲ್ಲದಕ್ಕಿಂತ ಭಿನ್ನವಾದ ಒಂದು ದೃಶ್ಯ ಕಣ್ಣಿಗೆ ಬಿತ್ತು. ಒಂದು ವ್ಯಕ್ತಿ ಕೊರಳಲ್ಲಿ ರುದ್ರಾಕ್ಷಿ ಧರಿಸಿ ಕೈಯಲ್ಲಿ ಹಸಿರು ಬಳೆ ಹಾಕಿ ಕೈಯಲ್ಲಿ ಸಣ್ಣ ಬಿದಿರಿನ ತಟ್ಟೆ ಇಟ್ಟುಕೊಂಡಿತ್ತು. ಬಹುಶಃ ಗೊಂದಲಿಗರ ಪದ ಹಾಡುವವನಿರಬೇಕೆಂದು ಮಾತನಾಡಿಸಿದರೆ ತನ್ನ ಹೆಸರು ' ಏಕಲವ್ಯ" ಎಂದೂ ಜಾತಿಯಿಂದ ಕ್ಷತ್ರಿಯಳೆಂದೂ ತಿಳಿಸಿ ಅಚ್ಚರಿಯುಂಟು ಮಾಡಿದಳು. ಅಂದರೆ ಜೋಗಪ್ಪರು ಸೀರೆಯುಡುವಂತೆ ಜೋಗಮ್ಮರರು ಅಥವಾ ಜಡಿಬಂದವರು ಗಂಡಿನ ದಿರುಸು ಹಾಕುವುದೂ ಇದೆ ಎಂದಾಯಿತು.



ಅವಳಿಗೆ ಬುದ್ಧಿಭ್ರಂಶವಾಗಿರುವ 'ಮಾರುತಿ' ಎಂಬ ಉಡಾಳ ಮಗನೊರ್ವನಿದ್ದಾನೆ. ಕುಡಿತದ ಚಟ ಹತ್ತಿದ ಅವನಿಗೆ ಅನೈತಿಕ ಸಂಬಂಧಗಳೂ ಇವೆಯಂತೆ. ಅವನನ್ನು ಹದ್ದು ಬಸ್ತಿಗೆ ತರಲು ಎಲ್ಲಮ್ಮನಿಗೆ ಮೊರೆ ಹೊಕ್ಕನೆಂದೂ ತಾಯಿ ಜಡಿಕೊಟ್ಟು, ಕನಸಲ್ಲಿ ಆಗಮಿಸಿ ಗಂಡುಡುಗೆಧರಿಸು' ಎಂದು ಆದೇಶಿಸಿದಳೆಂದೂ ತಿಳಿಸಿದಳು. ಅವಳ ಮಾತುಕಥೆಯ ಮೇಲಿಂದ ಗಂಡ ತೊರೆದು ಹೋದ ಅವಳಿಗೆ ಹಾಗೆ ಕಥೆಕಟ್ಟುವುದು ಅನಿವಾರ್ಯವಾಗಿತ್ತು ಎನಿಸಿದ್ದಿತು.

" ಜನ ನಿಮಗೆ ಹೇಗೆ ನೋಡ್ತಾರೆ'' ಎಂದರೆ'' ಗಂಡಿನ ಹಾಗೇ'' ಎಂದಳು. ಸಿನಿಮಾಮಂದಿರದಲ್ಲಿ ಗಂಡಸರ ಬುಕಿಂಗ್ ಕೌಂಟರ್‌ನಲ್ಲಿ ಟಿಕೇಟು ಖರೀದಿಸುವುದಾಗಿ ಹೆಮ್ಮೆಯಿಂದ ಹೇಳಿದಳು.

ನೀಲಗುಂದದ ಸವಣೂರ್ ಎಂಬ ಅಡ್ಡಹೆಸರಿನ ಹೆಣ್ಣುಮಗಳೊಬ್ಬಳದು ಬೇರೆಯೇ ಪ್ರಸಂಗ. ಅವಳಿಗೆ ಇದ್ದಕ್ಕಿದ್ದಂತೆ ಪ್ರಜ್ಞೆ ತಪ್ಪತೊಡಗಿತು. ಸುತ್ತಲಿದ್ದ ಜನ ಹೆದರತೊಡಗಿದರು. ಅದು ಮೂರ್ಛೆರೋಗವೆಂಬುದು ಅವಳಿಗೆ ಹೊಳೆಯಲೇ ಇಲ್ಲ. ಆ ಸಮಯದಲ್ಲಿ ತನಗೆ ಒದಗಿದ ಸ್ಥಿತಿ ನಿದ್ರೆಯೋ ಮರಣವೋ ತಿಳಿಯುತ್ತಿರುಲಿಲ್ಲ. ಅದನ್ನು ಆಕೆ ಮತ್ತು ಜನರು ದೇವಿ ಮೈತುಂಬಿದ ಸ್ಥಿತಿ, ಎಂದೇ ವ್ಯಾಖ್ಯಾನಿಸಿದರು.

ಆಕೆ ಆ ಸ್ಥಿತಿಯಲ್ಲಿದ್ದಾಗ ಏನನ್ನೂ ನುಡಿಯುವುದಿಲ್ಲ.

ಆದರೂ ನಾಲ್ಕಾರು ಮಂದಿ ಬಂದು ತೆಂಗಿನಕಾಯಿ ಒಡುದು. ಕರ್ಪೂರ ಹಚ್ಚಿ, ನಿಂಬೇ ಹಣ್ಣಿಟ್ಟು ಹೋಗುತ್ತಾರೆ. ಆಕೆಯ ತಲೆದಸಿಯಲ್ಲಿ ದೀಪದ ಕಂಭವಿದೆ. ಅದರಲ್ಲಿನ ಎಣ್ಣೆ ಖಾಲಿಯಾದಂತೆ ಮತ್ತು ತುಂಬಿಸುವುದು ಪರಿಪಾಠ.

ಆಕೆಗೆ 'ಜಡಿ' ಕೂಡ ಇದೆ

' ನೀನೇಕೆ ಕೂದಲು ಶುಚಿಮಾಡಿ ಸರಿಯಾಗಿರಿಸಿಕೊಳ್ಳಬಾರದು' ಎಂಬ ಪ್ರಶ್ನೆಗೆ ಹೆದರಿಕೆ ಪ್ರಕಟಿಸುತ್ತ ' ಎಲ್ಲಾದರೂ ಉಂಟೆ .. ಅವ್ವಾ..... ಎಲ್ಲವ್ವ ಜಲುಮಕ್ಕೇ ಬರ್ತಾಳೆ..' ಎಂದಳು.

' ಒಂದು ವೇಳೆ ಲಗ್ನವಾದನಂತರ ಹೀಗಾದರೆ ಏನು ಮಾಡುತ್ತೀ ' ಎಂದಿದ್ದಕ್ಕೆ.

ಲಗ್ನವಾದರೂ ಅಷ್ಟೆ ಎಲ್ಲಾನೂ ಬಿಡಬೇಡ್ರಿ ಆಕೀ ಹಿಂದ ಓಡಬೇಕ್ರಿ ಕಡೀತನ ಉಳ್ಳೊದು ಆಕೀನೆ ಹೌದಲ್ಲರಿ' ಎಂದು ಮರು ಪ್ರಶ್ನಿಸಿದಳು.

ಇನ್ನು ನಾಯಕ ಜನಾಂಗಕ್ಕೆ ಸೇರಿದ ' ಕರೆವ್ವ'ಎಂಬಾಕೆಯ ಪರಿಸ್ಥಿತಿ ಬೇರೆ. ಚಂದ್ರಗುತ್ತಿಯ ' ಗುತ್ತೆವ್ವ' ಅಥವಾ ' ರೇಣುಕೆ' ಗೆ ನಡೆದುಕೊಳ್ಳುವ ಜೋಗತಿ ಆಕೆ.

ಆಕೆಗೆ ಮದುವೆಯಾಗಿ ಮಕ್ಕಳಿದ್ದಾರೆ. ಆದರೆ ಇದ್ದಕ್ಕಿದಂತೆ ಬೆಚ್ಚಿಬಿದ್ದಂತಾಗುವುದು ದುಃಸ್ವಪ್ನ ಕಾಣೋದು. ಎಲ್ಲಮ್ಮನಲ್ಲಿ ಸರ್ವ ಸಮರ್ಪಣ ಭಾವವಿದೆ ಆಕೆಗೆ. ಗಂಡನೊಂದಿಗಿನ ಲೈಂಗಿಕ ಬದುಕಿನ ಬಗ್ಗೆ ವಿಚಾರಿಸಿದಾಗ ಆಕೆಗೆ ಲೈಂಗಿಕ ಚಟುವಟಿಕೆ ಬಗೆಗೇ ಜಿಗುಪ್ಸೆ ಮೂಡಿರುವುದು ಸ್ಪಷ್ಟವಾಯಿತು. ಕಾರಣ. ಗಂಡನಿಗೆ ಲೈಂಗಿಕ

ವ್ಯಾಧಿಯಿದೆ. ಆತನ ಸಾಮಿಪ್ಯವೇ ಆಕೆಗೆ ಅಸಹನೀಯವಾಗಿರುವುದು ಇಡೀ ಕಾರಣದಿಂದ ಒಲ್ಲೆ ಎಂದರೆ ಮೈಮುರಿದ ಹೊಡೆತ ಬೇರೆ.

ಮತ್ತೊಂದು ಪ್ರಸಂಗದಲ್ಲಿ ಗಂಗವ್ವ ಹಿರೇಹೊಳಿ ಎಂಬಾಕೆಗೆ ಕುಷ್ಠ ಬಂತು. ಆಗ ಅದು ಅಭಿಶಾಪ ಹಾಗೂ ವಾಸಿಯಾಗಲಾರದ ವ್ಯಾಧಿ ಎಂಬ ನಂಬಿಕೆಯಿದ್ದುದರಿಂದ ಊರವರು ಆಕೆಯನ್ನು ತಿರಸ್ಕರಿಸಿದರು. ಅತ್ತೆ ಮಾವಂದಿರು ಮನೆಬಿಟ್ಟು ಹೊರಗೆ ಹಾಕಿದರು. ಗಂಡ ಒಳ್ಳೆಯವನಿದ್ದ ಆದರೆ ದುಡಿಯದೇ ಸೋಮಾರಿಯಾದ ಅವನ ಮಾತಿಗೆ ಯಾರೂ ಕಿಮ್ಮತ್ತು ಕೊಡಲಿಲ್ಲ. ಥಕ್ಕನೆ ಅವಳಿಗೆ ಎಲ್ಲಮ್ಮನ ಗುಡ್ಡದ ನೆನಪಾಯಿತು. ಒಂದಿಷ್ಟು ಹಣ ಹೊಂದಿಸಿಕೊಂಡು ಬಸ್ಸು ಹತ್ತಿದಳು. ಅಲ್ಲಿ ತನ್ನಂತೆಯೇ ಇರುವ ಚರ್ಮ ರೋಗಿಗಳ ಕೂಡ ಸಂಪರ್ಕ ಬೆಳಿಸಿದಳು. ಜಾತ್ರೆ ಸಮಯದಲ್ಲಿ ಒಂದೆಡೆ ಕೂತು ಚೌಕ ಹಾಸಿದರೆ ಚಿಲ್ಲರೆ ಕಾಸೇಕೆ ರೂಪಾಯಿಗಳೂ ಬೀಳುತ್ತವೆ. ಇನ್ನೂ ಮಧ್ಯ ವಯಸ್ಸು ದಾಟಿದ ಆಕೆಯ ಉಪ ಜೀವನ ಹೀಗೆ. ಜಾತ್ರೆಯ ಸಮಯದಲ್ಲಿ ಸಾಮಾನ್ಯ ಗೃಹಸ್ಥರ ಮನೆಯೊಂದಕ್ಕೆ ಭೇಟಿ ನೀಡಿದಾಗ ಅಲ್ಲೂ ಅವರ ಬಂಧುಗಳು ಮುಂತಾದವರು ಇದ್ದುದುಕಂಡಿತು. ಮೇಲ್ಜಾತಿಗೆ ಸೇರಿದ ಅವರ ಮನೆಯಲ್ಲೂ ಎಲ್ಲಮ್ಮನ ಆರಾಧನೆ ಸಂಭ್ರಮದಿಂದಲೇ ನಡೆದಿತ್ತು. ಆದರೆ ಮುತ್ತು ಹಾಕಿಕೊಳ್ಳುವ ಸಂಪ್ರದಾಯದವರಲ್ಲ ಅವರು ಹರಕೆ ಮಾಡಿಕೊಂಡು ಸಲ್ಲಿಸುತ್ತಾರೆ. ಒಮ್ಮೆ ಯಾರಿಗೋ ಕಿವಿಯ ತೊಂದರೆ ಬಂದಾಗ ಬೆಳ್ಳಿಯ ಕಿವಿ ಮಾಡಿಸಿ ದೇವಿಗೆ ಅರ್ಪಿಸಿದ್ದಿದೆ. ಅವರ ಮನೆತನದಲ್ಲಿ ಯಾರಿಗೂ ಜಡಿ ಬಂದಿಲ್ಲ.

ಈ ಸಂದರ್ಶನಗಳನ್ನು ಮಾಡಿದ ನಂತರರ ಅಂಶಗಳನ್ನು ಗುರ್ತಿಸಲಾಯಿತು ಅವನ್ನೀಗ ನೋಡಬಹುದು:

(೧) ಸಾಂಪ್ರದಾಯಿಕವಾಗಿ ವಿಚಾರ ಮಾಡಿದರೆ ಪ್ರತಿ ದೇವದಾಸಿಯೂ ಶಕ್ತಿದೇವತೆಯೊಂದಿಗಿನ ಸಂಪರ್ಕದಿಂದ ಶಕ್ತಿ ವೃದ್ಧಿ ಮಾಡಿಕೊಳ್ಳುತ್ತಾಳೆ ಎಂಬ ನಂಬಿಕೆ ವ್ಯಾಪಕವಾಗಿರುವುದು ಕಾಣುತ್ತದೆ. ಇದು ದೇವಿಯೊಂದಿಗೆ ಅವರರು ಹೊಂದಬಯಸುವ ತಾದ್ಯಾತ್ಮದ ಸಂಕೇತ.

(೨) ಸದ್ಯೋಜಾತ ಶಿವಾಚಾರ್ಯರು ವರ್ಣಿಸಿರುವಂತೆ ರುದ್ರಗಣಿಕೆ ಹಾಗೂ ರುದ್ರಕನ್ನಿಕೆಯರ ಉಲ್ಲೇಖದ 'ಜೋಗತಿ' ರೀತಿಯನ್ನು ಹೋಲುತ್ತವೆ. ರುದ್ರಗಣಿಕೆ ಲಿಂಗಧರಿಸುತ್ತಾಳೆ. ರುದ್ರಕನ್ನಿಗೆ ಭಸ್ಮದ ಬೊಟ್ಟಿಡುತ್ತಾಳೆ. ಅದು ಶಿವನ ಆತ್ಮವೇ ಎಂದು ಆತ ಬಣ್ಣಿಸುತ್ತಾನೆ. ಹಾಗೇ ಮುಂದು ವರೆಯುತ್ತ ರುದ್ರಗಣಿಕೆ ಯಾವ ಗಂಡಿನೊಂದಿಗಾದರೂ ಸಂಪರ್ಕ ಹೊಂದ ಬಯಸಿದರೆ ತನ್ನ ಕೊರಳಲ್ಲಿರುವ ಶಿವನ ಹೆಸರಿನ ಮಂಗಲಸೂತ್ರವನ್ನು ತೆಗೆಯಬೇಕು ಅಲ್ಲದೆ ತಾನು ವಿಧವೆಯೆಂದು ಘೋಷಿಸಬೇಕು. ಇದನ್ನು ಎಲ್ಲಮ್ಮ ಸಂಪ್ರದಾಯವೂ ಪಾಲಿಸಿದಂತೆ ಕಾಣುತ್ತದಾದರೂ ಎಲ್ಲಮ್ಮನ ಹೆಸರಿನ 'ಮುತ್ತು' ತ್ಯಾಜ್ಯವೇನೂ ಆಗುವುದಿಲ್ಲ.

(೩) ಚೌಡಿಕೆ ನುಡಿಸುತ್ತ ಸೊಗಸಾಗಿ ಹಾಡಬಲ್ಲ ಜೋಗತಿಯರಿಗೆ ಅವರ ಕಲೆಯನ್ನು ಗುರ್ತಿಸಿ ಅಭಿನಂದಿಸುವ ಸೂಕ್ತ ವೇದಿಕೆ ಸಿಗದಿರುವುದು. ( ಇದನ್ನು ಸಂಸ್ಕೃತಿ ಇಲಾಖೆ ಹಾಗೂ ಜಾನಪದ ಅಕಾಡೆಮಿ ಗುರ್ತಿಸಿ ಪ್ರೋತ್ಸಾಹಿಸಬೇಕು)



(೪) ಸ್ತ್ರೀಯರಿಗೆ ಸರಿಯಾದ ಶಿಕ್ಷಣ ದೊರಕದಿರುವುದು ಅಂಧಶ್ರದ್ಧೆಯ ಪಾಲನೆಗೆ ಮೂಲವಾಗಿದೆ. ಬುದ್ಧಿಜೀವಿಗಳಿಗೆ ಈ ಎಲ್ಲ ಆಚರಣೆ, ವಿಧಿಗಳ ಬಗ್ಗೆ ಜಿಗುಪ್ಸೆ ಬಂದರೆ ಸಾಲದು- ತಮ್ಮ ಪರಿಸರದ ಬಗ್ಗೆ ಉಸಿರುಕಟ್ಟಿಸುವ ವಾತಾವರಣದ ಬಗ್ಗೆ ಜೋಗತಿಯರಿಗೆ ತಿರಸ್ಕಾರ ಹುಟ್ಟಬೇಕು. ಸದ್ಯ ಅಂಥ ಪರಿಸ್ಥಿತಿ ಇಲ್ಲ.

(೫) ಸ್ತ್ರೀ ವಿಮೋಚನಾ ವಾದಿಗಳು ಮಹಿಳಾ ಸಂಘಟನೆಗಳು ಈ ಬಗ್ಗೆ ಲಕ್ಷ್ಯ ಹೆಚ್ಚಾಗಿ ಹರಿಸಿಲ್ಲ. ವಿದೇಶೀಯರಿಗೆ ದೇವದಾಸೀ ಪದ್ಧತಿಯ ಬಗೆಗಿರುವಷ್ಟು ಕಾಳಜಿಯ ಕಾಲಂಶವೂ ನಮಗಿಲ್ಲವೆಂಬುದು ಶೋಚನೀಯ ಸಂಗತಿ.

(೬) ಅಧ್ಯಯನದಿಂದ ತಿಳಿದ ಸಂಗತಿಯೇನಂದರೆ ಜೋಗತಿಯರೆಲ್ಲ ಕುರುಬ, ವಾಲ್ಮೀಕಿ, ಮಡಿವಾಳ, ನಾಯಕ ಹಾಗೂ ಹರಿಜನ ಕೋಮಿನವರು.

(೭) ಯಾವ ದೇವದಾಸಿಯೂ ಜೋಗತಿಯೂ ಸ್ವಯಿಚ್ಛೆಯಿಲ್ಲದೆ ಧೀಕ್ಷೆ ತೆಗೆದುಕೊಂಡಿಲ್ಲ. ಪ್ರತಿ ನಿದರ್ಶನದಲ್ಲೂ ಸ್ವಯಂ ತೀರ್ಮಾನದಿಂದಲೇ ತನ್ನನ್ನು ದೇವಿಗೆ ಅರ್ಪಿಸಿಕೊಂಡ ಧೋರಣೆ ಸ್ಪಷ್ಟವಾಗಿದೆ.

(೮) ಎಲ್ಲಮ್ಮನ ಪೂಜಾರಿಗಳೂ ಸ್ವತಂತ್ರರಲ್ಲ ವಯಸ್ಸಾದ ಜೋಗತಿಯರ ಮಾರ್ಗದರ್ಶನ ಅವರಿಗೆ ಅಗತ್ಯವಾಗಿಬೇಕು. ರಾಜಕೀಯ ವ್ಯಕ್ತಿಗಳ ಒತ್ತಾಸೆಯೊಡನೆ ' ಮುತ್ತು ಹೊರಿಸುವ' ಕ್ರಿಯೆ ನಿರಾತಂಕವಾಗಿ ನಡೆದಿದೆ.

(೯) ಜೋಗತಿ, ದೇವದಾಸಿ, ಹಾಗೂ ವೇಶ್ಯೆಯರಿಗಿರುವ ವ್ಯತ್ಯಾಸ ತುಂಬ ಕ್ವಚಿತ್ತಾದುದು. ಕೆಲವರಂತೂ ಜೋಗತಿ ಜೀವನ ವಿಧಾನವನ್ನು ಆಚರಿಸಲಾರದವರಾದ್ದರಿಂದ ವೇಶ್ಯಾವೃತ್ತಿ ಸುಲಭವೆಂದು ಅದನ್ನೇ ಅಪ್ಪಿದ್ದಾರೆ.

(೧೦) ದೇವದಾಸಿಯರಿಗೆ, ಜೋಗತಿಯರಿಗಿರುವ ಒಂದು ಅನುಕೂಲವೆಂದರೆ ಅವರು ವೇಶ್ಯೆಯರಂತೆ ಪೋಲೀಸರಿಗೆ ಹೆದರಬೇಕಿಲ್ಲ. ಅವರ ಧಾರ್ಮಿಕ ಆಚರಣೆಗಳು ರಕ್ಷೆಯಾಗಿದೆ.

(೧೧) ಪರಂಪರಾಗತವಾಗಿ ದೇವಿಗೆ ಬಿಡುತ್ತಿದ್ದ ಪದ್ಧತಿ ಮುಂದುವರೆದೇ ಇದೆ. ಇದು ಭಕ್ತಿಗಿಂತ ಭೀತಿ ಮೂಲವಾದದ್ದು ಎಂದು ಬೇರೆ ಹೇಳಬೇಕಿಲ್ಲ ಸಮೂಹ ಮಾಧ್ಯಮ ಮಂಗಳವಾರ ಶುಕ್ರವಾರವೇ ಯಾಕೆ ಎಲ್ಲಮ್ಮನ ಹಾಡುಗಳನ್ನು ಹಾಕುತ್ತರೋ ಗೊತ್ತಿಲ್ಲ. ಭಾರತ ಹುಣ್ಣಿಮೆ ಬಗ್ಗೆ ವರದಿ ಮಾಡುವುದು, ಸರಿಯಾದ ಅಂಕಿಅಂಶಗಳನ್ನು ಪ್ರಕಟಿಸದೆ ಸುದ್ದಿಯನ್ನು ಅತಿರಂಜಿತಗೊಳಿಸಿ ಪ್ರಕಟಿಸುವುದು ಇವೂ ಕೂಡ ಪ್ರತಿಕೂಲ ಪರಿಣಾಮಗಳನ್ನೇ ಉಂಟು ಮಾಡಬಹುದು.

ಒಟ್ಟಿನಲ್ಲಿ ಜಾತ್ರೆಯ ವರ್ಣರಂಜಿತ ಜಗತ್ತಿನ ಕೆಳಗೆ ನೆಲಮನೆ ಚಟುವಟಿಕೆಗಳು ನಡೆಯುತ್ತಿರುವ ವಾಸ್ತವಕ್ಕೆ ಸರ್ಕಾರ ಕುರುಡಾಗಬಾರದು. ಸ್ವಯಂ ಸೇವಾ ಸಂಸ್ಥೆಗಳ ಕೆಲಸಗಳನ್ನು ಸರ್ಕಾರವೇ ಕೈಗೆತ್ತಿಕೊಂಡರೆ ಜನರಲ್ಲಿ ತಿಳಿವಳಿಕೆ ಜಾಗರಿಸಬಹುದು.

* * * * *

ಜಾತ್ರೆಗಳು ನಮ್ಮ ಸಂಸ್ಕೃತಿಕ ಪರಂಪರೆಯ ಪ್ರಮುಖ ದಾಖಲೆಗಳು. ಗ್ರಾಮೀಣ ಬದುಕಿನ ಜೀವಂತ ನಾಡಿಮಿಡಿತಗಳು. ಸಾಮಾಜಿಕ, ಧಾರ್ಮಿಕ ಹಾಗೂ ಕಲಾತ್ಮಕ ಬದುಕಿನ ಜೀವಸತ್ವ ಅಲ್ಲಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣಬಹುದು. ಜಾತ್ರೆ ಕೇವಲ ಜನ-ದನಗಳ, ವ್ಯಾಪಾರ-ವಹಿವಾಟುಗಳ, ಕೇಂದ್ರವಷ್ಟೇ ಅಲ್ಲ; ಅದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗಮ. ಒಂದೊಂದು ಜಾತ್ರೆಯೂ, ಒಂದೊಂದು ಗ್ರಾಮದ, ಗ್ರಾಮದೇವತೆಯ ಹಿನ್ನೆಲೆಯನ್ನೂ, ಅದರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನೂ ಒಳಗೊಂಡಿರುತ್ತದೆ. ಒಂದು ಜಾತ್ರೆಯ ತಲಸ್ಪರ್ಶಿಯಾದ ಅಧ್ಯಯನವೆಂದರೆ, ಅದೊಂದು ಸಂಸ್ಕೃತಿಯ ಅಧ್ಯಯನವಿದ್ದಂತೆ. ಅದರ ಹುಟ್ಟು, ಬೆಳವಣಿಗೆ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳು, - ಇವೆಲ್ಲವನ್ನೂ ಮೈಗೂಡಿಸಿಕೊಂಡಿರುತ್ತದೆ. ಜಾತ್ರೆಗಳು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ, ಸಾಮಾಜಿಕ ಮಹತ್ವವನ್ನೂ ಪಡೆದುಕೊಂಡಿವೆ. ಅವು ಅಂದಿನಿಂದ ಇಂದಿನವರೆವಿಗೂ ಅಷ್ಟೇ ಮಹತ್ವವನ್ನು ಉಳಿಸಿಕೊಂಡು ಬಂದಿರುವುದರ ಹಿನ್ನೆಲೆಯೇ ಇದಾಗಿದೆ.